10 January 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನವು ಒಂದು
ದೇವಸ್ಥಾನದಂತೆ, ಅಲ್ಲಿ ನಮಗೆ
ಸಿಕ್ಕಿರುವ ಸದಾವಕಾಶವನ್ನು
ಪ್ರಸಾದದಂತೆ ಸ್ವೀಕರಿಸಬೇಕು!
-ಸ್ನೇಹಾ ಆನಂದ್

info.varthaman@gmail.com

**ಒಂದೊಳ್ಳೆ ಮಾತು**

ಬಳಸಿಕೊಂಡವರನ್ನು
ಮರೆತು ಬಿಡಬೇಕು
ಆದರೆ ಬೆಳೆಸಿದವರನ್ನು
ಯಾವತ್ತೂ
ಮರೆಯಬಾರದು.
ಮೈಲಾರ ಸಾವಿತ್ರಿಬಾಯಿ

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 74 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಆರ್ಥಿಕ ಸಬಲತೆ ಸಾಧಿಸುವ ಆಧುನಿಕತೆ ಭರದಲ್ಲಿ ಆರೋಗ್ಯ ನಷ್ಟ

## ಮೂರು ದಿನಗಳ ದೇಸಿ ಎಣ್ಣೆ ಮೇಳಕ್ಕೆ ಸಂಸದ ಯದುವೀರ್ ಒಡೆಯರ್ ಚಾಲನೆ

**ಮೈಸೂರು:** ನಗರದಲ್ಲಿ ದೇಸಿ ಎಣ್ಣೆ ಮೇಳಕ್ಕೆ ಸಂಸದ ಯದುವೀರ್ ಒಡೆಯರ್ ಎತ್ತಿನ ಗಾಣ ಸುತ್ತು ಹಾಕಿಸುವ ಮೂಲಕ ವಿಭಿನ್ನವಾಗಿ ಚಾಲನೆ ನೀಡಿದರು.

ನಗರದ ನಗರದ ನಂಜರಾಜ ಬಹದ್ದೂರು ಛತ್ರದಲ್ಲಿ ಸಹಜ ಸಮೃದ್ಧ ಮತ್ತು ದೇಸಿರಿ ನ್ಯಾಚುರಲ್ಸ್ ಆಶ್ರಯದಲ್ಲಿ ಆಯೋಜಿಸಿರುವ ಮೂರು ದಿನಗಳ ದೇಸಿ ಎಣ್ಣೆ ಮೇಳಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ನಂತರ ಮಾತನಾಡಿದ ಅವರು, ಸಾಂಪ್ರದಾಯಿಕವಾಗಿ ಉತ್ಪಾದನೆಯಾಗುತ್ತಿದ್ದ ದೇಸಿ ಗಾಣದ ಎಣ್ಣೆ ನಮ್ಮ ಹಿರಿಯರ ಆರೋಗ್ಯವನ್ನು ಕಾಪಾಡಿತ್ತು. ಜನರಿಗೆ ಗಾಣದ ಎಣ್ಣೆಯ ಪೋಷಕಾಂಶಗಳ ಪ್ರಯೋಜನಗಳ ಬಗ್ಗೆ ತಿಳಿಸುವಂತೆ ಅವರು ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ ಅಧಿಕಾರಿಗಳಿಗೆ ಮನವಿ ಮಾಡಿದರು.

ಪ್ರಸ್ತುತ ಎಲ್ಲರಿಗೂ ಆಹಾರ ಸಿಗುತ್ತಿದೆ. ಆದರೆ ಪೌಷ್ಟಿಕ ಆಹಾರ ಸಿಗುತ್ತಿಲ್ಲ. ಆರ್ಥಿಕ ಸಬಲತೆ ಸಾಧಿಸುವ ಭರದಲ್ಲಿ ಆರೋಗ್ಯ ಕಳೆದುಕೊಳ್ಳುತ್ತಿದ್ದೇವೆ. ಸಾಂಪ್ರದಾಯಿಕ ಆಹಾರಗಳನ್ನು ಬಳಸುವ ಮೂಲಕ ಆರೋಗ್ಯವನ್ನು ಗಳಿಸಿಕೊಳ್ಳಬೇಕಾಗಿದೆ. ಗಾಣದ ಎಣ್ಣೆ ಬಳಕೆ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಬೇಕು ಎಂದು ಕರೆ ನೀಡಿದರು.



ದೇಸಿ ಎಣ್ಣೆ ಮೇಳದ ಸಾನಿಧ್ಯ ವಹಿಸಿದ್ದ ಶ್ರೀ ಮಂಟೇಸ್ವಾಮಿ ಮಠದ ಶ್ರೀಕಂಠ ಸಿದ್ಧಲಿಂಗರಾಜೇ ಅರಸ್ ಮಾತನಾಡಿ, ಗಾಣದ ಎಣ್ಣೆಗಳು ಸ್ಥಳೀಯ ಆಹಾರ ಸಂಸ್ಕೃತಿಗೆ ಪೂರಕವಾಗಿವೆ. ಇವುಗಳ ಬಳಕೆಯಿಂದ ರೈತರ ಜೀವನ ಮಟ್ಟ ಸುಧಾರಿಸುತ್ತದೆ, ಸ್ಥಳೀಯರಿಗೆ ಉದ್ಯೋಗ ಲಭಿಸುತ್ತದೆ. ದೇಸಿರಿ ನ್ಯಾಚುರಲ್ಸ್ ಗಾಣದ ಗುಣಮಟ್ಟದ ಎಣ್ಣೆಗಳನ್ನು ಉತ್ಪಾದಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಸಿಎಫ್ ಟಿಆರ್ ಐ ನಿರ್ದೇಶಕ ಡಾ.ಗಿರಿಧರ್ ಪಾರ್ವತಮಂ ದೇಸಿರಿ ನ್ಯಾಚುರಲ್ಸ್ ಅಭಿವೃದ್ಧಿಪಡಿಸಿರುವ ಎಣ್ಣೆಯ ಗುಣಮಟ್ಟ ಮತ್ತು ಅದರ ವಿವರಗಳನ್ನು ನೀಡುವ ಕ್ಯೂಆರ್ ಕೋಡ್ ಇರುವ ಎಣ್ಣೆಯ ಬಾಟಲ್ ಬಿಡುಗಡೆ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಗಾಣದ ಎಣ್ಣೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದಾಗ್ಯೂ ದೇಶಿಯ ಮಾರುಕಟ್ಟೆ ಬೇಡಿಕೆಯ ಶೇಕಡ 45ರಷ್ಟು ಖಾದ್ಯ ತೈಲ ಮಾತ್ರ ಉತ್ಪಾದನೆಯಾಗುತ್ತಿದೆ. 16.5 ಮಿಲಿಯ ಟನ್ ಖಾದ್ಯ ತೈಲ ಹೊರದೇಶಗಳಿಂದ ಆಮದಾಗುತ್ತಿದೆ. ರೈತ ಗುಂಪುಗಳು, ಮಹಿಳಾ ಸಂಘಗಳು ಈ ಅವಕಾಶವನ್ನು ಬಳಸಿಕೊಂಡು ಸ್ಥಳೀಯವಾಗಿ ಎಣ್ಣೆ ಉತ್ಪಾದನೆ ಮಾಡಿ ಲಾಭಗಳಿಸಬಹುದು ಎಂದರು.

ಡಾ.ಖಾದರ್ ವಲಿ ಅನ್ನ ಆರೋಗ್ಯದ ವಿಶೇಷ ಉಪನ್ಯಾಸ ನೀಡಿದರು. ಪ್ರಿಸಿಷನ್ ಮೆಡಿಸಿನ್ ವಿಜ್ಞಾನಿ ಡಾ.ಮಮತ ಶೇಖರ್, ರೋಟೇರಿಯನ್ ಡಿ.ರವಿಶಂಕರ್, ಸಹಜ ಸಮೃದ್ಧ ನಿರ್ದೇಶಕ ಜಿ.ಕೃಷ್ಣ ಪ್ರಸಾದ್ ಮಾತನಾಡಿದರು.

### 50 ಬಗೆ ಎಣ್ಣೆ ಪ್ರದರ್ಶನ

ದೇಸಿ ಎಣ್ಣೆ ಮೇಳದಲ್ಲಿ ಸಾಂಪ್ರದಾಯಿಕವಾಗಿ ಬಳಕೆಯಲ್ಲಿದ್ದ 50 ಬಗೆ ಎಣ್ಣೆಗಳ ಪ್ರದರ್ಶನ ಮತ್ತು ಮಾಹಿತಿ ನೀಡಲಾಗಿದೆ. ಎತ್ತಿನ ಗಾಣದ ಎಣ್ಣೆಯ ಉತ್ಪಾದನೆಯನ್ನು ಪ್ರಾಯೋಗಿಕವಾಗಿ ನೋಡಬಹುದು. ಸ್ಥಳದಲ್ಲೇ ಹರಳು ಬೇಯಿಸಿ ಎಣ್ಣೆ ತೆಗೆಯುವ ಪ್ರಾತ್ಯಕ್ಷಿಕೆಯನ್ನು ನೀಡಿದ್ದು ಗಮನ ಸೆಳೆಯಿತು. ಜತೆಗೆ ಸಿಎಫ್ ಟಿ ಆರ್ ಐ ವಿಜ್ಞಾನಿಗಳು ಕಲಬೆರಕೆ ಎಣ್ಣೆಯನ್ನು ಪತ್ತೆ ಹಚ್ಚುವ ವಿಧಾನವನ್ನು ತೋರಿಸಿದರು. ಜೆಎಸ್ಎಸ್ ಆಯುರ್ವೇದ ಮಹಾವಿದ್ಯಾಲಯ ವೈದ್ಯರು ಸಲಹೆ ನೀಡಿದರು. 52 ಮಳಿಗೆಗಳಲ್ಲಿ ಸಾವಯವ ಉತ್ಪನ್ನ, ಮೌಲ್ಯವರ್ಧಿತ ಪದಾರ್ಥಗಳು, ಬೀಜ, ಹಣ್ಣಿನ ಗಿಡ ಮತ್ತು ಸಹಜ ಸೌಂದರ್ಯವರ್ಧಕಗಳು ಮಾರಾಟಕ್ಕೆ ಇಡಲಾಗಿದೆ.

# ತಾರಕಕ್ಕೆ ಡಿಕೆಶಿ–ಎಚ್‌ಡಿಕೆ ಗುದ್ದಾಟ

## ಆಡಳಿತ ಅನುಭವದ ಚರ್ಚೆಗೆ ಬನ್ನಿ । ಕುಮಾರಸ್ವಾಮಿ ಸವಾಲು

**ಬೆಂಗಳೂರು:** ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನಡುವಿನ ಗುದ್ದಾಟ ತಾರಕಕ್ಕೆ ಹೋಗಿದೆ. ನಮ್ಮ ಪಕ್ಷಗಳ ವಿಲೀನದ ಚಿಂತೆ ಪಕ್ಕಕ್ಕಿಡಿ. ನನ್ನ, ನಿಮ್ಮ ಆಡಳಿತಾನುಭವದ ಬಗ್ಗೆ ಮಾತನಾಡೋಣ ಎಂದು ಡಿಕೆಶಿಗೆ ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ಮಾತಾಡಿದ್ದ ಡಿಸಿಎಂ ಡಿಕೆಶಿ, ರಾಜ್ಯದಲ್ಲಿ ಲೆಕ್ಕಕ್ಕೆ 3 ಪಕ್ಷ ಇದೆ. ಆದರೆ ಆಟಕ್ಕೆ ಎರಡೇ ಪಕ್ಷಗಳಿವೆ ಎಂದು ವ್ಯಂಗ್ಯವಾಡಿದ್ದರು. ಇದಕ್ಕೆ ಕುಮಾರಸ್ವಾಮಿ ಅನುಭವದ ಕುರಿತು ತಿರುಗೇಟು ನೀಡಿದ್ದಾರೆ.

ಡಿ.ಕೆ.ಶಿವಕುಮಾರ್ ಅವರೇ, ನಮ್ಮ ವಿಲೀನದ ಚಿಂತೆ ಪಕ್ಕಕ್ಕೆ ಇಡಿ. ನನ್ನ ಮತ್ತು ನಿಮ್ಮ ಆಡಳಿತಾನುಭವದ ಬಗ್ಗೆ ಮಾತನಾಡೋಣ. ನಾನು ಎರಡು ಸಣ್ಣ ಅವಧಿಗೆ ಮುಖ್ಯಮಂತ್ರಿ, ಅಲ್ಪ ಅವಧಿಗೆ ಪ್ರತಿಪಕ್ಷ ನಾಯಕ. ಈಗ ಕೇಂದ್ರ ಮಂತ್ರಿ. ನೀವು ಸುದೀರ್ಘ ಅವಧಿಗೆ ಶಾಸಕ, ಅನೇಕ ಬಾರಿ ಮಂತ್ರಿ. ಈಗ ಮಂತ್ರಿ ಉಪ ಮುಖ್ಯಮಂತ್ರಿ. ನಮ್ಮಿಬ್ಬರ ಆಡಳಿತಾನುಭವದ ಬಗ್ಗೆ ನೀವು ಹೇಳುವುದಲ್ಲ, ಜನರನ್ನೇ ಕೇಳಬೇಕು ಎಂದು ಕುಮಾರಸ್ವಾಮಿ ಟೀಕಿಸಿದ್ದಾರೆ.



### ಖಾತೆ ಒತ್ತುವರಿ ನಿಸ್ಸೀಮರು!

ಕೊಳ್ಳೆ, ಸುಲಿಗೆ, ಬೇಲಿ, ಚದರಡಿ, ಕಮಿಷನ್, ಫಿಕ್ಸಿಂಗ್, ಒದ್ದು ಕಿತ್ತುಕೊಳ್ಳುವುದು ನನ್ನ ಎಕ್ಸ್ ಪೀರಿಯನ್ಸ್ ಅಲ್ಲಾ ಡಿಕೆಶಿರವರೇ. ಏನೋ.. ಜನರ ಆಶೀರ್ವಾದ ಮತ್ತು ದೇವರ ದಯೆಯಿಂದ ಸಿಕ್ಕಿದ ಅವಕಾಶದಲ್ಲಿ ಜನರಿಗೆ ಕೈಲಾದ ಸಹಾಯ ಮಾಡುವ ಹುಲು ರಾಜಕಾರಣಿ ನಾನಷ್ಟೇ. ನಿಮಗೆ ಸಿದ್ಧಿಸಿರುವ ಅಂತಹ ಭಾರೀ ಅನುಭವ ನನಗಿಲ್ಲ. ವಿನಮ್ರವಾಗಿ ಒಪ್ಪಿಕೊಳ್ಳುವೆ ಎಂದು ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ನಿಮಗೆ ಭೂ ಕಬ್ಜ, ಒತ್ತುವರಿ ಕರತಲಾಮಲಕ. ಅದೇ ರೀತಿ ಮತ್ತೊಬ್ಬ ಸಚಿವರ ಖಾತೆಯನ್ನು

### ಡಿಕೆಶಿ ಹಸ್ತಕ್ಷೇಪ ಮಾಡಿಲ್ಲ: ಡಾ.ಪರಮೇಶ್ವರ್ ಸಮರ್ಥನೆ

**ಬೆಂಗಳೂರು:** ಗೃಹ ಇಲಾಖೆ ಕಾರ್ಯನಿರ್ವಹಣೆಯಲ್ಲಿ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪ ಮಾಡಿದ್ದಾರೆ ಎಂಬ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಕ್ಕೆ ಸಚಿವ ಜಿ.ಪರಮೇಶ್ವರ ಶುಕ್ರವಾರ ತಿರುಗೇಟು ನೀಡಿದ್ದಾರೆ.



ಬಳ್ಳಾರಿ ಘರ್ಷಣೆಗೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಶಿವಕುಮಾರ್ ಅವರ ಅಧಿಕಾರವನ್ನು ಪ್ರಶ್ನಿಸಿದ್ದ ಕುಮಾರಸ್ವಾಮಿ, ಗೃಹ ಇಲಾಖೆಯ ವ್ಯವಹಾರಗಳಲ್ಲಿ ಶಿವಕುಮಾರ್ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಜವಾಬ್ದಾರಿಯುತ ಸಚಿವರು, ಉಪಮುಖ್ಯಮಂತ್ರಿ ಕೂಡ. ಡಿಕೆಶಿ

# ಕನ್ನಡಿಗರ ಹಿತಾಸಕ್ತಿ ರಕ್ಷಣೆಗೆ ಬದ್ಧ

## ಕೇರಳ ಮಸೂದೆ ವಿರುದ್ಧ ರಾಷ್ಟ್ರಪತಿ ಬಳಿಗೆ ನಿಯೋಗ: ತಂಗಡಗಿ

ಬೆಂಗಳೂರು: ಕೇರಳ ಸರ್ಕಾರ ಅಂಗೀಕರಿಸಿರುವ ಮಲಯಾಳಂ ಭಾಷಾ ಮಸೂದೆಯು ಗಡಿ ಪ್ರದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಕಾಸರಗೋಡಿನ ಕನ್ನಡಿಗರ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರಲಿದೆ. ಮಸೂದೆಗೆ ಅನುಮೋದನೆ ನೀಡದಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮನವಿ ಸಲ್ಲಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಶೀಘ್ರವೇ ರಾಷ್ಟ್ರಪತಿ ಬಳಿಗೆ ನಿಯೋಗ ಕೊಂಡೊಯ್ಯಲಾಗುವುದು ಎಂದು ಹೇಳಿದರು.

ಮಲಯಾಳಂ ಭಾಷಾ ಮಸೂದೆಯು ಕೇರಳದ ಗಡಿ ಪ್ರದೇಶಗಳಲ್ಲಿ ವಾಸಿಸುವ ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿದೆ. ಕಾಸರಗೋಡಿನಲ್ಲಿ 7.5 ಲಕ್ಷ ಕನ್ನಡಿಗರಿದ್ದಾರೆ. 210 ಕನ್ನಡ ಮಾಧ್ಯಮ ಶಾಲೆಗಳಿವೆ. ಸಂವಿಧಾನದ 350ಬಿ ವಿಧಿಯ ನಿಬಂಧನೆಗಳ ಅಡಿ, ಕೇರಳ ಸರ್ಕಾರ ಕಳುಹಿಸಿರುವ ಮಸೂದೆಗೆ ಅನುಮೋದನೆ ನೀಡದಂತೆ ರಾಷ್ಟ್ರಪತಿಗಳನ್ನು ಒತ್ತಾಯಿಸುತ್ತೇವೆ ಎಂದರು.

ಈ ಸಂಬಂಧ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಜತೆ ಮಾತುಕತೆ

### ಕೈ ನಾಯಕರು ಕನ್ನಡಿಗರ ಪರವೇ?

**ಮಲಯಾಳಂ ಕಡ್ಡಾಯ ವಿರೋಧಿಸಲಿ: ಆರ್.ಅಶೋಕ್ ಸವಾಲು**

**ಬೆಂಗಳೂರು:** ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಮಲಯಾಳಂ ಕಲಿಕೆ ಕಡ್ಡಾಯ ಮಾಡಿರುವ ಕೇರಳ ಸರ್ಕಾರದ ಪ್ರಸ್ತಾಪಿತ 'ಮಲಯಾಳಿ ಭಾಷಾ ಮಸೂದೆ' ಜಾರಿ ವಿರುದ್ಧ ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ನಾಯಕರು ಧ್ವನಿ ಎತ್ತುತ್ತಾರೆಯೇ? ಕನ್ನಡಿಗರ ಪರ ನಿಲ್ಲುತ್ತಾರಾ?' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸವಾಲು ಹಾಕಿದ್ದಾರೆ.

ಕೇರಳದಲ್ಲಿ ಆನೆ ತುಳಿತಕ್ಕೆ ಒಳಗಾಗಿ ಸತ್ತರೂ, ವಯನಾಡಿನಲ್ಲಿ ಪ್ರಕೃತಿ ವಿಕೋಪ ಉಂಟಾದರೂ, ಮಲಯಾಳಿಗಳ ಪರವಾಗಿ ಕರ್ನಾಟಕ ಸರ್ಕಾರದ ಮೇಲೆ ಸವಾರಿ ಮಾಡುವ ಸಂಸದೆ ಪ್ರಿಯಾಂಕಾ ಗಾಂಧಿ ಅವರು, ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲಿ 1ರಿಂದ 10ನೇ ತರಗತಿಯವರೆಗೆ ಮಲಯಾಳ ಅನ್ನು ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸುವ ಕೇರಳ ಸರ್ಕಾರದ ಮಲಯಾಳಿ ಭಾಷಾ ಮಸೂದೆ–2025ರ ವಿರುದ್ಧ ಧ್ವನಿ ಎತ್ತುವ ಮೂಲಕ ಈಗ ಕನ್ನಡಿಗರ ಪರ ನಿಲ್ಲುತ್ತಾರಾ? ಎಂದು ಪ್ರಶ್ನಿಸಿದರು.

ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧ ತೆರವುಗೊಳಿಸುವ ವಿಷಯದಲ್ಲಿ ಕೇರಳದ ಪರ ತೋರಿದ ಕಾಳಜಿಯನ್ನು ಕಾಂಗ್ರೆಸ್ ನಾಯಕರು ಈಗ ಕನ್ನಡಿಗರ ಪರವಾಗಿ

ಪುಟ 2ಕ್ಕೆ

# ನಂಜದೇವನಪುರದಲ್ಲಿ ಮತ್ತೊಂದು ಹುಲಿ ಪತ್ತೆ!




**ಚಾಮರಾಜನಗರ:** ತಾಲ್ಲೂಕಿನ ನಂಜೇದೇವನಪುರ ಗ್ರಾಮದ ಹೊರವಲಯದ ತೋಟದ ಮುಂದೆ ಶುಕ್ರವಾರ ಮುಂಜಾನೆ ಮತ್ತೊಂದು ಹುಲಿ ಓಡಾಡಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಗ್ರಾಮಸ್ಥರು ಹುಲಿ ಸಂಚಾರ ವೀಕ್ಷಿಸಿ ಭಯಭೀತರಾಗಿದ್ದಾರೆ.

ಗ್ರಾಮದ ಪ್ರಶಾಂತ್ ಮತ್ತು ಕುಮಾರ್ ಎಂಬುವರ ತೋಟದ ಮುಂದೆ ಶುಕ್ರವಾರ ಮುಂಜಾನೆ ಸುಮಾರು 3:30ರ ವೇಳೆಯಲ್ಲಿ

ಪುಟ 2ಕ್ಕೆ

# ಬಿಳಿಗಿರಿರಂಗನ ಬೆಟ್ಟದಲ್ಲಿ ಅಗ್ನಿ ಅವಘಡ: 7 ಅಂಗಡಿಗಳು ಭಸ್ಮ



**ಚಾಮರಾಜನಗರ:** ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳ ಬಿಳಿಗಿರಿರಂಗನ ಬೆಟ್ಟದಲ್ಲಿ ಶುಕ್ರವಾರ ಮುಂಜಾನೆ ಅಗ್ನಿ ಅವಘಡ ಸಂಭವಿಸಿ 7 ಅಂಗಡಿಗಳು ಸುಟ್ಟು ಭಸ್ಮವಾಗಿವೆ. ಯಳಂದೂರು ತಾಲೂಕಿನ ಬಿಳಿಗಿರಿರಂಗನಾಥ ಬೆಟ್ಟದ ಬಸ್ ನಿಲ್ದಾಣದ ಬಳಿ ಹೋಟೇಲ್ ಹಾಗೂ ಅಂಗಡಿಗಳು ಬೆಂಕಿಯ ಕೆನ್ನಾಲಿಗೆಗೆ ಸುಟ್ಟು ಕರಕಲಾಗಿದೆ. ಒಂದು ಅಂಗಡಿಯಿಂದ ಮತ್ತೊಂದು ಅಂಗ ಡಿಗೆ ಬೆಂಕಿ ವ್ಯಾಪಿಸಿ ಧಗಧಗಿಸಿವೆ. ಅಗ್ನಿ ಅವಘಡದಲ್ಲಿ 3ಕ್ಕೂ ಹೆಚ್ಚು ಸಿಲಿಂಡರ್ ಸ್ಫೋಟಗೊಂಡು ಮತ್ತಷ್ಟು ಬೆಂಕಿ ತೀವ್ರತೆ ಹೆಚ್ಚಾಗಿ ಆತಂಕ ಸೃಷ್ಟಿಸಿತ್ತು. ಅಂಗಡಿ, ಹೊಟೇಲ್ ನಲ್ಲಿ ಯಾರೂ ಇರಲಿಲ್ಲ. ಹೀಗಾಗಿ ಯಾವುದೇ ಪ್ರಾಣಹಾನಿ ಯಾಗಿಲ್ಲ. ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಸುಟ್ಟು ಬೂದಿಯಾಗಿವೆ. ಸತತ ಒಂದೂವರೆ ತಾಸು ಕಾರ್ಯಾಚರಣೆ ನಡೆಸಿ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅಥವಾ ಕಿಡಿಗೇಡಿಗಳ ಕೃತ್ಯವೇ ಎಂಬುದು ಇನ್ನೂ ತಿಳಿದಿಲ್ಲ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಭೀಕರ ಅಪಘಾತ: ನಾಲ್ವರು ಅಯ್ಯಪ್ಪ ಭಕ್ತರು ಸಾವು

**ತುಮಕೂರು:** ತಾಲ್ಲೂಕಿನ ಕೋರಾ ಸಮೀಪದ ವಸಂತನರಸಾಪುರ ಕೈಗಾರಿಕಾ ಪ್ರದೇಶದ ಬಳಿ ಭೀಕರ ಅಪಘಾತ ಸಂಭವಿಸಿ ನಾಲ್ವರು ಅಯ್ಯಪ್ಪ ಭಕ್ತರು ಸ್ಥಳದಲ್ಲೇ ಮೃತಪಟ್ಟಿರುವ ದುರ್ಘಟನೆ ಶುಕ್ರವಾರ ಮುಂಜಾನೆ 5 ಗಂಟೆ ಸುಮಾರಿಗೆ ಸಂಭವಿಸಿದೆ.

ನಿಂತಿದ್ದ ಲಾರಿಗೆ ಕ್ರೂಸರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ದುರಂತ ಸಂಭವಿಸಿದೆ. ಕ್ರೂಸರ್‌ನಲ್ಲಿ ಪ್ರಯಾಣಿಸುತ್ತಿದ್ದ ನಾಲ್ವರು ಅಯ್ಯಪ್ಪ ಭಕ್ತರು ಮೃತಪಟ್ಟಿದ್ದಾರೆ. ಮೃತರಲ್ಲಿ ಒಬ್ಬ ಬಾಲಕಿ ಕೂಡ ಸೇರಿದ್ದಾಳೆ. ಅಪಘಾತದಲ್ಲಿ ಇನ್ನೂ ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಅಯ್ಯಪ್ಪ ಮಾಲಾಧಾರಿಗಳು ಮೃತಪಟ್ಟಿರುವುದು ಭಕ್ತರನ್ನು ಬೆಚ್ಚಿಬೀಳಿಸಿದೆ. ಭಕ್ತರಿದ್ದ ಕ್ರೂಸರ್ ವಾಹನ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ನಾಲ್ಕು ಮಂದಿ ಮೃತಪಟ್ಟಿದ್ದಾರೆ. ಮೃತಪಟ್ಟವರು

ಪುಟ 2ಕ್ಕೆ

# 'ಪಿಎಂ ಸೂರ್ಯ ಘರ್' ಜಾರಿಗೆ ನಿರಾಸಕ್ತಿ

## ರಾಜ್ಯ ಸರ್ಕಾರದ ವಿರುದ್ಧ ಸಂಸದ ಯದುವೀರ್ ಒಡೆಯರ್ ಟೀಕೆ

**ಮೈಸೂರು:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಪಿಎಂ ಸೂರ್ಯ ಘರ್ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ನಿರಾಸಕ್ತಿ ತೋರುತ್ತಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಇಂಡಿಯನ್ ಸೋಲಾರ್ ಅಸೋಸಿಯೇಷನ್ ಆಯೋಜಿಸಿದ್ದ ಪಿಎಂ ಸೂರ್ಯ ಘರ್ ಯೋಜನೆ ಕುರಿತ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ದೇಶದ ಸಮಗ್ರ ಆರ್ಥಿಕ ಅಭಿವೃದ್ಧಿಗಾಗಿ ಪೂರಕವಾದ ಯೋಜನೆಗಳನ್ನು ಕೇಂದ್ರ ಸರ್ಕಾರ ರೂಪಿಸುತ್ತಿದೆ. ಈ ನಿಟ್ಟಿನಲ್ಲಿ ನವೀಕರಿಸಬಹುದಾದ ಇಂಧನ ಬಳಕೆಗೆ ಪ್ರೋತ್ಸಾಹ ಕೊಡಬೇಕಾಗಿದೆ. ಮಾಲಿನ್ಯ ಹಾಗೂ ಹವಾಮಾನ ವೈಪರೀತ್ಯ ತಡೆಗೆ ಇಂತಹ ಕ್ರಮಗಳು ಸಹಕಾ ರಿಯಾಗಿವೆ. ಇದಕ್ಕೂ ರಾಜ್ಯದಲ್ಲಿ ನಿರ್ಲಕ್ಷ್ಯ ವಹಿಸುತ್ತಿ ರುವುದು ಸರಿಯಲ್ಲ ಎಂದು ಟೀಕಿಸಿದರು.

2024ರ ಫೆಬ್ರುವರಿಯಲ್ಲಿ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ಘಟಕ ಅಳವಡಿಕೆ ಮಾಡಿಕೊಳ್ಳುವವರಿಗೆ ಕೇಂದ್ರದಿಂದ ಸಹಾಯಧನ ನೀಡಲಾಗುತ್ತದೆ. ವಿದ್ಯುತ್ ಸ್ವಾವಲಂಬನೆಗೆ ಈ ಕ್ರಮ ಸಹಕಾರಿಯಾಗಿದೆ. ಇದರಿಂದ ವಿದ್ಯುತ್ ಬಿಲ್ ಕಡಿಮೆ ಆಗಲಿದೆ ಎಂದು ತಿಳಿಸಿದರು.

ಐಎಸ್ಎ ಅಧ್ಯಕ್ಷ, ಮಾಜಿ ಸಂಸದ



### ದೀರ್ಘಾವಧಿಯೇ ಸಾಧನೆಯಲ್ಲ

ಮೈಸೂರು: ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ದೀರ್ಘಾವಧಿಗೆ ಅಧಿಕಾರದಲ್ಲಿ ಇರುವುದೇ ಸಾಧನೆಯಲ್ಲ. ಕೇಂದ್ರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕು ಎಂದು ಸಿದ್ದರಾಮಯ್ಯ ವಿರುದ್ಧ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಿಡಿಕಾರಿದರು. ಕರ್ನಾಟಕದಲ್ಲಿ ಪಿಎಂ ಸೂರ್ಯ ಘರ್ ಯೋಜನೆ ಕುಂಟುತ್ತಿದೆ. ಇಲ್ಲಿನ ಅಧಿಕಾರಿಗಳು ಸಹಕರಿಸುತ್ತಿಲ್ಲ. ಜನಪ್ರತಿನಿಧಿಗಳು ಆಸಕ್ತಿ ವಹಿಸುತ್ತಿಲ್ಲ. ತಮಿಳುನಾಡು ಹಾಗೂ ಕರ್ನಾಟಕದಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ. ಕರ್ನಾಟಕದಲ್ಲಿ 2 ಲಕ್ಷ ಅರ್ಜಿಗಳು ಬಂದಿದ್ದರೆ, ಅಳವಡಿಕೆಯಾಗಿರುವುದು 10 ಸಾವಿರ ಮಾತ್ರ. ಇಂತಹ ಒಳ್ಳೆಯ ಯೋಜನೆ ಜನರಿಗೆ ತಲುಪುತ್ತಿಲ್ಲ. ರಾಜ್ಯ ಸರ್ಕಾರದ ಅಸಹಕಾರವೇ ಇದಕ್ಕೆ ಕಾರಣ ಎಂದು ಆರೋಪಿಸಿದರು.

ಪುಟ 2ಕ್ಕೆ

# ಗ್ರೇಟರ್ ಮೈಸೂರಿಗೆ 'ಅಸ್ತು'

## ತವರೂರಿಗೆ ಸಂಕ್ರಾಂತಿ ಗಿಫ್ಟ್ ನೀಡಿದ ಸಿಎಂ

## ರಾಜ್ಯಸರ್ಕಾರದಿಂದ ಅಧಿಸೂಚನೆ ಪ್ರಕಟ

### ಮೈಸೂರು ಪಾಲಿಕೆಗೆ 'ಬೃಹತ್ ಮೈಸೂರು ಮಹಾನಗರ ಪಾಲಿಕೆ' ಎಂದು ಮರು ನಾಮಕರಣ




ಬೆಂಗಳೂರು: ಮೈಸೂರು ಮಹಾನಗರ ಪಾಲಿಕೆಗೆ ಬೃಹತ್ ಮೈಸೂರು ಮಹಾನಗರ ಪಾಲಿಕೆ ಎಂದು ಮರು ನಾಮಕರಣ ಮಾಡಲಾಗಿದೆ. ಸಿ ಎಂ ಸಿದ್ದರಾಮಯ್ಯ ನವರ ಕನಸಿನ ಗ್ರೇಟರ್ ಮೈಸೂರುಗೆ ಮಾನ್ಯತೆ ಸಿಕ್ಕಂತಾಗಿದೆ. ಇದು ಮೈಸೂರಿಗರಿಗೆ ಸಿಎಂ ನೀಡಿದ ಸಂಕ್ರಾಂತಿ ಗಿಫ್ಟ್ ಇದಾಗಿದೆ

ಬೃಹತ್ ಮೈಸೂರು ಮಹಾನಗರ ಪಾಲಿಕೆ ಎಂದು ಮರು ನಾಮಕರಣ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪಾಲಿಕೆಯ ವ್ಯಾಪ್ತಿಗೆ ಹೂಟಗಳ್ಳಿ ನಗರಸಭೆ, ಶ್ರೀರಾಮಪುರ, ಕಡಕೊಳ, ರಮ್ಮನಹಳ್ಳಿ ಮತ್ತು ಬೋಗಾದಿ ಪಟ್ಟಣ ಪಂಚಾಯಿತಿಗಳನ್ನು ಸೇರ್ಪಡೆ ಮಾಡಲಾಗಿದೆ

ಚಾಮುಂಡಿ ಬೆಟ್ಟ ಸೇರಿ ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಕೂಡ ಸೇರ್ಪಡೆ ಮಾಡಲಾಗಿದೆ. ಮೈಸೂರು ಪಾಲಿಕೆಯ ಒಟ್ಟು ವಿಸ್ತೀರ್ಣ 341.44 ಕಿ.ಮೀ.ಗೆ ಏರಿಕೆಯಾಗಿದೆ. ಸಲಹೆ ಮತ್ತು ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರಿಗೆ 30 ದಿನಗಳ ಅವಕಾಶ ಕಲ್ಪಿಸಲಾಗಿದೆ.

**ಮೊದಲ ಪುಟದಿಂದ**

## ‘ಪಿಎಂ ಸೂರ್ಯ ಘರ್’ ಜಾರಿಗೆ ನಿರಾಸಕ್ತಿ

ಸಿ.ನರಸಿಂಹನ್ ಮಾತನಾಡಿ, ಮನೆಗಳು, ಕಟ್ಟಡಗಳ ಮೇಲೆ ಸೌರ ವಿದ್ಯುತ್ ಚಾವಣಿ ಹಾಕಿಸಿಕೊಳ್ಳಲು ಎಲ್ಲರನ್ನೂ ಪ್ರೋತ್ಸಾಹಿಸುವ ಕೆಲಸ ಮಾಡಬೇಕಾಗಿದೆ. ಪಿಎಂ ಸೂರ್ಯ ಘರ್ ಯೋಜನೆಯ ಲಾಭವನ್ನು ಜನರು ಪಡೆದುಕೊಳ್ಳುವಂತಾಗಬೇಕು. ರಾಜ್ಯ ಸರ್ಕಾರಗಳು ರಾಜಕೀಯ ಮಾಡದೆ ಅನುಷ್ಠಾನಕ್ಕೆ ಕ್ರಮ ಕೈ ಗೊಳ್ಳಬೇಕು ಎಂದು ಕೋರಿದರು. ಐಎಸ್ಎ ಪದಾಧಿಕಾರಿಗ ಳಾದ ರವೀಂದ್ರನಾಥ ರೆಡ್ಡಿ, ಸಿ.ಬಸವೇಗೌಡ ಇದ್ದರು.

## ನಂಜದೇವನಪುರದಲ್ಲಿ ಮತ್ತೊಂದು ಹುಲಿ ಪತ್ತೆ!

ಹುಲಿ ಹಾದು ಹೋಗಿರುವ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ಕಳೆದ ಡಿಸೆಂಬರ್ ನಲ್ಲಿ ಇದೇ ಜಮೀನಿನ ಮೂಲಕ ತಾಯಿ ಹುಲಿ ಮತ್ತು 4 ಮರಿ ಹುಲಿಗಳು ಸೇರಿದಂತೆ

ಐದು ಹುಲಿಗಳು ಸಂಚರಿಸಿ ನಂಜದೇವನಪುರ ಮತ್ತು ಸುತ್ತಮುತ್ತಲಿನ ಜನರು ಭಯಗೊಂಡಿದ್ದರು.

ತಾಯಿ ಮತ್ತು ಮರಿ ಹುಲಿಗಳನ್ನು ಸೆರೆ ಹಿಡಿಯಲು ಆನೆಗಳನ್ನು ತರಿಸಿ ಕೂಂಬಿಂಗ್ ನಡೆಸಲಾಗಿತ್ತು. ಆದರೆ ತಾಯಿ ಮತ್ತು ನಾಲ್ಕು ಮರಿ ಹುಲಿಗಳ ಬದಲು ಗಂಡು ಹುಲಿಯೊಂದನ್ನು ಸೆರೆ ಹಿಡಿಯಲಾಗಿತ್ತು. ಬಳಿಕ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು. ಇದೀಗ ಮತ್ತೆ ಶುಕ್ರವಾರ ಮತ್ತೊಂದು ಹುಲಿ ಕಾಣಿಸಿಕೊಂಡಿರುವುದು ಜನರಲ್ಲಿ ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

## ಡಿಕೆಶಿ ಹಸ್ತಕ್ಷೇಪ ಮಾಡಿಲ್ಲ: ಡಾ.ಪರಮೇಶ್ವರ್ ಸಮರ್ಥನೆ

ಅವರು ಸಂಪುಟ ಸಚಿವ ಮತ್ತು ಉಪಮುಖ್ಯಮಂತ್ರಿ ಜವಾಬ್ದಾರಿಯೊಂದಿಗೆ ಅಲ್ಲಿಗೆ ಹೋಗಿದ್ದಾರೆ. ಏಕೆಂದರೆ ನಾನು ಹೋಗಲು ಸಾಧ್ಯವಾಗಲಿಲ್ಲ ಎಂದು ಪರಮೇಶ್ವರ ಹೇಳಿದರು.

ಸಚಿವ ಸಂಪುಟವು ಸಾಮೂಹಿಕ ಜವಾಬ್ದಾರಿ. ಅದನ್ನು ಹಸ್ತಕ್ಷೇಪ ಎಂದು ಕರೆಯಲಾಗುವುದಿಲ್ಲ. ಅವರು ನಿಜವಾಗಿಯೂ ಮಧ್ಯಪ್ರವೇಶಿಸಿದ್ದರೆ, ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿದ್ದರೆ ಮತ್ತು ಅದು ಬೇರೆಯದೇ ಪರಿಣಾಮವನ್ನು ಬೀರಿದ್ದರೆ, ನಾನು ಹಸ್ತಕ್ಷೇಪದ ಆರೋಪಗಳನ್ನು ಸ್ವೀಕರಿಸುತ್ತಿದ್ದೆ. ಕುಮಾರಸ್ವಾಮಿ ಈ ವಿಷಯಗಳನ್ನು ಹೇಗೆ ಅರ್ಥಮಾಡಿಕೊಂಡಿದ್ದಾರೆಂದು ನನಗೆ ತಿಳಿದಿಲ್ಲ ಎಂದು ಅವರು ಟೀಕಿಸಿದರು.

## ಭೀಕರ ಅಪಘಾತ: ನಾಲ್ವರು ಅಯ್ಯಪ್ಪ ಭಕ್ತರು ಸಾವು

ಯಲಬುರ್ಗಾ ಮೂಲದವರು. ಅಯ್ಯಪ್ಪ ಮಾಲೆ ಧರಿಸಿದ್ದರು. ಕೋರಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಖಾತೆ ಒತ್ತುವರಿ ನಿಸ್ಸೀಮರು!

ಒತ್ತುವರಿ ಮಾಡುವುದರಲ್ಲಿಯೂ ನೀವು ನಿಸ್ಸೀಮರು. ಅದನ್ನಷ್ಟೇ ನಾನು ಹೇಳಿದ್ದು. ತಾವು ಡಿಸಿಎಂ ಆಗಿರಬಹುದು. ಆದರೆ ಮಂತ್ರಿ ಪದವಿಗೆ ಇರುವಷ್ಟೇ ಶಿಷ್ಟಾಚಾರ, ಅಧಿಕಾರ ವ್ಯಾಪ್ತಿ ಆ ಹುದ್ದೆಗಿದೆ ಎನ್ನುವುದು ಗೊತ್ತಿಲ್ಲವೇ? ಅದಕ್ಕೇನು ಎಕ್ಸ್‌ಟ್ರಾ ಕೊಂಬು, ಕೋಡು ಇರಲ್ಲ. ಇರಲಿ ಎಂದು ತಾವು ಸಿಕ್ಕಿಸಿಕೊಳ್ಳೋದಕ್ಕೂ ಬರಲ್ಲ. ನಿಮ್ಮ ಎಕ್ಸ್‌ಪೀರಿಯನ್ಸ್ ಗೆ ಈ ಸಣ್ಣ ವಿಷಯವೂ ತಟ್ಟಲಿಲ್ಲವೇ ಮಿಸ್ಟರ್ ಡಿಕೆಶಿ ಅವರೇ, ಎಂದು ಬರೆಯುವ ಮೂಲಕ ಟಾಂಗ್ ಕೊಟ್ಟಿದ್ದಾರೆ.

ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆಯನ್ನು ಗೃಹ ಸಚಿವರೇ ನಡೆಸಬೇಕಿತ್ತು. ಅದು ಅವರ ಅಧಿಕಾರ ವ್ಯಾಪ್ತಿ. ಅವರು ಬಿಟ್ಟರೆ ಮುಖ್ಯಮಂತ್ರಿಗಳು ಅಂಥ ಸಭೆ ನಡೆಸಬಹುದು. ನೀವು ಸಭೆ ನಡೆಸಿದ್ದು ಶಿಷ್ಟಾಚಾರ, ಅಧಿಕಾರದ ಸ್ಪಷ್ಟ ಉಲ್ಲಂಘನೆ. ಇದನ್ನು ಆಡಳಿತಾನುಭವ, ಸೀನಿಯಾರಿಟಿ ಎಂದು ಬೆನ್ನು ತಟ್ಟಿಕೊಳ್ಳುತ್ತೀರಾ? ಎಂದು ಪ್ರಶ್ನಿಸಿದ್ದಾರೆ. ನಿಮ್ಮದು ಭಾರೀ ಅನುಭವ, ಸಿಕ್ಕಾಪಟ್ಟೆ ಸೀನಿಯಾರಿಟಿ, ಇಂಥ ಸಣ್ಣ ವಿಷಯ ನಿಮಗೇಕೆ ತಿಳಿಯಲಿಲ್ಲ ಮಿಸ್ಟರ್ ಡಿಕೆಶಿ ಅವರೇ? ಎಂದು ಕುಟುಕಿದ್ದಾರೆ.

# 12ಕ್ಕೆ ಮಾದಕ ವಸ್ತುಗಳ ಅರಿವು



ಮೈಸೂರು:ಇಂದಿನ ಯುವ ಜನತೆ ಮಾದಕ ವಸ್ತುಗಳ ದಾಸರಾಗುತ್ತಿರುವ ಹಿನ್ನೆಲೆಯಲ್ಲಿ ಈ ಕುರಿತು ಅರಿವು ಮೂಡಿಸಲು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಜ. 12 ರಂದು ಬೆಳಗ್ಗೆ 10.30ಕ್ಕೆ ನಗರದ ಪುರಭವನದಲ್ಲಿ ಸಮಾವೇಶ ಹಾಗೂ ಮಧ್ಯಾಹ್ನ 1ಕ್ಕೆ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ನಗರ ಯುವ ಘಟಕದ ಅಧ್ಯಕ್ಷ ಕೆ. ಆನಂದ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತ ನಾಡಿ, ಪಕ್ಷದ ಕಾರ್ಯಾಧ್ಯಕ್ಷರಾಗಿದ್ದ, ಪಕ್ಷ ಸೇನಾನಿಗಳಿಗೆ ಸ್ಫೂರ್ತಿಯಾಗಿದ್ದ ಎಸ್.ಎಚ್. ಲಿಂಗೇಗೌಡರ ಜನ್ಮದಿನವೂ ಅಂದು ಆಗಿದೆ. ಹೀಗಾಗಿ ಅವರನ್ನು ಸ್ಮರಿಸುವ ಉದ್ದೇಶದಿಂ ದಲೂ ಹಮ್ಮಿಕೊಂಡಿರುವ ಈ ಸಮಾವೇಶದಲ್ಲಿ ಪಕ್ಷದ ಗೌರವಾಧ್ಯಕ್ಷ ರವಿ ಕೃಷ್ಣಾರೆಡ್ಡಿ, ಅಧ್ಯಕ್ಷ ಸಿ.ಎನ್. ದೀಪಕ್, ರಘು ಜಾಣಗೆರೆ, ಜನಗಿ ವತ್ಸಲ ಮೊದಲಾದವರು ಪಾಲ್ಗೊಳ್ಳುವರು. ಸುಮಾರು ಎರಡು ಸಾವಿರ ಮಂದಿ ಭಾಗವಹಿ ಸುವ ನಿರೀಕ್ಷೆಯಿದೆ ಎಂದರು.

ರಾಷ್ಟ್ರದ ಶಕ್ತಿಯಾಗಿರುವ ಯುವಜನತೆ ಯನ್ನು ಈಚೆಗೆ ಕಡೆಗಣಿಸಲಾಗುತ್ತಿದೆ. ಅವರ ಭವಿಷ್ಯವನ್ನು ದುರ್ಭರಗೊಳಿಸುವ ಎಲ್ಲ ಯತ್ನ ನಡೆಯುತ್ತಿದೆ. ಇದೇ ವೇಳೆ ಬಹಳಷ್ಟು ಯುವ ಜನತೆ ಮಾದಕ ವಸ್ತುಗಳ ದಾಸರಾಗುತ್ತಿದ್ದಾರೆ. ಹೀಗಾಗಿ ಅವರಲ್ಲಿ ಅರಿವು ಮೂಡಿಸಲು ಈ ಸಮಾವೇಶ ಆಯೋಜಿಸಲಾಗುತ್ತಿದೆ. ಜಾಥಾ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾಗಿ, ವಿವಿಧ ರಸ್ತೆಗಳ ಮೂಲಕ ಬಸವೇಶ್ವರ ಪ್ರತಿಮೆ ಬಳಿ ಸಮಾರೋಪಗೊ ಳ್ಳಲಿದೆ ಎಂದರು. ಜಿಲ್ಲಾ ಪ್ರಧಾನ ಕಾರ್ಯ ದರ್ಶಿ ಹರೀಶ್, ಕಾರ್ಯದರ್ಶಿ ರಾಜೇಶ್, ಲೋಕೇಶ್ ಹಾಗೂ ಇನ್ನಿತರರು ಇದ್ದರು.

# ಅಪಘಾತ: ಹೆಚ್ಚಿದ ಯುವಕರ ಸಾವು

ಮೈಸೂರು: ಹೃದಯಾಘಾತ, ಕ್ಯಾನ್ಸರ್ ಇಂತಹ ಮಾರಕ ಖಾಯಿಲೆಗಳಿಂದ ಸಾವನ್ನಪ್ಪುವಷ್ಟೇ ಮಂದಿ ಯುವಕರು ರಸ್ತೆ ಅಪಘಾತದಲ್ಲಿ ಸಾವನ್ನಪ್ಪುತ್ತಿರುವರು ಎಂದು ಏರ್ ಅಂಬುಲೆನ್ಸ್ ಸರ್ವೀಸ್ ಸಂಸ್ಥಾಪಕಿ ನಿರ್ದೇಶಕರೂ ಆದ ಡಾ.ಶಾಲಿನಿ ನಲ್ವಾಡ್ ಹೇಳಿದರು.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲ ಯದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಮಹಿಳಾ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸರ್ಕಾರ 22,500 ಕೋಟಿಯಲ್ಲಿ ಒಂದು ರಸ್ತೆ ನಿರ್ಮಾಣ ಮಾಡಿದರೆ ಅದೇ ರಸ್ತೆಯಲ್ಲಿ ಇಂದು 25 ಸಾವಿರ ಕೋಟಿಯಷ್ಟು ಬೆಲೆ ಬಾಳುವ ಜೀವಗಳು ಹೋಗುತ್ತಿವೆ. ಹೃದಯಾಘತ, ಕ್ಯಾನ್ಸರ್ ಸೇರಿ ಇತರ ಕಾರಣಗಳಿಂದ ಸಾಯುವವರ ಸಂಖ್ಯೆಯಷ್ಟೇ ಯುವಕರು ರಸ್ತೆ ಅಪಘಾತದಲ್ಲಿ ಸಾಯುತ್ತಿದ್ದಾರೆ. ಕೇಂದ್ರ ಸಚಿವ ನಿತಿನ್ ಗಡ್ಕರ್ ರಸ್ತೆ ಅಪಘಾತಗಳನ್ನು ಶೇ.50 ರಷ್ಟು ತಡೆಯುವ ಸಲುವಾಗಿ ಬ್ರೆಜಿಲಿಯಾ ಅಗ್ರಿಮೆಂಟ್‌ನಲ್ಲಿ 2020ರಲ್ಲಿಯೇ ಸಹಿ ಹಾಕಿದ್ದರು. ಆದರೆ ರಸ್ತೆ ಅಪಘಾತಗಳನ್ನು ಶೇ.0.5ರಷ್ಟು ಮಾತ್ರ ಕಡಿಮೆಯಾಯಿತು ಎಂದು ತಿಳಿಸಿದರು.

ಇಂಗ್ಲೆಂಡಿನಲ್ಲಿ ಆರೋಗ್ಯ ವ್ಯವಸ್ಥೆಯನ್ನು



ಸಂಪೂರ್ಣ ಸರ್ಕಾರ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿಯಿಂದ ಸಾಮಾನ್ಯ ಜನರವರೆಗೂ ಏಕ ರೂಪದ ಚಿಕಿತ್ಸೆ ದೊರೆಯುತ್ತದೆ. ದೇಶದಲ್ಲಿ ಪ್ರತಿ 4 ನಿಮಿಷಕ್ಕೊಂದು ಅಪಘಾತ ಸಂಭವಿಸಿ ವ್ಯಕ್ತಿಯೊಬ್ಬ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ವರ್ಷಕ್ಕೆ 1.66 ಜನ ಅಪಘಾತದಿಂದ ಜೀವ ಕಳೆದುಕೊಂಡರೆ ಅಂಗವಿಕಲರಾಗುವ ಸಂಖ್ಯೆ ಲೆಕ್ಕ ಸಿಗುತ್ತಿಲ್ಲ. ಇದರಿಂದ ಶೇ.3ರಷ್ಟು ನಷ್ಟವಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಕರಾಮುವಿಯ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ.ಡಿ.ಎನ್.ದಿವ್ಯ, ಜೈನಹಳ್ಳಿ ಸತ್ಯನಾರಾಯಣ ಗೌಡ ಹಾಜರಿದ್ದರು.

# ಎಂದೂ ಮರೆಯದ ಹಾಡುಗಳು ಯಶಸ್ವಿ

## ಚನ್ನಪಟ್ಟಣದಲ್ಲಿ ರಾ.ಬಿ.ನಾಗರಾಜ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮ

ಚನ್ನಪಟ್ಟಣ: ಬಹುತೇಕ ನೈಜ ಕಲಾವಿದರಲ್ಲಿ ಕಲಾ ಶ್ರೀಮಂತಿಕೆ ಇದೆ ಆದರೆ ಆರ್ಥಿಕ ಶ್ರೀಮಂತರಾಗಿಲ್ಲ ಎಂದು ಅಖಿಲ ಭಾರತ ಸನಾತನ ಧರ್ಮ ಜಾಗರಣ ಮಂಚ್ ದಕಿಷಣ ಭಾರತದ ಮುಖ್ಯಸ್ಥ ಡಾ.ಅರ್.ಎಸ್.ರಾಜು ಹೇಳಿದರು.

ನಗರದ ಶತಮಾನೋತ್ಸವದಲ್ಲಿ ಗೌಡಗೆರೆ ಶ್ರೀ ಚಾಮುಂಡೇಶ್ವರಿ ಪುಣ್ಯಕ್ಷೇತ್ರದ ಧರ್ಮದರ್ಶಿ ಡಾ.ಮಲ್ಲೇಶ್ ಗುರೂಜಿ ಸಾನಿಧ್ಯದಲಿ ಗಾಯಕ ಡಾ.ರಾ.ಬಿ.ನಾಗರಾಜ್ ನೇತೃತ್ವದಲ್ಲಿ ಸಂಗೀತ ಸೌರಭ ವಾದ್ಯಗೋಷ್ಠಿ ತಂಡ ಹಮ್ಮಿಕೊಂಡಿದ್ದ ಎಂದೂ ಮರೆಯದ ಹಾಡುಗಳ ಸಂಗೀತ ಸಂಜೆ ಹಾಗೂ ಕಲಾ ಪೋ?ಕರಿಗೆ ಗೌರವಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಒಳ್ಳೆಯ ಸಾಹಿತ್ಯ ಸಂಗೀತ ಮನಸ್ಸಿಗೆ ನೆಮ್ಮದಿ ತರುತ್ತದೆ. ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯುವಂತಾಗಬೇಕು ಎಂದ ಅವರು ಮೂರು ದಶಕಗಳಿಂದ ಇಂತಹ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ರಾ.ಬಿ.ನಾಗರಾಜ್ ಅವರ ಶ್ರಮವನ್ನು ಅವರು ಶ್ಲಾಘಿಸಿದರು.

ಸಂಸ ಥಿಯೆಟರ್ ಗೌರವಾಧ್ಯಕ್ಷರು, ರಂಗಕರ್ಮಿ ಎಂ.ಜಯರಮು ಮಾತನಾಡಿ ಒಳ್ಳೆಯ ಕಾರ್ಯಕ್ರಮಗಳಿಗೆ ಜನರ ಪ್ರೋತ್ಸಾಹವಿದೆ ಎನ್ನುವುದಕ್ಕೆ ಈ ಸಭಾಂಗಣ ತುಂಬಿರುವುದೇ ಸಾಕ್ಷಿ. ಚನ್ನಪಟ್ಟಣದ ಕಲಾಭಿಮಾನಿಗಳು ಹೊಸ ತಲೆಮಾರಿನವರಿಗೂ ಇಂತಹ ಸಾಹಿತ್ಯ, ಸಂಗೀತ ಕೇಳುವ ಅಭಿರುಚಿ ಮೂಡಿಸಬೇಕು. ಯಾಂತ್ರಿಕ ಬದುಕಿನ ಇವತ್ತಿನ ಕಾಲದಲ್ಲಿ ಎಂದೂ ಮರೆಯದ ಈ ಹಾಡುಗಳನ್ನು ಕೇಳುವಾಗ ಮನಸ್ಸು ಕೆಲ ಸಮಯವಾದರೂ ಬದುಕಿನ ತೊಳಲಾಟದಿಂದ ಹೊರ ಬರಬಹುದು ಎಂದರು.



### ಸೆಲಿಬ್ರೆಟಿಗಳಿಗಷ್ಟೇ ದೊಡ್ಡ ವೇದಿಕೆ ? ರಾ.ಬಿ.ನಾಗರಾಜ್

ಕಾರ್ಯಕ್ರಮದ ಆಯೋಜಕ ಗಾಯಕ ಡಾ.ರಾ.ಬಿ.ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಇಂದು ವಾದ್ಯಗೋಷ್ಠಿ ಕ್ಷೇತ್ರದ ಹಿರಿಯ ಕಲಾವಿದರಿಗೆ ವೇದಿಕೆಗಳು ವಿರಳವಾಗಿವೆ. ಎಲ್ಲವೂ ಮೊಬೈಲ್ ಮಾಯವಾಗಿದೆ. ಇನ್ನೊಂದೆಡೆ ಸೆಲೆಬ್ರೆಟಿಗಳೆಂದು ಕೆಲವರಿಗ?ೇ ದೊಡ್ಡ ವೇದಿಕೆಗಳು ಸೀಮಿತವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷರಾದ ಎಲೆಕೇರಿ ರವೀಶ್, ಆದ್ಯಾತ್ಮಿಕ ಚಿಂತಕರಾದ ಆರ್. ಎನ್.ವಾಸುದೇವ್, ಒಕ್ಕಲಿಗರ ಸಂಘದ ನಿರ್ದೇಶಕರಾದ ವೆಂಕಟರಾಮೇಗೌಡ, ಶ್ರೀ ನಂದಿ ಕಮ್ಯೂಟರ್ಸ್ ಮಾಲೀಕತಾದ ಬಿ.ದಿನೇಶ್, ಗುರುವಪ್ಪ ಆಸ್ಪತ್ರೆಯ ಡಾ.ಲೋಕಾನಂದ್,ಡಾ. ರಾಜ್ ಕಲಾ ಬಳಗದ ಖಜಾಂಚಿ ಎಂ.ಜಿ.ಮಹೇಶ್ ಕುಮಾರ್, ಸರ್ಕಾರಿ ಆಸ್ಪತ್ರೆಯ ಸರ್ಜನ್ ಡಾ.ಟಿ.ಮಹೇಂದ್ರ ಕುಮಾರ್, ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ಬಿ.ಟಿ.ಚಿಕ್ಕಪುಟ್ಟೇಗೌಡ, ರಾಜ್ ಮಕ್ಕಳ ಚಿಕಿತ್ಸಾಲಯದ ವೈದ್ಯೆ ಡಾ.ರಾಜಶ್ರೀ, ನಗರಸಭಾ ಸದಸ್ಯ ಎಂ.ಜೆ.ರೇವಣ್ಣ, ಹಿರಿಯ ಶಿರಸ್ತೇದಾರ್ ಹನುಮಂತರಾಜು, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ಪೂರ್ಣಚಂದ್ರ ಕೀಕರ್ , ಗುರುಶ್ರೀ ಫೌಂಡೇ?ನ್ ಟ್ರಸ್ಟ್ ಅಧ್ಯಕ್ಷರಾದ ಪಿ. ಗುರುಮಾದಯ್ಯ, ಅಭ್ಯುದಯ ಮಹಿಳಾ ಪಟ್ಟಣ ಬ್ಯಾಂಕ್ ನಿಯಮಿತ ಅಧ್ಯಕ್ಷರಾದ ಶ್ರೀಮತಿ ಬಿ.ವಿ.ಗೀತಾಂಜಲಿ ಅಭಿಲಾ?, ಡಾ.ರಾಜ್ ಕಲಾ ಬಳಗದ ಅಧ್ಯಕ್ಷರಾದ ಹೆಚ್.ಮಂಜುನಾಥ್ ಎಲೆಕೇರಿ, ಹಿರಿಯ ರಂಗಭೂಮಿ ಕಲಾವಿದರಾದ ದಯಾನಂದ್ ,ಸಾಹಿತಿ ಡಾ.ವಿಜಯ್ ರಾಂಪುರ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷರಾದ ಬಿ.ಸಿ.ಯೋಗೀಶ್ ಗೌಡ, ಉದ್ಯಮಿ ಸುಮತಿ ಕುಮಾರ್ ಜೈನ್ ಉಪಸ್ಥಿತರಿದ್ದರು. ವಾದ್ಯಗೋಷ್ಠಿ ಪರವಾಗಿ ಎಲ್ಲಾ ಕಲಾ ಪೋ?ಕ ಅತಿಥಿಗಳಿಗೆ ಗೌರವಾರ್ಪಣೆ ಮಾಡಲಾಯಿತು. ವಾದ್ಯಗೋಷ್ಠಿ ರಂಗದ ಹಿರಿಯ ಗಾಯಕರಾದ ಮೈಸೂರು ಜಯರಾಂ, ಬೆಂಗಳೂರಿನ ಎಸ್.ರಘುನಾಥ್, ಮಂಡ್ಯ ರಾಘವೇಂದ್ರ, ಶ್ರೀಮತಿ ಹೇಮಾ ಆನಂದ್ ಹಾಗೂ ಡಾ.ರಾ.ಬಿ.ನಾಗರಾಜ್ ರವರು ಎಪ್ಪತ್ತು ಎಂಬತ್ತರ ದಶಕದ ಅಪರೂಪದ ಗೀತೆಗಳನ್ನು ಹಾಡಿದರು. ಚಲನಚಿತ್ರ, ಕಿರುತೆರೆ ನಟ ಮೈಸೂರು ಶ್ರೀಹರಿ ಎಪ್ಪತ್ತರ ದಶಕದಿಂದ ಬದಲಾಗುತ್ತಾ ಬಂದ ನೃತ್ಯವನ್ನು ಅನುಕರಣೆ ಮಾಡಿ ರಂಜಿಸಿದರು. ಕಲಾವಿದರಾದ ಶ್ಯಾಮ್, ಹಾಗೂ ಹೆಚ್.ಬಿ.ಸಿದ್ಧರಾಜು ಕಾರ್ಯಕ್ರಮ ನಿರೂಪಿಸಿದರು.

# ಕೈ ನಾಯಕರು ಕನ್ನಡಿಗರ ಪರವೇ?

ತೋರುತ್ತಾರೆಯೇ? ಅಕ್ರಮ ವಲಸಿಗರು ಕರ್ನಾಟಕದ ಭೂಮಿಯನ್ನು ಒತ್ತುವರಿ ಮಾಡಿಕೊಂಡರೂ, ಮಾನವೀಯತೆ ದೃಷ್ಟಿಯಿಂದ ಮನೆ ಕೊಡಬೇಕು ಎಂದು ರೋಹಿಂಗ್ಯಗಳು, ಬಾಂಗ್ಲಾದೇಶಿಗಳ ಪರವಾಗಿ ಮಿಡಿಯುವ ಕೆ.ಸಿ.ವೇಣುಗೋ ಪಾಲ್ ಅವರ ಹೃದಯ ಈಗ, ಕಾಸರಗೋಡಿನ ಕನ್ನಡಿಗರ ಪರವಾಗಿ ಮಿಡಿಯುದಿಲ್ಲವೇ?’ ಎಂದು ಪ್ರಶ್ನಿಸಿದ್ದಾರೆ. ಕರ್ನಾಟಕದ ಸ್ವಾಭಿಮಾನ, ಆತ್ಮಗೌರವಕ್ಕೆ ಪದೇ ಪದೇ ಧಕ್ಕೆ ತರುತ್ತಿರುವ ಕಾಂಗ್ರೆಸ್ ಪಕ್ಷದ ಕೇರಳ ಪಟಾಲಂ, ಕನ್ನಡಿಗರ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ರಾಜಕೀಯ ಲಾಭಕ್ಕಾಗಿ, ಯಾರದ್ದೋ ಸ್ವಾರ್ಥಕ್ಕಾಗಿ ಕರ್ನಾಟಕದ ಮತ್ತು ಕನ್ನಡಿಗರ ಹಿತಾಸಕ್ತಿಯನ್ನು ಪದೇ ಪದೇ ಬಲಿ ಕೊಡಲಾಗುತ್ತಿದೆ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

## ಕನ್ನಡಿಗರ ಹಿತಾಸಕ್ತಿ ರಕ್ಷಣೆಗೆ ಬದ್ಧ

ನಡೆಸಿದ್ದೇವೆ. ಮಲಯಾಳಂ ಭಾಷಾ ಮಸೂದೆಗೆ ಅನುಮೋದನೆ ಕೊಡದಂತೆ ಕೇರಳ ರಾಜ್ಯಪಾಲರನ್ನು ಒತ್ತಾಯಿಸುತ್ತೇವೆ. ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿರುವ ಮಸೂದೆಯ ಕುರಿತು ಕೇರಳ ಮುಖ್ಯಮಂತ್ರಿಗೆ ಪತ್ರ ಬರೆಯುವಂತೆಯೂ ಕೇಳಲಾಗುವುದು. ಈ ನಿಟ್ಟಿನಲ್ಲಿ ಸಂಬಂಧಿತರೊಂದಿಗೆ ಚರ್ಚಿಸಲಾಗುವುದು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವೂ ಮಸೂದೆ ವಿರುದ್ಧ ಸರ್ಕಾರಕ್ಕೆ ಪತ್ರ ಬರೆದಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ನಾಯಕತ್ವದ ಸಮಸ್ಯೆಯನ್ನು ಇತ್ಯರ್ಥಪಡಿಸಲಾಗಿದೆ. ಅದರ ಬಗ್ಗೆ ಯಾವುದೇ ನಿರ್ಧಾರಗಳನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುತ್ತದೆ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಕಂದಾಯ ನಿರೀಕ್ಷಕರ ವರ್ಗಾವಣೆ ರದ್ದಾಗದಿದ್ದರೆ ಹೋರಾಟ

ರಾಮನಗರ: ಇಲ್ಲಿನ ನಗರಸಭೆಯಲ್ಲಿ ಕಂದಾಯ ನಿರೀಕ್ಷಕರಾಗಿರುವ ಆರ್.ನಾಗ ರಾಜು ಅವರ ವರ್ಗಾವಣೆಯನ್ನು ತಕ್ಷಣ ರದ್ದುಗೊಳಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ತಮ್ಮ ಮನವಿಗೆ ಸರ್ಕಾರ ಸ್ಪಂದಿಸದಿದ್ದರೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಪೌರನೌಕರರನ್ನು ರಾಮನಗರದಲ್ಲಿ ಸಂಘಟಿಸಿ ಮುಷ್ಕರ ಕೈಗೊಳ್ಳಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಜಿಲ್ಲಾ ಶಾಖೆ ಎಚ್ಚರಿಸಿದೆ.

### ಯಾವ ದೂರ ಇರಲಿಲ್ಲ:

ಈ ಸಂಬಂಧ ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಶಾಖೆಯ ಅಧ್ಯಕ್ಷ ವಿ.ವೆಂಕಟೇಶ್ ಮಾತನಾಡಿದರು. ಕಂದಾಯ ನಿರೀಕ್ಷಕರಾಗಿ ಆರ್.ನಾಗರಾಜು, ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 9 ರಿಂದ 24ನೇ ವಾರ್ಡುಗಳಲ್ಲಿ ಅವರ ಕರ್ತವ್ಯ ಇತ್ತು. ಅವರ ವಿರುದ್ಧ ಯಾವ ದೂರುಗಳು ಇರಲಿಲ್ಲ. ಆದರೂ ಏಕಾಏಕಿ ಪೌರಾಡಳಿತ ಇಲಾಖೆ ಇವರನ್ನು ಅನ್ಯ ಜಿಲ್ಲೆಗೆ ವರ್ಗಾಯಿಸಿದೆ. ಈ ವರ್ಗಾವಣೆಯನ್ನು ತಮ್ಮ ಸಂಘದ ಪ್ರತಿಯೊಬ್ಬ ಸದಸ್ಯರು ಖಂಡಿಸಿದ್ದೇವೆ. ರಾಮನಗರದ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು, ಉಪಮುಖ್ಯಮಂತ್ರಿಗಳಾದಿಯಾಗಿ ಪೌರಾಡಳಿತ ಸಚಿವರು, ಪೌರಾಡಳಿದ ಅಧಿಕಾರಿಗಳಿಗೆ ಆರ್.ನಾಗರಾಜು ಅವರ ವರ್ಗಾವಣೆಯನ್ನು ರದ್ದುಗೊಳಿಸುವಂತೆ ಮನವಿ ಮಾಡಲಾಗಿದೆ. ತಮ್ಮ ಮನವಿಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸ್ಪಂದಿಸುವ ವಿಶ್ವಾಸವಿದೆ ಎಂದರು. ಹಾಗೊಮ್ಮೆ ತಮ್ಮ ಮನವಿಗೆ ಸ್ಪಂದನೆ ಸಿಗದಿದ್ದರೆ ತಮ್ಮ ಕೇಂದ್ರ ಸಂಘದ ಮಾರ್ಗದರ್ಶನದಲ್ಲಿ ಹೋರಾಟ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು.

### 5 ತಿಂಗಳಿಗೆ ವರ್ಗಾವಣೆ!

ಆರ್.ನಾಗರಾಜು ಅವರು ಕಂದಾಯ ನಿರೀಕ್ಷಕರಾಗಿ ಮಂಡ್ಯದಿಂದ




ರಾಮನಗರ ನಗರಸಭೆಗೆ ವರ್ಗಾವಣೆಯಾಗಿ ಕೇವಲ 5 ತಿಂಗಳು 18 ದಿನಗಳಾಗಿವೆ. ಸರ್ಕಾರದ ಆದೇಶದ ಪ್ರಕಾರ ಸಿ ದರ್ಜೆಯ ನೌಕರರನ್ನು ಕನಿಷ್ಠ 4 ವರ್ಷದವರೆಗೂ ವರ್ಗಾವಣೆ ಮಾಡಲು ಅಧಿಕಾರವಿಲ್ಲ. ಹೀಗಾಗಿ ಈ ವರ್ಗಾವಣೆ ಕಾನೂನು ಬಾಹೀರವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ಪಟ್ಟಭದ್ರ ಹಿತಾಸಕ್ತಿಗಳ ಕೈವಾಡದ ಶಂಕೆ!

ಆರ್.ನಾಗರಾಜು ಅವರು ಕಂದಾಯ ನಿರೀಕ್ಷಕರಾಗಿ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರ ವಿರುದ್ಧ ಸಾರ್ವಜನಿಕರಿಂದ ಯಾವ ದೂರುಗಳು ಇಲ್ಲ. ಏಕಾಏಕಿ ವರ್ಗಾವಣೆಯಾಗಿರುವುದರ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಕಾಣದ ಕೈಗಳ ಕೈವಾಡದ ಶಂಕೆ ಇದೆ. ಪೌರ ನೌಕರರ ಏಳಿಗೆಯನ್ನು ಸಹಿಸದ ಹಾಗೂ ಸಂಘದ ಧ್ವನಿಯನ್ನು ಅಡಗಿಸಲು ಈ ವರ್ಗಾವಣೆಯಾಗಿದೆ ಎಂಬ ಅನುಮಾನವನ್ನು ಅವರು ವ್ಯಕ್ತಪಡಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪೌರ ನೌಕರರ ಸಂಘದ ಪ್ರಮುಖರಾದ ದೇವೇಂದ್ರ, ಕೊಲ್ಲಾಪುರಿ ಸೇರಿದಂತೆ ಪೌರ ಕಾರ್ಮಿಕರು ಭಾಗವಹಿಸಿದ್ದರು.

# ಭೂಸ್ವಾಧೀನ ಪರಿಹಾರ ನೀಡದ ಸರ್ಕಾರ: ಜಿಲ್ಲಾಧಿಕಾರಿ ಕಾರು ಜಪ್ತಿ

**ಹಾಸನ:** ಭೂಸ್ವಾಧೀನಪಡಿಸಿಕೊಂಡು ಪರಿಹಾರ ನೀಡಲು ವಿಳಂಬ ಮಾಡಿದ ಹಿನ್ನಲೆಯಲ್ಲಿ ಹಾಸನ ಜಿಲ್ಲಾಧಿಕಾರಿ ಕಾರನ್ನು ಜಪ್ತಿ ಮಾಡುವಂತೆ ನ್ಯಾಯಾ ಲಯ ಆದೇಶಿಸಿದೆ. ಕೋರ್ಟ್ ಆದೇಶದಂತೆ ವಕೀ ಲರ ಜೊತೆ ಆಗಮಿಸಿದ ರೈತರು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರ ಕಾರನ್ನು ಜಪ್ತಿ ಮಾಡಿದ್ದಾರೆ.

ಕಳೆದ 15 ವರ್ಷಗಳ ಹಿಂದೆ ಯಗಚಿ ನಾಲೆ ಗಾಗಿ ಆಲೂರು ತಾಲೂಕಿನ, ಭಕ್ತರವಳ್ಳಿ ಗ್ರಾಮದ ರೈತ ಮರೀಗೌಡ ಅವರಿಗೆ ಸೇರಿದ್ದ ಸರ್ವೆ ನಂ 44/1ರಲ್ಲಿ ಹತ್ತುವರೆ ಗುಂಟೆ ಜಮೀನನ್ನು ನೀರಾ ವರಿ ಇಲಾಖೆ ಸ್ವಾಧಿನಪಡಿಸಿಕೊಂಡಿತ್ತು. ಇದಕ್ಕೆ 11,22,559 ರೂ. ಪರಿಹಾರ ನೀಡಬೇಕಿತ್ತು. ಹದಿ ನೈದು ವರ್ಷ ಕಳೆದರೂ ಪರಿಹಾರ ನೀಡದ ಹಿನ್ನಲೆ ಯಲ್ಲಿ ರೈತ ಮರೀಗೌಡ ಹಾಗೂ ಅವರ ಮಕ್ಕಳು ನ್ಯಾಯಾಲಯದ ಮೊರೆ ಹೋಗಿದ್ದರು.

ಕೋರ್ಟ್ನಿಂದ ಕಾರು ಜಪ್ತಿ ಮಾಡುವಂತೆ




ಆದೇಶ ಬಂದ ಹಿನ್ನಲೆಯಲ್ಲಿ ವಕೀಲ ಮಂಜು ನಾಥ್ ಜೊತೆ ಆಗಮಿಸಿ ಡಿಸಿ ಕಾರು ಜಪ್ತಿ ಮಾಡಿ ದರು. ಈ ವೇಳೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸುತ್ತಿದ್ದರು. ಎಡಿಸಿ ಜಗದೀಶ್ ಆಗಮಿಸಿ ಸಂಜೆಯೊಳಗೆ ಪರಿಹಾರ ನೀಡಲಾಗುವುದು ಸಮಯ ಕೊಡಿ ಎಂದು ಎಂದು ಮನವಿ ಮಾಡಿದರು. ಆದರೆ, ವಾಹನ ತರಿಸಿ ಡಿಸಿ ಕಾರು ಎಳೆದೊಯ್ಯಲಾಯಿತು.

**ಪುಟ್ಟಸಿದ್ದಶೆಟ್ಟಿ ಹೇಳಿಕೆ**

# ಸಿದ್ದು ಪೂರ್ಣಾವಧಿ ಮುಂದುವರೆಯಲಿ

ಮೈಸೂರು: ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಸಿಎಂ ಆಗಿ ಮುಂದುವರಿ ಯಬೇಕೆಂಬುದು ರಾಜ್ಯ ಕಾಯಕ ಸಮುದಾಯಗಳ ಆಶಯವಾಗಿದೆ ಎಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ. ಪುಟ್ಟಸಿದ್ದಶೆಟ್ಟಿ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅತಿ ಹೆಚ್ಚು ಬಾರಿ ಸಿಎಂ ಹುದ್ದೆಗೇರಿರುವ ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಸಮುದಾಯವನ್ನು ಬದಿಗೊತ್ತಿ ಅತಿ ಹೆಚ್ಚು ಜನಸಂಖ್ಯೆ ಬೆಂಬಲ ಹೊಂದಿರುವ ಸಮುದಾಯವನ್ನು ಪ್ರತಿನಿ ಧಿಸುವ ಸಾಮರ್ಥ್ಯ ಕೇವಲ ಸಿದ್ದರಾಮಯ್ಯ ಅವರಿಗೆ ಮಾತ್ರ ಇದೆ. ಹೀಗಾಗಿ ಈ ವೇಳೆ ಅಧಿಕಾರ ಹಂಚಿಕೆ ಮಾತು ಸರಿಯಲ್ಲ.



ಹಿಂದುಳಿದ ಸಮುದಾಯದಲ್ಲಿ ಸಿದ್ದರಾಮಯ್ಯ ಅವರನ್ನು ಬಿಟ್ಟರೆ ಬೇರೆ ಸಮರ್ಥ ನಾಯಕರು ಬೆಳೆದಿಲ್ಲ. ಹೀಗಾಗಿ ಇವರೊಬ್ಬರು ಮಾತ್ರವೇ ಈ ಸಮುದಾ ಯಗಳನ್ನು ಪ್ರತಿನಿಧಿಸುವವರಾಗಿದ್ದು, ಸಾಮಾಜಿಕ ನ್ಯಾಯದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೂಢ ನಂಬಿಕೆ ವಿರುದ್ಧ ಹೋರಾಟ ಸಹಾ ಮಾಡುತ್ತಿರು ವುದು ಅವರ ಚಾಮರಾಜನಗರ ಭೇಟಿಯೇ ಸಾಕ್ಷಿ. ದೇವರಾಜ ಅರಸರ ಕಾಲಘಟ್ಟ ಬೇರೆ, ಸಿದ್ದರಾಮಯ್ಯ ಅವರ ಕಾಲಘಟ್ಟ, ಪರಿಸ್ಥಿತಿಯೇ ಬೇರೆ. ಹೀಗಾಗಿ ಈಗಿನ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ನಾಯಕತ್ವ ರಾಜ್ಯ ರಾಜಕಾರಣ, ಸಮುದಾಯಗಳ ದೃಷ್ಟಿಯಿಂದ ಅಗತ್ಯ ಎಂದರು.

ಇದೇ ವೇಳೆ, ಮುಂಬರುವ ಬಜೆಟ್ ವೇಳೆ ಸಿದ್ದರಾಮಯ್ಯ ಅವರು ಕಾಯಕ ಸಮುದಾಯಗಳ ಅಭಿವೃದ್ಧಿಗಾಗಿ ನಿಗಮ ಮಂಡಳಿಗಳನ್ನು ರದ್ದುಗೊಳಿಸಿ ಕಾಯಕ ಸಮಾಜಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಧಿಕಾರ ರಚಿಸಬೇಕು. ಈ ಬಜೆಟ್‌ನಲ್ಲಿ ಇದಕ್ಕೆ ಸಾವಿರ ಕೋಟಿ ಅನುದಾನ ತೆಗೆದಿಡಬೇಕು, ಪ್ರತಿ ತಾಲೂಕಿನಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರ ತೆರೆಯಬೇಕು, ಈಗಿರುವ ಶೇ. 15 ಮೀಸಲಾತಿಯನ್ನು ಶೇ. 27ಕ್ಕೆ ಹೆಚ್ಚಿಸಬೇಕೆಂದು ಮನವಿ ಮಾಡಿದರು. ಕಾಯಕ ಸಮುದಾಯಗಳ ಮುಖಂಡರಾದ ಕೆಂಪಶೆಟ್ಟಿ, ಮಹದೇವ ಗಾಣಿಗ, ರಮೇಶ್, ಶಿವರಾಜ್ ಮೊದಲಾದವರು ಇದ್ದರು.

# ಸಕರಾತ್ಮಕ ಚಿಂತನೆಗಳನ್ನು, ತಾಳ್ಮೆಯನ್ನು ರೂಢಿಸಿಕೊಳ್ಳಿ



ರಾಮನಗರ: ತಿಳಿದೋ, ತಿಳಿಯದೆಯೋ ತಪ್ಪು ಮಾಡಿ ಕಾರಾಗೃಹ ಸೇರಿದ್ದೀರಿ. ಇಲ್ಲಿರುವ ಸಮಯದಲ್ಲಿ ಸಕರಾತ್ಮಕ ಚಿಂತನೆಗಳನ್ನು ಮತ್ತು ತಾಳ್ಮೆಯನ್ನು ರೂಢಿಸಿಕೊಳ್ಳಿ ಎಂದು ಗಣೇಶ್ ಜ್ಯೂಯೆಲರ್ಸ್ ಮಾಲೀಕ ಲಕ್ಷ್ಮಣ್ ಕರೆ ನೀಡಿದರು.

ನಗರದಲ್ಲಿರುವ ಜಿಲ್ಲಾ ಕಾರಾಗೃಹದಲ್ಲಿ ಜಿಲ್ಲಾ ಕಾರಾಗೃಹ ಮತ್ತು ಕಲಾಪ್ರಿಯಾ ಚಾರಿಟಬಲ್ ಟ್ರಸ್ಟ್‌ಗಳು ಸಂಯುಕ್ತವಾಗಿ ಕಾರಾಗೃಹ ನಿವಾಸಿಗಳಿಗೆ ಹಮ್ಮಿಕೊಂಡಿದ್ದ ಮನಃ ಪರಿವರ್ತನೆ, ಯೋಗ, ಧ್ಯಾನ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಉತ್ತಮ ಆಲೋಚನೆಗಳನ್ನು ರೂಢಿಸಿಕೊಂಡರೆ ಕಾರಾಗೃಹದಿಂದ ಬಿಡುಗಡೆಯಾದ ನಂತರ ಸಮಾಜದಲ್ಲಿ ಮಾದರಿಯುತ ಬದುಕು ನಡೆಸಲು ಅನುಕೂಲವಾಗುತ್ತದೆ ಎಂದರು.

### ಆಂಬ್ಯುಲೆನ್ಸ್ ಕೊಡುಗೆ

ಸಮಾಜ ಸೇವೆ ಮಾಡಲು ಹಣವೇ ಮುಖ್ಯವಲ್ಲ. ಮನಸ್ಸಿನಲ್ಲಿ ಇಚ್ಚಾಶಕ್ತಿಯಿದ್ದರೆ ಸಾಕು, ಇದನ್ನು ನಾನು ಅಳವಡಿಸಿಕೊಂಡು ಜಿಲ್ಲಾ ಕಾರಾಗೃಹ ನಿವಾಸಿಗಳ ಅನಾರೋಗ್ಯ ಪೀಡಿತರಾದ ಸಂದರ್ಭದಲ್ಲಿ ಅವರ ಅನುಕೂಲಕ್ಕಾಗಿ ಆಸ್ಪತ್ರೆಗೆ ಹೋಗಿ ಬರಲು ಆಂಬ್ಯುಲೆನ್ಸ್ ಕೊಡುಗೆಯಾಗಿ ನೀಡಿರುವುದಾಗಿ ತಿಳಿಸಿದರು.

### ಮನಃ ಪರಿವರ್ತನೆ ಶಿಬಿರಗಳು ಉಪಯುಕ್ತ: ರಾಕೇಶ್ ಕಾಂಬಳೆ

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಜಿಲ್ಲಾ ಕಾರಾಗೃಹ ಅಧೀಕ್ಷಕರಾದ ರಾಕೇಶ್‌ಕಾಂಬಳೆ ಮಾತನಾಡಿ ಕಾರಾಗೃಹ ನಿವಾಸಿಗಳಿಗೆ ಅನುಕೂಲವಾಗುವಂತೆ ಸಂಘ ಸಂಸ್ಥೆಗಳ ಮೂಲಕ ತಮ್ಮ ಮನಪರಿವರ್ತನೆಗೆ ಅಗತ್ಯ ಅರಿವು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದೇವೆ. ಇಂತಹ ಶಿಬಿರಗಳು ಉಪಯುಕ್ತವಾಗಿವೆ ಎಂದರು. ಉದ್ಯಮಿ ಲಕ್ಮಣ್ ಅವರು ಉಚಿತವಾಗಿ ಆಂಬ್ಯುಲೆನ್ಸ್ ಕೊಡುಗೆ ನೀಡಿರುವುದನ್ನು ಶ್ಲಾಘಿಸಿದರು. ತಾವು ಕಲುಬುರುಗಿ ಕಾರಾಗೃಹಕ್ಕೆ ಎಸ್‌ಪಿಯಾಗಿ ಪದನ್ನೋತಿ ಪಡೆದಿದ್ದು ಅಲ್ಲಿಗೆ ತೆರಳುತ್ತಿರುವುದಾಗಿ ತಿಳಿಸಿದರು.

### ಕಾನೂನು ಅರಿವು, ಸಲಹೆ ನೀಡಬೇಕಾಗಿದೆ: ಜಯಮ್ಮ

ಸಮಾಜ ಸೇವಕಿ ಜಯಮ್ಮ ಮಾತನಾಡಿ ಕಾರಗೃಹ ನಿವಾಸಿಗಳಿಗೆ ಕಾನೂನು ಅರಿವು ಮತ್ತು ಸಲಹೆಗಳು ಅಗತ್ಯವಾಗಿ ಬೇಕಾಗಿದೆ. ಸಂಘ ಸಂಸ್ಥೆಗಳು ಈ ಶಿಬಿರವನ್ನು ಆಯೋಜಿಸಬೇಕು ಎಂದು ಸಲಹೆ ನೀಡಿದರು. ಕಲಾಪ್ರಿಯ ಚಾರಿಟಬಲ್ ಟ್ರಸ್ಟ್ ಧ್ಯಾನ, ಯೋಗ ಶಿಬಿರವನ್ನು ಆಯೋಜಿಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

### ಸಮಾಜ ಮುಖಿ ಕಾರ್ಯಕ್ರಮಗಳು ತೃಪ್ತಿ ತಂದಿದೆ – ಪಿ.ಸುಧಾರಾಣಿ

ಕಲಾಪ್ರಿಯ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಪಿ.ಸುಧಾರಾಣಿ ಕಲಾಪ್ರಿಯ ಮಾತನಾಡಿ ನಾವು ಮಾಡುವ ಸಮಾಜ ಮುಖಿ ಕಾರ್ಯಗಳು ಸಾರ್ಥಕವಾಗಬೇಕು, ಆ ನಿಟ್ಟಿನಲ್ಲಿ ಟ್ರಸ್ಟ್ ಪ್ರಾರಂಭದಿಂದಲೂ ಹತ್ತು ಹಲವು ಕಾರ್ಯಕ್ರಮ ನಡೆಸುತ್ತಾ ಬಂದಿದ್ದು, ಜಿಲ್ಲಾ ಕಾರಾಗೃಹದ ಅಧೀಕ್ಷಕರಾದ ರಾಕೇಶ್ ಕಾಂಬಳೆ ಅವರ ಸಲಹೆ ಪಡೆದು ಕಾರಗೃಹ ವಾಸಿಗಳಿಗೆ ಉಪಯುಕ್ತ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದ್ದೇವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಮಾಜಸೇವಕರಾದ ಲಕ್ಷ್ಮಣ್, ಸಂಧ್ಯಾಲಕ್ಷ್ಮಣ್, ಜಯಮ್ಮ, ಪಿ.ಸುಧಾರಾಣಿ ಅವರನ್ನು ಜಿಲ್ಲಾ ಕಾರಾಗೃಹದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಗಾಯಕ ಈರಣ್ಣ ಗೀತಗಾಯನ ನಡೆಸಿಕೊಟ್ಟರು. ವೇದಿಕೆಯಲ್ಲಿ ಅಂತರರಾಷ್ಟ್ರೀಯ ಯೋಗ ಪಟು ಶಿವಕುಮಾರ್, ಧ್ಯಾನ ಗುರು ಪಿರಮಿಡ್‌ಕೃಷ್ಣಪ್ಪ ಮಾತನಾಡಿದರು. ಸಮಾಜ ಸೇವಕ ಪರಮಶಿವಯ್ಯ, ಧ್ಯಾನ ಕೇಂದ್ರದ ಪ್ರೊ.ಸುರೇಶ್‌ಬಾಬು, ಕರ್ನಾಟಕ ಕಾರ್ಯನಿರತ ಪರ್ತಕರ್ತರ ಸಂಘದ ಖಜಾಂಚಿ ಕೆ.ಅರುಣ್, ಮುಖಂಡ ವಿನೋದ್ ಜಿಲ್ಲಾ ಕಾರಾಗೃಹದ ಜೈಲರ್‌ಗಳಾದ ಈರಪ್ಪ ಸದಲಾಪೂರ, ಇಮಾಮ್, ಸಹಾಯಕ ಜೈಲರ್‌ಗಳಾದ ಬಾಬು, ವಿವೇಕಾನಂದ, ಪ್ರವೀಣ್ ಸೇರಿದಂತೆ ಸಿಬ್ಬಂದಿವರ್ಗದವರು ಇದ್ದರು.

# ಚಾ.ನಗರದಲ್ಲಿ ಅರಿಶಿಣ ಮಂಡಳಿ ಎಂಎಲ್‌ಸಿ ಕೆ.ಶಿವಕುಮಾರ್ ಭರವಸೆ



ಮೈಸೂರು: ರಾಜ್ಯದ ಗಡಿ ಜಿಲ್ಲೆಯಾದ ಚಾಮರಾಜನಗರದಲ್ಲಿ ಗುಣಮಟ್ಟದ ಅರಿಶಿಣ ಬೆಳೆಯುತ್ತಾರೆ. ಅಲ್ಲಿ ಅರಿಶಿಣ ಮಂಡಳಿಯ ಪ್ರಾದೇಶಿಕ ಕೇಂದ್ರ ಸ್ಥಾಪಿಸಬೇಕು. ಇದಕ್ಕೆ ಅಗತ್ಯವಿರುವ ಜಾಗವನ್ನು ಸರ್ಕಾರದಿಂದ ಕೊಡಿಸುವುದಾಗಿ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ತಿಳಿಸಿದರು.

ತೋಟಗಾರಿಕೆ ಇಲಾಖೆ, ಕರ್ನಾಟಕ ರಾಜ್ಯ ಸಾಂಬಾರ ಪದಾರ್ಥಗಳ ಅಭಿವೃದ್ಧಿ ಮಂಡಳಿ, ರಾಷ್ಟ್ರೀಯ ಅರಿಶಿಣ ಮಂಡಳಿ, ಭಾರತೀಯ ಸಾಂಬಾರು ಮಂಡಳಿ ಸಹಯೋಗದೊಂದಿಗೆ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಅರಿಶಿಣ ಪದಾರ್ಥಗಳ ಖರೀದಿದಾರರು, ಮಾರಾಟಗಾರರ ಸಮಾವೇಶ ಉದ್ಘಾಟಿಸಿ ಮಾತನಾಡಿದರು. ಚಾಮರಾಜನಗರ ಜಿಲ್ಲೆಯಲ್ಲಿ ಸುಮಾರು 22 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅರಿಶಿಣ ಬೆಳೆಯಲಾಗುತ್ತಿದ್ದು, ಅಸ್ಸಾಂ ಮತ್ತು ಮೇಘಾಲಯದಷ್ಟೇ ಉತ್ತಮ ಗುಣಮಟ್ಟದ ಅರಿಶಿಣ ಇಲ್ಲಿ ಬೆಳೆಯುತ್ತಿದ್ದಾರೆ. ಆದರೆ, ಸರಿಯಾದ ಶೈತ್ಯಾಗಾರದ ವ್ಯವಸ್ಥೆ ಇಲ್ಲದೆ ರೈತರು ಬೆಳೆ ಹಾಳಾಗುವ ಭೀತಿಯಲ್ಲಿದ್ದಾರೆ. ಇದರಿಂದಾಗಿ ಮಧ್ಯವರ್ತಿಗಳು ರೈತರನ್ನು ಸುಲಭವಾಗಿ ವಂಚಿಸುತ್ತಿದ್ದಾರೆ. ರೈತರು ತಮಿಳುನಾಡಿನ ಯಂತ್ರಗಳ ಮೇಲೆ ಅವಲಂಬಿತರಾಗಿದ್ದು, ಸಂಸ್ಕರಣೆಗೆ ಹೆಚ್ಚಿನ ಹಣ ವ್ಯಯಿಸುವಂತಾಗಿದೆ. ಅಲ್ಲದೆ ಪ್ರಸ್ತುತ ಇರುವ ಹರಾಜು ವ್ಯವಸ್ಥೆ ರೈತರಿಗೆ ಪೂರಕವಾಗಿಲ್ಲ. ಹೀಗಾಗಿ ತೆಲಂಗಾಣದಲ್ಲಿರುವಂತೆ ಚಾಮರಾಜನಗರದಲ್ಲೂ ಅರಿಶಿನ ಮಂಡಳಿಯ ಪ್ರಾದೇಶಿಕ ಕೇಂದ್ರ ಸ್ಥಾಪನೆ ಮಾಡಬೇಕು. ಇದಕ್ಕೆ ಬೇಕಾದ ಅಗತ್ಯ ಜಾಗವನ್ನು ನಾನು ಸರ್ಕಾರದಿಂದ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ದೇಶದಲ್ಲಿ ಸಾಂಬರ ಪದಾರ್ಥಗಳು ವಾಣಿಜ್ಯ ಬೆಳೆಗಳಾಗಿದ್ದು, ಇದಕ್ಕೆ ಪೈಪೋಟಿ ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಗಳ ಯೋಜನೆಗಳ ಪ್ರಯೋಜನ ಪಡೆದುಕೊಳ್ಳುವ ಜೊತೆಗೆ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು ಎಂದರು. ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ಗಿರೀಶ್ ಮಾತನಾಡಿರು. ರಾಜ್ಯದ ವಿವಿಧ ಜಿಲ್ಲೆಗಳ 80ಕ್ಕೂ ಹೆಚ್ಚು ಮಂದಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಅರಿಶಿಣ ಮಂಡಳಿ ಅಧ್ಯಕ್ಷ ಪಲ್ಲೆ ಗಂಗಾರೆಡ್ಡಿ, ಸದಸ್ಯ ಚೇತನ್ ಕುಮಾರ್, ಈರಪ್ಪ ಯಡವಣ್ಣವರ್, ಡಾ.ಡಿ.ವಿಷ್ಣುವರ್ಧನ್, ಪ್ರಧಾನ ವ್ಯವಸ್ಥಾಪಕ ಡಾ.ರಾಮಚಂದ್ರ ಕೆ.ಮಡಿವಾಳ, ಲಕ್ಷ್ಮೀಕಾಂತ ಬೊಮ್ಮಣ್ಣನವರ, ಉಪ ವ್ಯವಸ್ಥಾಪಕ ಎಂ.ವೈ.ಹೊನ್ನುರ, ಉಪ ನಿರ್ದೇಶಕ ಶಿವಪ್ರಸಾದ್, ಹಿರಿಯ ಸಹಾಯಕ ನಿರ್ದೇಶಕ ಚೇತನ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಎನ್.ನಾಗರಾಜು, ಚಾಮರಾಜನಗರ ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಶಿವಪ್ರಸಾದ್ ಇತರರು ಉಪಸ್ಥಿತರಿದ್ದರು.

# ಗಾಂಧಿನಗರ: ಸಂಸದರಿಗೆ ಸಮಸ್ಯೆಗಳ ದರ್ಶನ

## ಯದುವೀರ್ ಕಾರು ಅಡ್ಡಗಟ್ಟಿ ಮನೆ ನಿರ್ಮಿಸಿಕೊಡುವಂತೆ ಆಗ್ರಹಿಸಿದ ವೃದ್ಧ ಮಹಿಳೆ





ಮೈಸೂರು: ಮನೆ ಕಟ್ಟಿಸಿಕೊಡಿ, ಹುಟ್ಟಿದಾಗಿನಿಂದ ಇಲ್ಲೇ ವಾಸಿಸುತ್ತಿರುವ ಮನೆ ಬಿದ್ದು ಹೋಗುತ್ತಿದೆ ಬನ್ನಿ ನೋಡಿ, ಇಲ್ಲಿ ಸ್ವಚ್ಚತೆ ಮಾಯವಾಗಿದೆ. ರಾತ್ರಿಯಾದರೆ ಗಾಂಜಾ, ಅನೈತಿಕ ಚಟುವಟಿಕೆ ನಡೆಸುವವರಿಗೆ ಕಡಿವಾಣ ಹಾಕಿ ಇವೆ ಮೊದಲಾದ ಸಮಸ್ಯೆಗಳ ದರ್ಶನ ಸಂಸದ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರಿಗೆ ಆಯಿತು.

ಗುರುವಾರ ನರಸಿಂಹ ರಾಜ ಕ್ಷೇತ್ರದ ವಿವಿಧೆಡೆ ಪ್ರವಾಸ ಕೈಗೊಂಡ ಅವರು ಗಾಂಧಿನಗರದ ಗರಡಿ ಮನೆ, ಸಿದ್ದಪಾಜಿ ದೇವಾಲಯಗಳಿಗೆ ಭೇಟಿ ನೀಡಿದರು. ಬಳಿಕ ಕಾಲ್ನಡಿಗೆ ಮೂಲಕ ಆಶ್ರಯ ಮನೆಗಳ ಸ್ಥಿತಿಗತಿ ಅರಿತರು. ಈ ವೇಳೆ ಸ್ಥಳೀಯ ಮಹಿಳೆಯರು ತಮ್ಮ ಮನೆ ಬಿದ್ದು ಹೋಗಿದೆ. ಇಲ್ಲೇ ಜೀವನ ನಡೆಸುತ್ತಿದ್ದೇವೆ. ಮನೆ ಕಟ್ಟಿಸಿಕೊಡಿ. ನಮಗೆ ಜಾಗ ಇಲ್ಲ ಈ ಗುಡಿಸಲಷ್ಟೇ ನಮ್ಮ ಮನೆ ಖಾತೆ ಮಾಡಿಸಿಕೊಡಿ ಮನೆ ನಿರ್ಮಿಸಿಕೊಳ್ಳು ಅವಕಾಶ ಕೊಡಿಸಿ ಎಂಬಿತ್ಯಾದಿ ಮನವಿ ಮಾಡಿದರು. ಇದೇ ವೇಳೆ ರಾಚಮ್ಮ, ಸಣ್ಣತಾಯಮ್ಮ ಮಾಡಿದ ಮನವಿಗೆ ಸ್ಪಂದಿಸಿದ ಯಧುವೀರ್ ಕೇಂದ್ರ ಯೋಜನೆಯಡಿ ಮನೆ ನಿರ್ಮಿಸಿಕೊಡಲು ಸಹಕಾರ ನೀಡುವ ಭರವಸೆ ನೀಡಿದರು.

### ಕಾರು ಅಡ್ಡಗಟ್ಟಿದ ವೃದ್ಧೆ

ಈ ವೇಳೆ ಕಾರು ಹತ್ತಿ ಬರುತ್ತಿದ್ದ ಸಂಸದರ ಕಾರು ಅಡ್ಡಗಟ್ಟಿದ ವೃದ್ಧೆ ದೇವಮ್ಮ ನಮ್ಮ ಮನೆಯನ್ನು ಕೆಳಗಿಳಿದು ಸ್ವಲ್ಪ ನೋಡಿ ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಯಿಸಿದ ಸಂಸದರು ಮನೆ ದಾಖಲೆ ನೀಡುವಂತೆ ಕೇಳಿದರು. ಇದಕ್ಕೆ ದಾಖಲೆಗಳಿಲ್ಲ, ನಾವು ಹುಟ್ಟಿನಿಂದಲೇ ಇಲ್ಲೇ ವಾಸವಿದ್ದೇವೆಂದಾಗ ಇಲ್ಲಿ ಕೆಲವೊಂದು ತಾಂತ್ರಿಕ ಕಾರಣಗಳಿದ್ದು, ಕಂದಾಯ ಅಧಿಕಾರಿಗಳನ್ನು ಕರೆತಂದು ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ಭರವಸೆ ನೀಡಿ ತೆರಳಿದರು.

ಇದೇ ವೇಳೆ ಸ್ಥಳೀಯರಾದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಶ್ರಯ ಮನೆಗಳ ಸಮೀಪ ಕಸ ಸಂಗ್ರಹಿಸದಿರುವುದು ಹಾಗೂ ಚರಂಡಿ ಸ್ವಚ್ಚಗೊಳಿಸದಿರುವುದು, ಆಶ್ರಯ ಮನೆ ನಿರ್ವಹಣೆ ಮಾಡದಿರುವ ಸಮಸ್ಯೆಗಳನ್ನು ತೆರೆದಿಟ್ಟರು. ಇದಕ್ಕೆ ಸಮಸ್ಯೆಗಳೆಲ್ಲವನ್ನೂ ಪಟ್ಟಿ ಮಾಡಿ ಕೊಡುವಂತೆ ಸಂಸದರು ತಿಳಿಸಿದರು. ಇದೇ ವೇಳೆ ಕುರಿಮಂಡಿ, ಕಸಾಯಿಖಾನೆ ಮತ್ತು ಗಣೇಶನಗರದ ಸ್ಟಾರ್ ಮೋಟಾರ್ ಟ್ರೈನೆಂಜ್ ನ ಸ್ಥಿತಿಗಳನ್ನುಅರಿತರು. ನಗರಪಾಲಿಕೆ ಮಾಜಿ ಸದಸ್ಯೆ ಅಶ್ವಿನಿ ಶರತ್ ಸ್ಥಳೀಯ ರಾಮಮಂದಿರ, ದೇವಾಲಯ, ಸಮುದಾಯ ಭವನಗಳ ಅಭಿವೃದ್ಧಿ ಹಾಗೂ ರಸ್ತೆ ಅಭಿವೃದ್ಧಿಗೆ ಅನುದಾನ ನೀಡುವಂತೆ ಸಂಸದರಿಗೆ ಕೋರಿದರು. ಗಾಂಧಿನಗರದ ಪುರಾತನ ಮಠದ ದೇವಾಲಯ ದಲ್ಲರುವ ಬೃಹತ್ ಅರಳಿಮರವನ್ನು ತೆರವುಗೊಳಿಸಿ ಮತ್ತಷ್ಟು ಅಭಿವೃದ್ಧಿ ಮಾಡುವುದಾಗಿ ತಿಳಿಸಿದ್ದಕ್ಕೆ ಪ್ರತಿಕ್ರಯಿಸಿದ ಸಂಸದರು ಮರವನ್ನು ಉಳಿಸಿಕೊಂಡೆ ಅಭಿವೃದ್ಧಿ ಮಾಡಿ ಎಂಬ ಸಲಹೆ ನೀಡಿದರು. ಬಿಜೆಪಿ ನಗರಪ್ರಧಾನ ಕಾರ್ಯದರ್ಶಿ ಗಿರಿಧರ್ ಇನ್ನಿತರು ಉಪಸ್ಥಿತರಿದ್ದರು.

### ತಾಲೂಕು ಕಚೇರಿಗೂ ಭೇಟಿ

ಮೈಸೂರು: ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನ ಸೌದಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜನ ಸಾಮಾನ್ಯರಿಗೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬ ದೂರಿನ ಮೇರೆಗೆ ತಾಲ್ಲೂಕು ಕಚೇರಿಯ ವಿವಿಧ ಇಲಾಖಾ ವಿಭಾಗಗಳಿಗೆ ಭೇಟಿ ಕಂದಾಯ, ಜನನ ಮತ್ತು ಮರಣ ಪ್ರಮಾಣ ಪತ್ರ ವಿಭಾಗ, ಆರ್‌ಟಿಸಿ ವಿತರಣಾ ಕೇಂದ್ರ, ಭೂ ದಾಖಲೆಗಳ ರೆಕಾರ್ಡ್ ರೂಮ್‌ಗಳಲ್ಲಿ ಪರಿಶೀಲನೆ ನಡೆಸಿದರು. ಜನ ಸಾಮಾನ್ಯರ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುವಂತೆ ಸೂಚನೆ ನೀಡಿದರು.

ಮೈಸೂರಿನಲ್ಲಿ ಪೊಲೀಸ್ ಪೇದೆ ಮೇಲೆ ಯುವಕರ ಗುಂಪು ಹಲ್ಲೆ ನಡೆಸಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಯದುವೀರ್, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಗೃಹ ಇಲಾಖೆ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಪತ್ತೆಯಾದ ಬಳಿಕವೂ ಎಚ್ಚೆತ್ತುಕೊಂಡಿಲ್ಲ. ಪೊಲೀಸರಿಗೆ ಹೀಗಾದರೆ ಕಾನೂನು ಸುವ್ಯವಸ್ಥೆ ಎಲ್ಲಿದೆ ಹೇಳಿ? ಮೈಸೂರು ಮಾತ್ರವಲ್ಲದೇ ಬಳ್ಳಾರಿ, ಹುಬ್ಬಳ್ಳಿ ಸೇರಿದಂತೆ ರಾಜ್ಯದ ಹಲವೆಡೆ ಗಲಾಟೆಗಳು ನಡೆದಿವೆ. ಹುಬ್ಬಳ್ಳಿ ಘಟನೆ ಅತ್ಯಂತ ಖಂಡನೀಯ. ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಿರುವುದು ಅಮಾನವೀಯ. ಈ ವಿಚಾರದಲ್ಲಿ ಸಂತ್ರಸ್ತ ಮಹಿಳೆಯ ವಿರುದ್ಧವೇ ಕಾಂಗ್ರೆಸ್ ಆರೋಪ ಮಾಡುತ್ತಿರುವುದು ಸರಿಯಲ್ಲ. ಪ್ರಕರಣದ ಸತ್ಯಾಸತ್ಯತೆ ತಿಳಿಯಲು ಸಮಗ್ರವಾದ ತನಿಖೆಯಾಗಲಿ ಎಂದರು.

### ತಿರುಗಿ ನೋಡದ ಶಾಸಕರು

**ಇದೇ ವೇಳೆ ಮಾತನಾಡಿದ ನಗರಪಾಲಿಕೆ ಮಾಜಿ ಸದಸ್ಯೆ ಅಶ್ವಿನಿ ಶರತ್ ದಂಪತಿ ಗಾಂಧಿನಗರ ಐತಿಹಾಸಿಕ ಗ್ರಾಮ ಅನೇಕ ವರ್ಷಗಳಿಂದ ಪೌರಕಾರ್ಮಿಕರು, ದಲಿತರು ವಾಸಿಸುವ ಸ್ಥಳವಾಗಿದೆ. ಬಹುತೇಕರು ವಾಸವಿದ್ದರೂ ಯಾವುದೇ ದಾಖಲೆಗಳಿಲ್ಲ. ಹೀಗಾಗಿ ಅವರು ಮನೆ ನಿರ್ಮಿಸಿಕೊಳ್ಳಲು ಸಹಾಯ ಪಡೆಯದ ಸ್ಥಿತಿಯಿದೆ. ಸ್ವಚ್ಚತೆಯಿಲ್ಲ, ರಸ್ತೆ ಸಮಸ್ಯೆಯಿದೆ. ಚುನಾವಣೆ ಸಮಯದಲ್ಲಿ ಬಂದಿದ್ದ ಶಾಸಕರೂ ಅದಾದ ಬಳಿ ಇತ್ತ ಕಡೆ ಸುಳಿದೇ ಇಲ್ಲ. ಇಲ್ಲಿ ಬಿಜೆಪಿ ಸದಸ್ಯೆ ಗೆದ್ದಿರುವುದಕ್ಕೆ ಸದರಿ ಭಾಗವನ್ನು ಶಾಸಕ ತನ್ವೀರ್ ಸೇಠ್ ನಿರ್ಲಕ್ಯಿಸಿದ್ದಾರೆಂದು ಕಿಡಿಕಾರಿದರು.**

# ಕ್ರೈಸ್ತ ಸಮುದಾಯದ ಅಭಿವೃದ್ಧಿ ಒತ್ತು



ಚಾಮರಾಜನಗರ, ಕ್ರೈಸ್ತ ಸಮುದಾಯದ ಅಭಿವೃದ್ಧಿ ಗೆ ಆದ್ಯತೆ ನೀಡಲಾಗಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ತಾಲೂಕಿನ ಸರಗೂರಿನ ಸಂತ ಜೋಸೆಫರ ದೇವಾಲಯದ ಪಕ್ಕದಲ್ಲಿ ಶೌಚಾಲಯ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಶೌಚಾಲಯ ನಿರ್ಮಾಣಕ್ಕೆ ಶೌಚಾಲಯ ನಿರ್ಮಾಣಕ್ಕೆ ಶಾಸಕರ ಅನುದಾನದಲ್ಲಿ 5 ಲಕ್ಷ ರೂ.ಮಂಜೂರು ಮಾಡಲಾಗಿದೆ. ತಾಲೂಕಿನ ಚರ್ಚ್ ಗಳ ಅಭಿವೃದ್ಧಿ ಗೆ ಅನುದಾನ ನೀಡಲಾಗಿದೆ. ಮಾಡಿ ಮುಂದಿನ ದಿನಗಳಲ್ಲಿ ಕ್ರೈಸ್ತ ಅಭಿವೃದ್ಧಿ ಗೆ ಒತ್ತು ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಫಾಧರ್ ಅಂತೋಣಿ ಸ್ವಾಮಿ, ಗ್ರಾ.ಪಂ.ಸದಸ್ಯರಾದ ಜಕಾವುಲ್ಲಾ ಷರೀಫ್, ಯಾಷನ್, ಸುರೇಶ್, ಮುಸ್ಲಿಂ ಮುಖಂಡ ನಸ್ರುವುಲ್ಲಾ ಷರೀಫ್, ಲಿಂಗರಾಜು, ಜೋಸೆಫ್, ಆರ್.ನಾಗರಾಜು, ಆರ್ಶೀವಾದ್, ಎಸ್.ಆರ್. ನಾಗರಾಜು, ಎಸ್.ವಿ.ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಕಲಾ ವೇದಿಕೆ ಪ್ರಧಾನ ಕಾರ್ಯದರ್ಶಿ ಎನ್. ಜೋಸೆಫ್, ಎಸ್.ಪಿ.ನಟರಾಜು ಹಾಜರಿದ್ದರು.

# ಸರ್ಕಾರಿ ನೇಮಕಾತಿ: ಬಲಗೈಗೆ ದ್ರೋಹ



ಮೈಸೂರು: ಸರ್ಕಾರಿ ನೇಮಕಾತಿಯಲ್ಲಿ ಬಲಗೈ ಸಮುದಾಯಕ್ಕೆ ದ್ರೋಹವಾಗಿದೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಸ್ತುತ ನೇಮಕಾತಿಯಲ್ಲಿ ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ 76 ಹುದ?ದೆ ಅಂದರೆ ಶೇ. 13 ಇದೆ. ಆದರೆ ಸರ್ಕಾರದ ಅಧಿನಿಯಮದ ಪ್ರಕಾರ ಶೇ. 6 ಇರಬೇಕಿತ್ತು. ಆದರೆ ಈಗಿನ ರೋ ಸ್ಟರ್ ಬಿಂದುವಿನಂತೆ ಶೇ. 7 ಹೆಚ್ಚುವರಿ ಆಗಿದೆ. ಆದರೆ ಪ್ರವರ್ಗ ಬಿ ಹೊಲಯ ಸಂಬಂಧಿತ ಜಾತಿ ಗಳಿಗೆ ಕೇವಲ 23 ಹುದ್ದೆಗಳನ್ನು ನೀಡಿ ಅಂದರೆ ಶೇ.4 ನೀಡಿದೆ. ವಾಸ್ತವವಾಗಿ ಇರಬೇಕಾಗಿದ್ದು ಶೇ.6 ಉದ್ದೇಶಪೂರ್ವಕಾಗಿ ಶೇ.2 ಕಡಿತಗೊಳಿಸಿದ್ದು ಇದು ಸಮಾನತೆಯ ತತ್ವಕ್ಕೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ.

ಸರ್ವೋಚ್ಚ ನ್ಯಾಯಾಲಯವು ಒಳ ಮೀಸಲು ಜಾತಿಗೊಳಿಸಬೇಕೆಂದು ಹೇಳಿಲ್ಲ. ಆ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಿದೆ. ಇದನೇ ಬಂಡವಾಳ ಮಾಡಿಕೊಂಡ ರಅಜ್ಯ ಸರ್ಕಾರವು ಸರ್ಕಾರಿ ನೇಮಕಾತಿಯಲ್ಲಿ ಬಲಗೈ ಸಮುದಾಯಗಳಿಗೆ ಅನ್ಯಾಯವೆಸಗುತ್ತಿದೆ. ಇದು ಸರ್ಕಾರಿ ನೌಕರರ ಬಡ್ತಿಯಲ್ಲೂ ಅನ್ಯಾಯವಾಗುವುದು ನಿಶ್ಚಿತವಾಗಿದೆ ಎಂದರು. ಬಲಗೈ ಸಮುದಾಯಕ್ಕೆ ಅನ್ಯಾಯವೆಸಗುವ ಒಳ ಮೀಸಲು ವಿರುದ್ಧ ಯಾರೊಬ್ಬರೂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಲಿಲ್ಲ ಅಥವಾ ಆಯೋಗದ ಅವೈಜ್ಞಾನಿಕ ವರದಿ ವಿರುದ್ಧ ನ್ಯಾಯಾಲಯದಲ್ಲಿ ತಡೆಯಾಜ್ಞೆ ತರಲಿಲ್ಲ. ಅಲ್ಲದೇ ಹೋರಾಟಗಾರರಿಗೂ ಅವಕಾಶ ಕೊಡಲಿಲ್ಲ. ಈ ಅಪಾಯವನ್ನು ಅರಿತು ಸರ್ಕಾರಿ ನೌಕರರು ಮುಂದಾದರೂ ಒಗ್ಗಟ್ಟಿನಿಂದ ಸಮುದಾಯದ ಹಿತಕ್ಕಾಗಿ ಮತ್ತು ಸಂವಿಧಾನದ ರಕ್ಷಣೆಗಾಗಿ ಎದ್ದು ನಿಲ್ಲಬೇಕಿದೆ. ಸರ್ಕಾರಿ ನೌಕರಿಯಲ್ಲಿ ಬಲಗೈ ಸಂಬಂಧಿತ ಜಾತಿಗಳ ಬಲವನ್ನು ಕಡಿಮೆಗೊಳಿಸಿ ಆ ಮೂಲಕ ಬಲಗೈ ಸಮುದಾಯವನ್ನು ವ್ಯವಸ್ಥಿತವಾಗಿ ಸರ್ಕಾರಿ ಕ್ಷೇತ್ರದಲ್ಲಿ ನಾಶಗೊಳಿಸಲು ಪಿತೂರಿ ನಡೆಸಲಾಗುತ್ತಿದೆ ಎಂದರು.

# ಮಾನವೀಯ ಮೌಲ್ಯ ಬೆಳೆಸಿಕೊಳ್ಳಿ

**ಹನೂರು:** ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆ ಎಂದು ಜರಗನಹಳ್ಳಿಯ ಜನಪದಸಿರಿ ಯೂಟ್ಯೂಬ್ ಚಾನೆಲ್‌ನ ಕಾಂತರಾಜು ತಿಳಿಸಿದರು.

ತಾಲೂಕಿನ ಕಾಡಂಚಿನ ಗ್ರಾಮ ಕುರಟ್ಟಿ ಹೊಸೂರು ಕಾಲೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತವಾಗಿ ಶಾಲಾ ಬ್ಯಾಗ್ ಗಳನ್ನು ವಿತರಣೆ ಮಾಡಿ ನಂತರ ಮಾತನಾಡಿದರು. ಮನುಷ್ಯ ಇತ್ತೀಚಿನ ದಿನಗಳಲ್ಲಿ ತನ್ನ ಸ್ವಾರ್ಥತೆಯಿಂದ ಎಲ್ಲವನ್ನು ಮರೆಯುತ್ತಿದ್ದಾನೆ, ಜತೆಗೆ ಮೆರೆಯುತ್ತಿದ್ದಾನೆ. ಸಮಾಜದಲ್ಲಿ ಸಮಾಜದ ಒಳಿತಿಗಾಗಿ ಮನುಷ್ಯ ತನ್ನ ಕೈಲಾದಷ್ಟು ಸಹಾಯ ಮಾಡುವಂತಾಗಬೇಕು. ಹಾಗಿದ್ದಾಗ ಮಾತ್ರ ಮನುಷ್ಯತ್ವಕ್ಕೆ ಒಂದು ಅರ್ಥ ಸಿಗುತ್ತದೆ. ಆ ನಿಟ್ಟಿನಲ್ಲಿ ನಾನು ಸಹ ಇದೊಂದು ಸಮಾಜ ಸೇವೆ ಎಂದು ಭಾವಿಸಿ, ನನ್ನ ಕೈಲಾದಷ್ಟು ಸೇವೆಯನ್ನು ಶಾಲಾ ಮಕ್ಕಳಿಗೆ ವಿನಿಯೋಗ ಮಾಡಿದ್ದೇನೆ, ಇದರ ಸದುಪಯೋಗ ಪಡೆದುಕೊಂಡು ಮಕ್ಕಳು ಓದಿನಲ್ಲಿ ಮುಂದೆ ಬಂದು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಬೇಕು ಎಂದರು.

ಕುರಟ್ಟಿ ಹೊಸೂರು ಕಾಲೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಮುತ್ತುಸ್ವಾಮಿ ಮಾತನಾಡಿ, ಸರ್ಕಾರಿ ಶಾಲೆಯ ಮಕ್ಕಳಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಜತೆಗೆ ದಾನಿಗಳ ನೆರವಿನಿಂದಲೂ ಸಹ ಅನೇಕ ರೀತಿಯ ಸೌಲಭ್ಯಗಳು ಇತ್ತೀಚಿನ ದಿನಗಳಲ್ಲಿ ಸಿಗುತ್ತಿದೆ. ದಾನಿಗಳಿಂದ ಪಡೆದಂತಹ ಸವಲತ್ತುಗಳನ್ನು ಬಳಸಿಕೊಂಡು ಚೆನ್ನಾಗಿ ಓದುವ ಮೂಲಕ ತಮ್ಮ ಭವಿಷ್ಯಕ್ಕೆ ತಾವೇ ಉತ್ತಮವಾದ ಮಾರ್ಗವನ್ನು ಗುರುಗಳ ಸಹಾಯದಿಂದ ಕಂಡು ಹಿಡಿದುಕೊಳ್ಳಬೇಕು ಎಂದರು.ಇದೇ ಸಂದರ್ಭದಲ್ಲಿ ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷೆ ಕವಿತಾ, ಉಪಾಧ್ಯಕ್ಷ ರಾಜು, ಚಿತ್ರಕಲ ಶಿಕ್ಷಕರಾದ ಕುಮಾರ್ ದೊಮ್ಮನಗದ್ದೆ, ಸಹ ಶಿಕ್ಷಕರಾದ ರಾಜೇಂದ್ರ ಬಾಬು, ಸಯ್ಯದ್ ನದಿಮ್ ಅಹಮದ್, ಅತಿಥಿ ಶಿಕ್ಷಕ ಮಹೇಶ್ ಇದ್ದರು.



# ನೇನೇಕಟ್ಟೆಯಲ್ಲಿ ಚಿರತೆ ಪ್ರತ್ಯಕ್ಷ

ಗುಂಡ್ಲುಪೇಟೆ :–ತಾಲೂಕಿನ ನೇನೇಕಟ್ಟೆ ಗ್ರಾಮದಲ್ಲಿ ಚಿರತೆಯ ಓಡಾಟ ಕಂಡು ಬಂದಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ

ತಡರಾತ್ರಿ ಗ್ರಾಮದ ಒಳಗೆ ಪ್ರವೇಶಿಸಿ ರುವ ಚಿರತೆ ನಿರ್ಭಯವಾಗಿ ಓಡಾಟ ನಡೆಸಿದೆ ಚಿರತೆಯ ಚಲನವಲನ ಸಿ ಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ವಲಯಕ್ಕೆ ಸೇರಿದ ನೇನೇಕಟ್ಟೆಯಲ್ಲಿ ಕಾಣಿಸಿ ಕೊಂಡಿರುವ ಚಿರತೆಯಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ ಚಿರತೆಯ ಚಲನವಲನ ಸಿ ಸಿ ಟಿವಿಯಲ್ಲಿ ಸೆರೆಯಾಗಿದ್ದು ಮುಂಜಾನೆ ಸಮಯದಲ್ಲಿ ದೃಶ್ಯ ನೋಡಿದವರು ಭಯ ಭೀತರಾಗಿದ್ದು.ಈ ಘಟನೆಯಿಂದ ಕೃಷಿ ಚಟುವಟಿಕೆಗಳಿಗೆ ಜಮೀನುಗಳಿಗೆ ತೆರಳಲು ರೈತರು ಹಿಂದೇಟ್ಟು ಹಾಕುತ್ತಿದ್ದಾರೆ ಕೂಡಲೇ ಸಂಬಂಧಪಟ್ಟ ಅರಣ್ಯ ಇಲಾಖೆ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಅಗ್ರಹಿಸಿದ್ದಾರೆ



## ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯ

# ಪತ್ರಕರ್ತರು ಸರ್ಕಾರ–ಸಾರ್ವಜನಿಕರ ನಡುವಿನ ಸೇತುವೆ




ಎಚ್.ಡಿ.ಕೋಟೆ: ಪತ್ರಕರ್ತರು ಸರ್ಕಾರ ಹಾಗೂ ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆಯಾಗಿ ಪ್ರತಿನಿತ್ಯ ದಿನದ 24 ಗಂಟೆಗಳೂ ಕಾರ್ಯನಿರ್ವಹಿಸುತ್ತಾರೆ ಎಂದು ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯ ಪಟ್ಟರು.

ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಎಚ್.ಡಿ. ಕೋಟೆ–ಸರಗೂರು ತಾಲೂಕಿನ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ನಂತರ ಪತ್ರಿಕಾ ರಂಗಕ್ಕೂ ಹೆಚ್ಚಿನ ಮಹತ್ವ ನೀಡಲಾಗಿದೆ. ಪತ್ರಕರ್ತರು ಸಮಾಜದ ಆಧಾರ ಸ್ತಂಭವಾಗಿ ನಿಲ್ಲುತ್ತಿದ್ದಾರೆ ಎಂದು ತಿಳಿಸಿದರು.

ವರದಿ ಮಾಡುವಾಗ ಏರು–ಪೇರಾದರೂ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ. ಆದ್ದರಿಂದ, ಎಚ್ಚರಿಕೆಯಿಂದ, ನಿಷ್ಪಕ್ಷಪಾತ, ನೈಜ ಸುದ್ದಿ ಪ್ರಕಟಿಸುವ ಜವಾಬ್ದಾರಿಯೊಂದಿಗೆ, ಸಾಕಷ್ಟು ಒತ್ತಡದಿಂದ ವರ್ಷದ 365 ದಿನಗಳಲ್ಲಿಯೂ ಸಮಯದ ಹಾಗೂ ಹಬ್ಬ–ಹರಿದಿನಗಳ ಅರಿವಿಲ್ಲದೆ, ಕುಟುಂಬಸ್ಥರೊಂದಿಗೆ ಹೆಚ್ಚಾಗಿ ಕಾಲ ಕಳೆಯದೆ ವರದಿಗಾರಿಕೆಗೆ ಹೆಚ್ಚಿನ ಮಹತ್ವ ನೀಡುತ್ತಾರೆ ಎಂದರು.

ಪತ್ರಿಕಾ ವೃತ್ತಿ ಪವಿತ್ರವಾದದ್ದು, ಸಮಾಜದಲ್ಲಿ ನಡೆಯುವ ಆಗು–ಹೋಗುಗಳನ್ನು ಜನರಿಗೆ ತಿಳಿಸುವ ಜೊತೆಗೆ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಎಚ್ಚರಿಸುವ, ಪ್ರಶಂಸಿಸುವ, ಅವರ ಸರಿ–ತಪ್ಪುಗಳನ್ನು ಸಾರ್ವಜನಿಕರಿಗೆ ತೆರೆದಿಡುವ ಕೆಲಸವನ್ನು ಪತ್ರಕರ್ತರು ಮಾಡುತ್ತಿದ್ದಾರೆ. ಸಮಾಜಮುಖಿ ಕೆಲಸಗಳು ಹಾಗೂ ಅಭಿವೃದ್ಧಿ ಕಾರ್ಯಗಳಲ್ಲೂ ಪತ್ರಕರ್ತರ ಪಾಲು ಇದೆ ಎಂದು ಪ್ರಶಂಸಿಸಿದರು.

ಎಚ್.ಡಿ.ಕೋಟೆ– ಸರಗೂರು ಅಧ್ಯಕ್ಷ ರಮೇಶ್ ಕೋಟೆ, ಉಪಾಧ್ಯಕ್ಷ ಸೋಮೇಶ್, ಕಾರ್ಯದರ್ಶಿ ಶಿವಲಿಂಗ, ಖಜಾಂಚಿ ರಘುರಾಮ್, ನಿರ್ದೇಶಕರಾದ ಉಮೇಶ್. ಬಿ. ನೂರಲಕುಪ್ಪೆ, ತುಂಬಸೋಗೆ ಶಿವಕುಮಾರ, ಶ್ರೀಕಂಠ ಈಶ್ವರ್, ಮುರುಳೀಧರ, ಮಹದೇವಸ್ವಾಮಿ, ಕಬಿನಿ ಗೋವಿಂದರಾಜು, ತಿಮ್ಮರಾಜು, ಲಾವಣ್ಯ ಇದ್ದರು.



**ಹಿಂದುಳಿದ ತಾಲೂಕನ್ನು ಅಭಿವೃದ್ಧಿ ಪಡಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಪತ್ರಿಕಾ ರಂಗಕ್ಕೆ ಯುವ ಸಮೂಹ ಹೆಚ್ಚಾಗಿ ಬರಬೇಕಿದೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪತ್ರಿಕೋದ್ಯಮದ ಕೋರ್ಸ್ ತೆರೆಯುವಂತೆ ಶಾಸಕರಿಗೆ ಮನವಿ ಮಾಡಿದ್ದೇವೆ. ತಾಲೂಕಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿದ್ದು, ಪತ್ರಿಕೋದ್ಯಮ ಪದವಿ ಪಡೆದವರ ಸಂಖ್ಯೆ ಹೆಚ್ಚಳವಾಗಬೇಕು.**

**ರಮೇಶ್** ಅಧ್ಯಕ್ಷ, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ, ಹೆಚ್.ಡಿ.ಕೋಟೆ–ಸರಗೂರು ತಾಲೂಕು.

# ನನ್ನ ತ್ಯಾಗ ನೋಡಿ ಟಿಕೆಟ್ ಕೊಡುವ ವಿಶ್ವಾಸವಿದೆ: ಜಯಪ್ರಕಾಶ್



ಮೈಸೂರು: ಸತತ ಮೂವತ್ತು ವರ್ಷಗಳಿಂದಲೂ ಚಾಮರಾಜ ವಿಧಾನ ಸಭಾಕ್ಷೇತ್ರದ ಸಾಮಾಜಿಕ, ರಾಜಕೀಯವಾಗಿ ಚಟುವಟಿಕೆಯಿಂದ ಇರುವ ನನ್ನ ತ್ಯಾಗವನ್ನು ನೋಡಿ ಪಕ್ಷ ಮುಂದಿನ ಚುನಾವಣೆಯಲ್ಲಿ ನನಗೆ ಟಿಕೇಟ್ ನೀಡುವ ವಿಶ್ವಾಸವಿದೆ ಎಂದು ನಟ ಹಾಗೂ ಬಿಜೆಪಿ ಮುಖಂಡ ಜಯಪ್ರಕಾಶ್ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ತಾವೇ ಚಾಮರಾಜ ಕ್ಷೇತ್ರದ ಅಭ್ಯರ್ಥಿ ಎಂಬಂತೆ ಘೋಷಣೆ ಮಾಡಿಕೊಂಡ ಮಾಜಿ ಸಂಸದರ ನಡೆಯನ್ನು ಖಂಡಿಸಿದರು. 1993ರಲ್ಲಿ ಮೊದಲ ಬಾರಿಗೆ ಕ್ಷೇತ್ರದ ಆಕಾಂಕ್ಷಿಯಾಗಿದ್ದೇನು. ಆಗ ಶಂಕರಲಿಂಗೇಗೌಡರು ಮಾಡಿದ ಮನವಿಗೆ ಟಿಕೇಟ್ ತ್ಯಾಗ ಮಾಡಿದ್ದೇನೆಂದರು.

ಅವರು ಸತತವಾಗಿ ಗೆಲುತ್ತಾ ಬಂದ ವೇಳೆಯಲ್ಲೂ ಅವರಿಗೆ ತೊಂದರೆ ಮಾಡಲು ಹೋಗಿಲ್ಲ. ಬಳಿಕ ನಾಗೇಂದ್ರರವರು ಟಿಕೇಟ್ ಕೇಳಿದಾಗಲೂ ನಾನು ವರಿಷ್ಠರವರೆಗೂ ಟಿಕೇಟ್ ಕೇಳಿ ಬಂದಿದ್ದೆ ಆಗಲೂ ಪಕ್ಷದ ಹಿರಿಯ ನಾಯಕರು ಮನೆಗೆ ಬಂದೂ ಕೇಳಿಕೊಂಡ ಹಿನ್ನೆಲೆಯಲ್ಲಿ ಮೌನವಹಿಸಿ ಪಕ್ಷಕ್ಕಾಗಿ ದುಡಿದಿದ್ದೇನೆ. ಹಿರಿಯ ನಾಯಕರಾಗಿದ್ದ ದಿ.ಅನಂತಕುಮಾರ್, ಡಾ. ಜೀವರಾಜ್ ಆಳ್ವ ಜೊತೆ ಸೇರಿ ಈ ಹಿಂದೆ ಪಕ್ಷದ ಸಮಾವೇಶವನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಿ ಪಕ್ಷಕ್ಕಾಗಿಯೂ ದುಡಿದ್ದೇನೆ. ಹೀಗೆ ಮೂವತ್ತು ವರ್ಷದಿಂದ ಈವರೆಗೂ ಜನಸೇವೆಯನ್ನೇ ಮಾಡಿಕೊಂಡು ಬಂದಿದ್ದೇನೆ. ಹೀಗಿರುವಾಗ ನೇರವಾಗಿ ಸಂಸದರಾಗಿ ಆಯ್ಕೆಯಾದ ಪ್ರತಾಪಸಿಂಹರೂ ಇನ್ನೂ ಕಾರ್ಯಕರ್ತರ, ಪಕ್ಷದ ಸೇವೆ ಮಾಡಿ ಅನಂತರ ಟಿಕೇಟ್ ಕೇಳಬೇಕು. ಅದು ಹೊರತಾಗಿ ಈಗಲೇ ಟಿಕೇಟ್ ಕೇಳುವುದು ಸರಿಯಲ್ಲ ಎಂದರು. ಬಿಜೆಪಿ ವರಿಷ್ಠರೂ ಟಿಕೇಟ್ ಗೊಂದಲದ ಬಗ್ಗೆ ಈಗಲೇ ಸ್ಪಷ್ಟಪಡಿಸಬೇಕು. ನನ್ನ ತ್ಯಾಗವನ್ನು ಪರಿಗಣಿಸಿ ನನಗೆ ಟಿಕೇಟ್ ಘೋಷಣೆ ಮಾಡುತ್ತಾರೆಂಬ ನಂಬಿಕೆಯಿದೆ ಎಂದು ಹೇಳಿದರು. ಬೆಂಬಲಿಗರಾದ ಶಿವಕುಮಾರ್, ಶಾಂತ, ತೇಜಸ್ ಲೋಕೇಶ್‌ಗೌಡ, ಶಾಂತಮ್ಮ ಹಾಗೂ ಮಂಜುಳ ಇನ್ನಿತರರು ಹಾಜರಿದ್ದರು.

# ರಾಮನಗರದಲ್ಲಿ ಆದಿಯೋಗಿ ರಥ ಸಂಚಾರ



ರಾಮನಗರ: ಈಶ ಮಹಾಶಿವರಾತ್ರಿ ಶಿವಾಂಗ ಸಾಧನದ ಭಾಗವಾಗಿ, ಆದಿಯೋಗಿ ರಥದ ಶಿವ ಯಾತ್ರೆಯು ಶುಕ್ರವಾರ ರಾಮನಗರ ತಾಲ್ಲೂಕು ಪ್ರವೇಶಿಸಿದ್ದು, ಕೈಲಾಂಚ ಹೋಬಳಿಯ ಎಸ್.ಆರ್.ಎಸ್ ಬೆಟ್ಟ, ಕೈಲಾಂಚ ಗ್ರಾಮ, ಕೃಷ್ಣಾಪುರ ದೊಡ್ಡಿ, ಅಚ್ಚಲು ಗ್ರಾಮಗಳ ಮೂಲಕ ಸಾಗಿದ ವೇಳೆ ಆಸ್ತಿಕರು ತಮ್ಮ ಭಕ್ತಿ ಸಮರ್ಪಿಸಿದರು.

ಡಿ.7ರಂದು ಉಡುಪಿಯಿಂದ ಆರಂಭವಾದ ರಥಯಾತ್ರೆ, ಫೆ.15ರಂದು ಕೊಯಂಬತ್ತೂರಿನ ಈಶ ಯೋಗ ಕೇಂದ್ರವನ್ನು ತಲುಪಿ ಸಮಾಪನೆಯಾಗಲಿದೆ. ಸುಮಾರು 1000ಕ್ಕೂ ಹೆಚ್ಚು ಕಿಮೀ ಮಾರ್ಗವನ್ನು ರಥಯಾತ್ರೆ ಕ್ರಮಿಸಲಿದೆ. ಆದಿಯೋಗಿ ರಥವು, ಒಂದು ಚಲಿಸುವ ಪವಿತ್ರ ಕ್ಷೇತ್ರದಂತಿದ್ದು, ಭೇಟಿ ನೀಡುವ ಪ್ರತಿಯೊಂದು ಪಟ್ಟಣದಲ್ಲಿ ಭಕ್ತಿ, ಯೋಗ ಅಭ್ಯಾಸಗಳಿಗೆ ಅವಕಾಶವನ್ನು ನೀಡುತ್ತದೆ ಎಂದು ರಥಯಾತ್ರೆಯ ಉಸ್ತುವಾರಿಗಳು ತಿಳಿಸಿದ್ದಾರೆ. ರಥವನ್ನು ಶಿವಾಂಗ ಸಾಧಕರು ಮತ್ತು ಭಕ್ತರು ದೈಹಿಕವಾಗಿ ಎಳೆಯುತ್ತಾರೆ, ಯಾತ್ರೆಯ ಉದ್ದಕ್ಕೂ, ಸಾವಿರಾರು ಜನರು ಸರಳ ಯೋಗ ಅಭ್ಯಾಸಗಳು, ಸೇವೆ, ಸ್ವಯಂಸೇವೆ ಮತ್ತು ವಿವಿಧ ಭಕ್ತಿ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವನ್ನು ಹೊಂದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಜನವರಿ 10ರಂದು, ಯಾತ್ರೆಯು ರಾಮನಗರದಿಂದ ಹೊರಟು ಹಳ್ಳಿಮಾಳ, ಹರಿಸಂದ್ರ, ಬೊಮ್ಮಚನಹಳ್ಳಿ, ಹಗಲಹಳ್ಳಿ, ಮುಂಚಿನಬೆಲೆ ಅಣೆಕಟ್ಟು, ಹುಳುವೇನಹಳ್ಳಿ, ಪುರದಪಾಳ್ಯ, ಪೆದ್ದನಪಾಳ್ಯ ಸ್ಥಳಗಳ ಮೂಲಕ ಸಾಗಿ ತಾವರೆಕೆರೆಗೆ ತಲುಪಲಿದೆ ಎಂದು ಪ್ರಕಟಣೆ ತಿಳಿಸಿದೆ.



**ಮೈಸೂರಿನ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಮಾನಿಗಳ ಬಳಗ ನೂತನ ಕ್ಯಾಲೆಂಡರ್ ಅನ್ನು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಜ್ವಾಲಾಮುಖಿ ಆಂಬ್ಯುಲೆನ್ಸ್ ಮಾಲೀಕ ಹಾಗೂ ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ವೈ ಕೆ ಮಂಜುನಾಥ್ ನೇತೃತ್ವದಲ್ಲಿ ಬಿಡುಗಡೆ ಮಾಡಿದರು. ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷ ರವಿಕುಮಾರ್, ವರುಣಾ ಸ್ವಾಮಿ, ಕಾರ್ ಮಹದೇವ್, ಮಹೇಶ್ ವರುಣಾ. ಮೈಸೂರು ರಮೇಶ್ ಗೌಡ, ಮಂಡ್ಯ ಜೋಗಿ ಇದ್ದರು.**

# ಒಳಮೀಸಲಾತಿ ಕಲ್ಪಿಸುವಲ್ಲಿ ರಾಜ್ಯ ಸರ್ಕಾರ ವಿಫಲ

ಚಾಮರಾಜನಗರ, ಸಂವಿಧಾನ, ಸುಪ್ರೀಂ ಕೋರ್ಟ್ ಆಶಯಕ್ಕೆ ಅನುಗುಣವಾಗಿ ಶಿಕ್ಷಣ, ನೇಮಕಾತಿ ಜೊತೆಗೆ ಮೀಸಲಾತಿ ಅನ್ವಯ ವಾಗುವ ಎಲ್ಲ ಕ್ಷೇತ್ರಗಳಲ್ಲಿ ಒಳಮೀಸಲಾತಿ ನೀಡಬೇಕು ಎಂದು ಮಾದಿಗ, ಸಮಗಾರ, ದೋಹರ, ದಕ್ಕಲಿಗ ಉಪಜಾತಿಗಳ ಸಂಘಟನೆ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿಅರಕಲವಾಡಿ ನಾಗೇಂದ್ರ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯ ಸರ್ಕಾರ ಅಧಿವೇಶನದಲ್ಲಿ ಸಂವಿಧಾನ, ಸುಪ್ರೀಂಕೋರ್ಟ್ ಆದೇಶಕ್ಕೆ ವಿರುದ್ಧವಾಗಿ ಬಿಲ್ ಮಾಡಿ ಕೇವಲ ಶಿಕ್ಷಣ, ನೇಮಕಾತಿಯಲ್ಲಿ ಮಾತ್ರ ಒಳಮೀಸಲಾತಿ ನೀಡುವ ಮೂಲಕ ದಲಿತ ಸಮುದಾಯದಲ್ಲಿ ಗೊಂದಲ, ಅನುಮಾನ ಉಂಟುಮಾಡಿ ಗೊಂದಲ ಉಂಟುಮಾಡಿದ್ದಾರೆ ಎಂದು ದೂರಿದರು. ಕರ್ನಾಟಕ ಸರ್ಕಾರಕ್ಕೆ ಒಳಮೀಸಲಾತಿಯನ್ನು ನ್ಯಾಯಬದ್ಧವಾಗಿ ಜಾರಿ ಮಾಡುವ ಸುವರ್ಣಾವಕಾಶವಿತ್ತು. ಆದರೆ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ಎಲ್ಲ 101ಜಾತಿಗಳಿಗೆ ಸಾಮಾಜಿಕ ನ್ಯಾಯವನ್ನು ಹಂಚುವಲ್ಲಿ ವಿಫಲವಾಗಿದೆ. ಸಾಮಾಜಿಕ ನ್ಯಾಯದ ಎದುರು ಓಟ್ ಬ್ಯಾಂಕ್ ರಾಜಕಾರಣ ಮೇಲುಗೈ ಸಾಧಿಸಿದೆ. ಪರಿಣಾಮವಾಗಿ ಸುಪ್ರೀಂಕೋರ್ಟ್ ತೀರ್ಪು ಬಂದು 16 ತಿಂಗಳು ಕಳೆದರೂ ಒಳಮೀಸಲಾತಿಯ ಜಾರಿ ಸಮರ್ಪಕವಾಗಿ ಆಗದೆ ಎಲ್ಲ ಪರಿಶಿಷ್ಟ ಜಾತಿಗಳಲ್ಲಿ ಅಸಮಾಧಾನ ಮನೆ ಮಾಡಿದೆ ಎಂದರು. ಸುಪ್ರೀಂಕೋರ್ಟಿನ ಏಳು ಸದಸ್ಯರ ಪೀಠ 2024 ಆಗಸ್ಟ್ 1ರಂದು ಐತಿಹಾಸಿಕ ತೀರ್ಪು ನೀಡಿ ಒಳಮೀಸಲಾತಿಯನ್ನು



ಜಾರಿ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕಾರಗಳಿಗೆ ಇದೆ ಎಂದು ಸ್ಪಷ್ಟವಾಗಿ ಹೇಳಿತು. ಹರ್ಯಾಣ, ತೆಲಂಗಾಣ, ಆಂಧ್ರಪ್ರದೇಶ ಸರ್ಕಾರಗಳು ಕೇವಲ 6 ತಿಂಗಳಲ್ಲಿ ಒಳಮೀಸಲಾತಿಯನ್ನು ವೈಜ್ಞಾನಿಕವಾಗಿ, ಗೊಂದಲ ಇಲ್ಲದಂತೆ ಜಾರಿ ಮಾಡಿದವು. ಆದರೆ ಕರ್ನಾಟಕ ಸರ್ಕಾರ 16 ತಿಂಗಳ ನಂತರವೂ ತಾನೇ ಮಾಡಿಕೊಂಡ ಗೊಂದಲಗಳಿಂದ ಒಳಮೀಸಲಾತಿ ಜಾರಿಮಾಡಲಾಗದೆ ತಿಣುಕಾಡುತ್ತಿದೆ.ನ್ಯಾ ನಾಗಮೋಹನ್ ದಾಸ್ ಆಯೋಗವನ್ನು ರಚಿಸಿ. ದಲಿತರ ಮೀಸಲು ನಿಧಿಯಿಂದ 120 ಕೋಟಿ ಒದಗಿಸಿ ಪರಿಶಿಷ್ಟ ಜಾತಿಗಳ ಗಣತಿ ನಡೆಸಿ ವರದಿ ಸಿದ್ಧಪಡಿಸುವಂತೆ ಮಾಡಿದ್ದು ಕಾಂಗ್ರೆಸ್ ಸರ್ಕಾರ. ಅದರೆ ಅದೇ ಸರ್ಕಾರ ನ್ಯಾ ನಾಗಮೋಹನ್ ದಾಸ್ ಆಯೋಗದ ಹಂಚಿಕೆಯ ಶಿಫಾರಸ್ಸನ್ನು ಮೂಲೆಗೆ ಹಾಕಿದೆ ಎಂದು ದೂರಿದರು.

ಆದಿ ಕರ್ನಾಟಕ , ಆದಿ ದ್ರಾವಿಡ , ಆದಿ ಆಂಧ್ರ ಗೊಂದಲ ಹಾಗೆಯೇ ಮುಂದುವರಿದಿದೆ. ಎಕೆ, ಎಡಿ, ಎಎ ಜಾತಿಗಳಲ್ಲಿ ಗುರುತಿಸಿಕೊಂಡವರು ಪ್ರವರ್ಗ 1 ಅಥವಾ ಪ್ರವರ್ಗ 2 ರಲ್ಲಿ ಎಲ್ಲಿ ಬೇಕಾದರೂ ಜಾತಿ ಪ್ರಮಾಣ ಪತ್ರ ಪಡೆಯಬಹುದು ಎಂದು ಸರ್ಕಾರ ಮಾಡಿರುವ ಅದೇಶವನ್ನು ದುರುಪಯೋಗ ಮಾಡಲಾಗುತ್ತಿದೆ. ಮಾದಿಗರಲ್ಲದವರೂ ಪ್ರವರ್ಗ 1ರಲ್ಲಿ ಜಾತಿ ಪ್ರಮಾಣಪತ್ರ ಪಡೆಯಲು ಅವಕಾಶ ಕೊಟ್ಟಿರುವುದು, ಒಳ ಮೀಸಲಾತಿಯ ಮೂಲ ಉದ್ದೇಶವನ್ನೇ ಸೋಲಿಸಿದೆ. ಈಗಲೂ ಕರ್ನಾಟಕದ ಎಸ್ಸಿ ಪಟ್ಟಿಯಲ್ಲಿ 98 ಜಾತಿಗಳಿದೆಯೊ 101 ಜಾತಿಗಳಿದೆಯೊ ಸ್ಪಷ್ಟವಿಲ್ಲ. ಇದೀಗ ರಾಜ್ಯ ಸರ್ಕಾರ ಒಳಮೀಸಲಾತಿಯ ಬಗ್ಗೆ ಮಸೂದೆಯೊಂದನ್ನು ರೂಪಿಸಿ ಸಮರ್ಪಕ ಚರ್ಚೆಗೂ ಅವಕಾಶ ಕೊಡದ ಸಂಖ್ಯಾಬಲದಿಂದ ಅಂಗೀಕಾರ ಪಡೆದಿದೆ . ಆದರೆ ಈ ಮಸೂದೆಯಲ್ಲೂ ಒಳಮೀಸಲಾತಿಯ ಜಾರಿ ಅಪೂರ್ಣವಾಗಿಯೇ ಉಳಿದಿದೆ . ರಾಜಕೀಯ ಒತ್ತಡಗಳಿಗೆ ಮಣಿದು ಬಡ್ತಿ ಅವಕಾಶಗಳನ್ನು, ಒಳಮೀಸಲಾತಿಯಿಂದ ಹೊರಗಿಡಲಾಗಿದೆ ಎಂದು ಹೇಳಿದರು.

ಸರ್ಕಾರದ ನಿಯಮಾನುಸಾರ ಖಾಲಿ ಇರುವ ಹುದ್ದೆಗಳಲ್ಲಿ ಶೇ 50 ರಷ್ಟು ನೇರ ನೇಮಕಾತಿಯ ಮೂಲಕ, ಉಳಿದ ಶೇ 50ರಷ್ಟು ಹುದ್ದೆಗಳು ಬಡ್ತಿ ಮೂಲಕ ಆಗುತ್ತದೆ. ಆದರೆ ಮಸೂದೆಯಲ್ಲಿ ಉದ್ದೇಶ ಪೂರ್ವಕವಾಗಿ ಬಡ್ತಿ ಅವಕಾಶಗಳನ್ನು ಸೇರ್ಪಡೆಗೊಳಿಸಿಲ್ಲ. ಸರ್ಕಾರದ ಈ ಧೋರಣೆ ಒಳಮೀಸಲಾತಿಯ ಆಶಯವನ್ನೇ ಧಿಕ್ಕರಿಸಿದೆ ಎಂದು ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಎಸ್ ಸಿ ಮೋರ್ಚಾದ ಅಧ್ಯಕ್ಷ ಮೂಡಳ್ಳಿ ಮೂರ್ತಿ, ಪುರಸಭಾ ಮಾಜಿ ಸದಸ್ಯ ಹಸಗೂಲಿ ಸಿದ್ದಯ್ಯ, ಬೆಳ್ಳಿಯಪ್ಪ, ಬಸವರಾಜು, ಪುಟ್ಟಸ್ವಾಮಿ, ಮರಿಸ್ವಾಮಿ, ಕರವೇ ತಾಲೂಕು ಉಪಾಧ್ಯಕ್ಷ ರಾಮಸಮುದ್ರ ಸುಂದರ್, ದ್ವಾರ್ಕಿ,ಶಿವಣ್ಣ ರಾಮಸಮುದ್ರ ಹಾಜರಿದ್ದರು.

# ನಾಳೆ ಫಿಟ್ ಮೈಸೂರು ಅಭಿಯಾನ

## "ಸಾಮೂಹಿಕ ಆರೋಗ್ಯ ಹಾಗೂ ಜಾಗೃತಿ ನಡಿಗೆ"ಗೆ ಸಿದ್ಧತೆಗಳು ಪೂರ್ಣ

ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರು ನಗರವನ್ನು ಆರೋಗ್ಯ ನಗರಿಯನ್ನಾಗಿ ರೂಪಿಸುವ ಉದ್ದೇಶದಿಂದ ಜ.11ರಂದು ಆಯೋಜಿಸಿರುವ ಫಿಟ್ ಮೈಸೂರು "ಸಾಮೂಹಿಕ ಆರೋಗ್ಯ ಹಾಗೂ ಜಾಗೃತಿ ನಡಿಗೆ" ಕಾರ್ಯಕ್ರಮಕ್ಕೆ ಸಿದ್ಧತೆಗಳು ಪೂರ್ಣಗೊಂಡಿದೆ.

ಈ ಸಂಬಂಧ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ವಿವಿಯ ಕುಲಪತಿ ಎನ್.ಕೆ. ಲೋಕನಾಥ್ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಮಾಹಿತಿ ನೀಡಿ, ಫಿಟ್ ಮೈಸೂರು, ಆರೋಗ್ಯಕರ ಮೈಸೂರು, ಸ್ವಚ್ಛ ಮೈಸೂರು, ಹಸಿರು ಮೈಸೂರು, ಸುರಕ್ಷಿತ ಮೈಸೂರು ಎಂಬ ಧ್ಯೇಯದೊಂದಿಗೆ ವಾಕಥಾನ್ ಆಯೋಜಿಸಲಾಗಿದ್ದು, ಈ ವಿಶೇಷ ಕಾರ್ಯಕ್ರಮ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಜಿಮ್ ಅಸೋಸಿಯೇಷನ್, ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಸಹಯೋಗದಲ್ಲಿ ನಡೆಯಲಿದೆ ಎಂದರು.

ಜ.11ರಂದು ಮಾನಸಗಂಗೋತ್ರಿ ಬಯಲು ರಂಗಮಂದಿರದಿಂದ ಬೃಹತ್ ವಾಕಥಾನ್ ಆರಂಭಗೊಳ್ಳಲಿದೆ. ಅಂದು ಬೆಳಗ್ಗೆ 5:30ರಿಂದ 6 ಗಂಟೆವರೆಗೆ ನೋಂದಣಿ, 6ರಿಂದ 6:15ರವರೆಗೆ ಝುಂಬಾ ವ್ಯಾಯಾಮ, 6.15ರಿಂದ 6.30ರವರೆಗೆ ನಾಡಗೀತೆ ಹಾಗೂ ವಂದೇ ಮಾತರಂ ಗೀತೆಗಳ ಗಾಯನ ನಡೆಯಲಿದ್ದು, 6.30ಕ್ಕೆ ವಾಕಥಾನ್‌ಗೆ ವಿದ್ಯುಕ್ತ ಚಾಲನೆ ದೊರೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಐರನ್ ಲೇಡಿ ಖ್ಯಾತಿಯ ಉಷಾ ಹೆಗಡೆ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. 5 ಕಿ.ಮೀ ಸಂಚರಿಸಲಿರುವ ವಾಕಥಾನ್, ಬಯಲ ರಂಗಮಂದಿರಿಂದ ಆರಂಭಗೊಂಡು, ಮಾನಸಗಂಗೋತ್ರಿ ಸೆನೆಟ್



ಭವನದ ಆವರಣದಲ್ಲಿ ಅಂತ್ಯವಾಗಲಿದೆ ಎಂದರು.

ವಾಕಥಾನ್‌ನಲ್ಲಿ ಭಾಗವಹಿಸುವವರಿಗೆ ಸುರಕ್ಷತೆ ಮತ್ತು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ಇದಕ್ಕಾಗಿ ಪ್ರತಿ 1 ಕಿ.ಮೀ.ಗೆ ಕುಡಿಯುವ ನೀರಿನ ವ್ಯವಸ್ಥೆ, ಫಿಟ್ ಮೈಸೂರು ಸ್ವಯಂಸೇವಕರಿಂದ ಮಾರ್ಗದರ್ಶನ, ವೈದ್ಯಕೀಯ ಸಹಾಯ ಕೇಂದ್ರ ಹಾಗೂ ಆಂಬ್ಯುಲೆನ್ಸ್ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ವೈದ್ಯಕೀಯ ಸುರಕ್ಷತೆ ದೃಷ್ಟಿಯಿಂದ ಐದು ಆಂಬ್ಯುಲೆನ್ಸ್ ಹಾಗೂ ಹತ್ತು ಮಂದಿ ವೈದ್ಯರ ತಂಡ ಇದರಲ್ಲಿ ಕೈಜೋಡಿಸಿದೆ ಎಂದು ವಿವರಿಸಿದರು.

**10 ಸಾವಿರ ಜನರು ಭಾಗಿ:** ಬೃಹತ್ ವಾಕಥಾನ್‌ನಲ್ಲಿ ಅಂದಾಜು 10 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಹೊಂದಲಾಗಿದ್ದು, ಈಗಾಗಲೇ 8 ಸಾವಿರ ಜನರು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ. ವಾಕಥಾನ್‌ನಲ್ಲಿ ಭಾಗವಹಿಸುವವರಿಗೆ ಕ್ಯಾಪ್, ಉಪಹಾರ ವಿತರಣೆ ಮಾಡಲಾಗುತ್ತಿದ್ದು, ವಾಕಥಾನ್‌ನಲ್ಲಿ ಭಾಗವಹಿಸುವವರಿಗೆ ಅಗತ್ಯವಿರುವ ಪಾರ್ಕಿಂಗ್ ವ್ಯವಸ್ಥೆಯೊಂದಿಗೆ ಮೂರು ಕಡೆಗಳಲ್ಲಿ ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

**ಜಿಲ್ಲಾಡಳಿತದ ಗಣ್ಯರು ಭಾಗಿ:** ವಾಕಥಾನ್‌ನಲ್ಲಿ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರುಗಳು ಸೇರಿದಂತೆ ಜಿಲ್ಲಾಡಳಿತದಿಂದ ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಮೈಸೂರು ಮಹಾ ನಗರ ಪಾಲಿಕೆ ಆಯುಕ್ತರು, ಜಿಪಂ ಸಿಇಒ, ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

**ಬೆಂಬಲ ಹಾಗೂ ಸಹಭಾಗಿತ್ವ:** ವಾಕಥಾನ್‌ಗೆ ಎಂಡಿಜೆಎ, ಸಿಸ್ಟಮಮ್, ಎಂಸಿಸಿ, ಕಾವೇರಿ ಶಿಕ್ಷಣ ಸಂಸ್ಥೆ, ಎಂಐಟಿ ಕಾಲೇಜು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನೊಂದಿಗೆ ಮೈಸೂರು ವಿವಿ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವ ವಿವಿಧ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಬೆಂಬಲ ವ್ಯಕ್ತಪಡಿಸಿವೆ. ಇದರ ಜತೆಗೆ ಗ್ರಾವಿಟಿ ಒನ್, ಕರ್ನಾಟಕ ಬ್ಯಾಂಕ್, ನಾರಾಯಣ ಹೃದಯಾಲಯ, ಚಿರಾಗ್ ಆಡ್ಸ್, ಜೆಎಸ್‌ಎಸ್ ಮಾಧ್ಯಮ, ಡಿಆರ್‌ಎಸ್, 92.7 ಬಿಗ್ ಎಫ್‌ಎಂ, ಚಾಮುಂಡಿ ಅಭಿವೃದ್ಧಿ ಪ್ರಾಧಿಕಾರ, ಮೈಸೂರು ಅರಮನೆ ಆಡಳಿತ ಮಂಡಳಿ, ಟ್ರಿಪ್ ಡೂರ್, ರಾಯ್ ಎಸ್ಟೇಟ್ ಸಂಸ್ಥೆಗಳು ಪ್ರಾಯೋಜಕತ್ವ ಮತ್ತು ಪಾಲುದಾರರಾಗಿ ಕೈಜೋಡಿಸಿವೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಚಿರಾಗ್ ಆಡ್ಸ್‌ನ ವಿವೇಕ್, ಜೆಎಸ್‌ಎಸ್ ಸಂಸ್ಥೆಯ ಸರಳ ಸೇರಿದಂತೆ ಹಲವು ಪ್ರಮುಖರು ಇದ್ದರು.

### ಕುಕ್ಕರಹಳ್ಳಿ ಕೆರೆಗೆ ಪ್ರವೇಶವಿಲ್ಲ:

ನಗರದ ಕುಕ್ಕರಹಳ್ಳಿ ಕೆರೆಗೆ ಪ್ರತಿ ಭಾನುವಾರ ಸಾವಿರಾರು ಜನರು ವಾಯುವಿಹಾರಕ್ಕೆ ಆಗಮಿಸುತ್ತಾರೆ. ಹೀಗಾಗಿ ಇವರುಗಳನ್ನು ಸಹ ವಾಕಥಾನ್‌ನಲ್ಲಿ ಭಾಗವಹಿಸುವಂತೆ ಮಾಡುವ ನಿಟ್ಟಿನಲ್ಲಿ ಜ.11ರಂದು ಬೆಳಗ್ಗೆ ಕುಕ್ಕರಹಳ್ಳಿ ಕೆರೆಯಲ್ಲಿ ವಾಯುವಿಹಾರಕ್ಕೆ ನಿರ್ಬಂಧ ವಿಧಿಸುವ ಮೂಲಕ ಇವರುಗಳು ವಾಕಥಾನ್‌ನಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗುವುದು. ವಾಕಥಾನ್‌ನಲ್ಲಿ ಭಾಗವಹಿಸುವವರು ಅಂತ್ಯದಲ್ಲಿ ಕ್ಯೂ–ಆರ್ ಕೂಡ್ ಮೂಲಕ ಇ–ಸರ್ಟಿಫಿಕೇಟ್ ಪಡೆಯುವ ಜತೆಗೆ, ಫೀಡ್ ಬ್ಯಾಕ್ ನೀಡಬಹುದು ಎಂದು ಕುಲಸಚಿವೆ ಎಂ.ಕೆ. ಸವಿತಾ ತಿಳಿಸಿದರು.

### ಸ್ವಚ್ಛತೆ ನಗರಿ ಕುರಿತು ಜಾಗೃತಿ

ಸ್ವಚ್ಛತೆಯಲ್ಲಿ ಮೈಸೂರು ಈಗಾಗಲೇ ದೇಶದಲ್ಲಿ ಗಮನ ಸೆಳೆದಿದ್ದು, ನಗರದ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಪಾಲಿಕೆ ಆದ್ಯತೆ ನೀಡುತ್ತಿದೆ. "ಜನರ ಸಹಭಾಗಿತ್ವ" ಸ್ವಚ್ಛ ಸರ್ವೇಕ್ಷಣೆಯ ಧ್ಯೇಯವಾಗಿದ್ದು, ಈ ಹಿನ್ನೆಲೆಯಲ್ಲಿ ಫಿಟ್ ಮೈಸೂರು ವಾಕಥಾನ್‌ಗೆ ಮೈಸೂರು ಮಹಾನಗರ ಪಾಲಿಕೆ ಸಂಪೂರ್ಣ ಬೆಂಬಲ ನೀಡಿದ್ದು, ವಾಕಥಾನ್‌ನ ಯಶಸ್ವಿಗಾಗಿ ಎಲ್ಲ ರೀತಿಯ ಸಹಕಾರ ನೀಡಲಾಗಿದೆ. ವಾಕಥಾನ್ ಮೂಲಕ ನಮ್ಮ ನಡೆ ಸ್ವಚ್ಛತೆ ಕಡೆಗೆ ಎಂಬ ಸಂದೇಶ ನೀಡಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

**ಮೈಸೂರಿನಲ್ಲಿ ಮೊದಲ ಬಾರಿಗೆ ಸರ್ಕಾರಿ, ಖಾಸಗಿ ಸಹಭಾಗಿತ್ವದಲ್ಲಿ ಬೃಹತ್ ಕಾರ್ಯಕ್ರಮ ನಡೆಯುತ್ತಿದೆ. ವಾಕಥಾನ್ ಮೂಲಕ ಹೆಚ್ಚಿನ ಖರ್ಚಿಲ್ಲದೆ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಿದ್ದು, ಸ್ವಚ್ಛತೆ ಬಗ್ಗೆಯೂ ಜಾಗೃತಿ ಮೂಡಿಸಲಾಗುತ್ತದೆ. ಈ ಕಾರ್ಯಕ್ರಮವನ್ನು ತಮ್ಮ ಜಿಲ್ಲೆಗಳಲ್ಲೂ ನಡೆಸುವ ಪ್ರೇರಣೆಯಿಂದ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸಿದ್ದಾರೆ.**

**– ಶ್ರೀಹರಿ ದ್ವಾರಕನಾಥ್**
ಮುಖ್ಯಸ್ಥ, ಜೆಎಸ್‌ಎಸ್ ಸಮೂಹ ಸಂಸ್ಥೆ.

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು: ಫೈನಾನ್ಸ್ ಆಕ್ಟ್ 2025ರ ಪ್ರಕಾರ ಪೆನ್ಸನ್ ಕಾಯ್ದೆಗಳ ಕ್ರಮಬದ್ಧಗೊಳಿಸುವಿಕೆಯನ್ನು ತಕ್ಷಣ ಹಿಂಪಡೆಯಬೇಕೆಂಬುದು ಸೇರಿ ತಮ್ಮ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಜಿಲ್ಲಾ ಸಮಿತಿ ಆಗ್ರಹಿಸಿದರು.

ನಗರದ ಜಯಲಕ್ಷ್ಮಿಪುರಂನ ಬಿ ಎಸ್ ಎನ್‌ಎಲ್ ಮಹಾಪ್ರಬಂಧಕರ ಕಚೇರಿ ಮುಂಭಾಗ ಪ್ರತಿಭಟಿಸಿ ನಾನಾ ಘೋಷಣೆ ಕೂಗಿದರು. ದೆಹಲಿಯ ರಾರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ಕರೆಯ ಮೇರೆಗೆ 8ನೇ ವೇತನ ಆಯೋಗದ ಉಲ್ಲೇಖಕ್ಕೆ ತಿದ್ದುಪಡಿ ತರುವ ಮೂಲಕ ಪಿಂಚಣಿ ಪರಿಷ್ಕರಣೆಗೆ 2026ಕ್ಕಿಂತ ಹಿಂದಿನ ಪಿಂಚಣಿದಾರರನ್ನು ಸೇರಿಸಬೇಕೆಂದು ಸೇರಿ ಹಲವು ಬೇಡಿಕೆ ಮುಂದಿಟ್ಟು ಪ್ರತಿಭಟಿಸಿದರು. ಸಿಜಿಪಿಎ ಅಧ್ಯಕ್ಷ ಪರಮೇಶ್ವರಯ್ಯ, ಎಸ್‌ಎನ್‌ಪಿಡಬ್ಲೂಎ ಜಿಲ್ಲಾ ಕಾರ್ಯದರ್ಶಿ ಎಸ್.ವಿಷಕಂಠಮೂರ್ತಿ, ಕಾರ್ಯದರ್ಶಿ ರಾಜಶೇಖರ, ಜಿಲ್ಲಾ ಕಾರ್ಯದರ್ಶಿ ಬಸವರಾಜು ಇನ್ನಿತರರು ಉಪಸ್ಥಿತರಿದ್ದರು.

# ಸರ್ಕಾರಿ ನೌಕರರು ಫಿಟ್ನೆಸ್ ಕಾಪಾಡಿಕೊಳ್ಳಿ

ಮೈಸೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಇಂದು ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.


ಸರ್ಕಾರಿ ನೌಕಕರು ಉತ್ತಮ ಆರೋಗ್ಯದ ದೃಷ್ಟಿಯಿಂದ ನಿರಂತರವಾಗಿ ಕ್ರೀಡಾಭ್ಯಾಸ ಮಾಡುವ ಮೂಲಕ ಫಿಟ್ನೆಸ್ ಕಾಪಾಡಿಕೊಳ್ಳಿ ಎಂದು ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ತಿಳಿಸಿದರು.

ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವ ಖುಷಿ, ಎಷ್ಟೇ ಹಣವಿದ್ದರೂ ದೊರಕುವುದಿಲ್ಲ. ನಿವೃತ್ತಿಯ ನಂತರವೂ ಕ್ರೀಡಾಪಟುಗಳಾಗಿ ಸಕ್ರಿಯವಾಗಿರಬೇಕು. ಆಯಾ ವಯಸ್ಸಿಗೆ ಅನುಗುಣವಾಗಿ ಕ್ರೀಡೆಗಳು ನಡೆಯುತ್ತಲೇ ಇರುತ್ತವೆ ಎಂದರು. ಮೈಸೂರಿನಲ್ಲಿ ನಡೆಯುವ ಮ್ಯಾರಥಾನ್ ಬೇರೆಲ್ಲೂ ನಡೆಯುವುದಿಲ್ಲ. ನಡಿಯುತ್ತಿರ್ರೋ, ಓಡುತ್ತೀರೋ ಆದರೆ ಮ್ಯಾರಥಾನ್ಗಳಲ್ಲಿ ಪ್ರತಿಯೊಬ್ಬರೂ ಕೂಡ ಭಾಗವಹಿಸಬೇಕು ಎಂದು ಕಿವಿಮಾತು ಹೇಳಿದರು.



ಸರ್ಕಾರಿ ನೌಕರರ ಜಿಲ್ಲಾ ಸಂಘದ ಕಚೇರಿಯಲ್ಲಿ ಗ್ರಂಥಾಲಯವನ್ನು ತೆರೆಯಬೇಕು. ಒಳ್ಳೆಯ ಪುಸ್ತಕ ಹಾಗೂ ದಿನಪತ್ರಿಕೆಗಳನ್ನು ಇಡಬೇಕು. ನೌಕರರು ಕಚೇರಿಯಿಂದ ಕೆಲಸ ಮುಗಿಸಿ ತೆರಳುವಾಗ ಭೇಟಿ ನೀಡಿ ಓದಲು ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಮೈಸೂರು ಜಿಲ್ಲೆ ರಾಜ್ಯಕ್ಕೆ ಮಾದರಿಯಾಗಬೇಕು ಎಂದು ಸಲಹೆ ನೀಡಿದರು. ಈ ವೇಳೆ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ಅವರು ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಪೊಲೀಸರ ಮೇಲೆ ಹಲ್ಲೆ: ಮೂವರ ಬಂಧನ





ಮೈಸೂರು: ಪಾನಮತ್ತರಾಗಿ ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಮೇಲೆಯೇ ಗುಂಪು ಹಲ್ಲೆ ನಡೆಸಿದ್ದ ಮೂವರು ಆರೋಪಿಗಳನ್ನು ನರಸಿಂಹರಾಜ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಾರ್ತಿಕ್ ಸಿ.(24) ಭರತ್ ಪಿ.(25) ಹಾಗೂ ರವಿ ಪಿ.(29) ಬಂಧಿತ ಆರೋಪಿಗಳು, ಮೈಸೂರಿನ ಉದಯಗಿರಿ ಠಾಣೆಯ ಎಸ್‌ಬಿ ಸಿಬ್ಬಂದಿ, ಕೆಸರೆ ನಿವಾಸಿ ಚಂದ್ರಶೇಖರ್(54) ಗಾಯಗೊಂಡವರು.

### ಆಗಿದ್ದಿಷ್ಟು?:

ಚಂದ್ರಶೇಖರ್ ಕೆಲಸಕ್ಕಾಗಿ ತಮ್ಮ ಬೈಕ್‌ನಲ್ಲಿ ಹೊರಟಿದ್ದು ಎನ್.ಆರ್.ಮೊಹಲ್ಲಾದ ನಾರ್ತ್ ಈಸ್ಟ್ ಆಫ್ ಎನ್. ಆರ್.ಮೊಹಲ್ಲಾದ ಶ್ರೀಮ್ ಕಾಟನ್ ಶಾಪ್ ಎಂಬಲ್ಲಿ ತೆರಳುತ್ತಿದ್ದಾಗ ಆರೋಪಿಗಳು ಏಕಾಏಕಿ ಹಲ್ಲೆ ನಡೆಸಿದ್ದರು. ಪೊಲೀಸ್ ಎಂಬುದನ್ನೂ ಲೆಕ್ಕಿಸದೆ ಗುಂಪುಗೂಡಿ ಹಲ್ಲೆ ಮಾಡಿ 500 ರೂ. ನಗದು ಹಾಗೂ ಮೊಬೈಲ್ ಫೋನ್ ಕಸಿದುಕೊಂಡಿದ್ದರು. ಕೂಡಲೇ ಚಂದ್ರಶೇಖರ್ ಸಹಾಯಕ್ಕೆ ದಾವಿಸಿದ್ದ ಸಾರ್ವಜನಿಕರು ಕಾರ್ತಿಕ್ ಎಂಬಾತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ನರಸಿಂಹರಾಜ ವಿಭಾಗದ ಎಸಿಪಿ ಮ್ಯಾಥ್ ಥಾಮಸ್ ಹಾಗೂ ಎನ್.ಆರ್.ಠಾಣೆ ಪ್ರಭಾರ ಇನ್ಸ್ಪೆಕ್ಟರ್ ಕುಮಾರ್ ಅವರ ನೇತೃತ್ವದಲ್ಲಿ ಆರೋಪಿಗಳನ್ನು ಬಂಧಿಸಿದ್ದು ಎನ್.ಆರ್.ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪಚ್ಚೆದೊಡ್ಡಿ ಅರಣ್ಯ ಪ್ರದೇಶದಲ್ಲಿ ಹುಲಿ ಕೊಂದ ಪ್ರಕರಣ

# ಹುಲಿಗೆ ವಿಷಪ್ರಾಷನ ಮಾಡಿದ್ದ ಆರೋಪಿ ಸೆರೆ

ಚಾಮರಾಜನಗರ: ಹನೂರು ತಾಲೂಕಿನ ಮಲೆಮಹದೇಶ್ವರ ವನ್ಯಜೀವಿ ವಿಭಾಗದ ಪಚ್ಚೆದೊಡ್ಡಿ ಅರಣ್ಯ ಪ್ರದೇಶದಲ್ಲಿ ವಿಷ ಪ್ರಶಾನದಿಂದ ಹುಲಿ ಕೊಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಗಂಗನದೊಡ್ಡಿ ಗ್ರಾಮದ ಗೋವಿಂದ ಎಂಬಾತನನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬುಧವಾರ ರಾತ್ರಿ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಆಗಸ್ಟ್ 2ರಂದು ಪಚ್ಚೆದೊಡ್ಡಿ ಅರಣ್ಯ ಪ್ರದೇಶದಲ್ಲಿ ವಿಷಪ್ರಾಷನದಿಂದ ಹುಲಿಯೊಂದನ್ನು ಸಾಯಿಸಿ ಅದನ್ನು 3 ತುಂಡುಗಳಾಗಿ ಬೇರ್ಪಡಿಸಲಾಗಿತ್ತು. ಈ ಸಂಬಂಧ ಅರಣ್ಯಾಧಿಕಾರಿಗಳು 7 ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಪಚ್ಚಮಲ್ಲು, ಸಿದ್ದು, ಸಂಪು, ಗಣೇಶ್, ಚಂದು ಹಾಗೂ ಅಭಿಷೇಕ್ ಅವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಿದ್ದರು. ಇತ್ತೀಚೆಗಷ್ಟೇ ನಾಲ್ವರು ಆರೋಪಿಗಳಿಗೆ

ಕೊಳ್ಳೇಗಾಲ ಜೆಎಂಎಫ್‌ಸಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ನಾಪತ್ತೆಯಾಗಿದ್ದ ಆರೋಪಿ ಮರಿ ವೀರಪ್ಪನ್ ಎಂದೇ ಕುಖ್ಯಾತನಾಗಿದ್ದ



ಗಂಗನದೊಡ್ಡಿ ಗ್ರಾಮದ ಗೋವಿಂದ ಪತ್ತೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಕೈಗೊಂಡಿತ್ತು. ಆದರೆ ಆತ 5 ತಿಂಗಳಿಂದ ತಲೆಮರೆಸಿಕೊಂಡಿದ್ದನು.

**ಮೈಸೂರು ರೈಲ್ವೆ ನಿಲ್ದಾಣದಲ್ಲಿ ಸೆರೆ:** ಬುಧವಾರ ಮೈಸೂರು ನ್ಯಾಯಾಲಯಕ್ಕೆ ಕೇಸ್‌ವೊಂದರ ನಿಮಿತ್ತ ಆಗಮಿಸಿದ್ದ ಗೋವಿಂದನ ಬಗ್ಗೆ ಮಾಹಿತಿ ತಿಳಿದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿದ್ದರು. ಆದರೆ ಈ ಬಗ್ಗೆ ತಿಳಿದ ಗೋವಿಂದ ತಪ್ಪಿಸಿಕೊಂಡು ರೈಲ್ವೆ ನಿಲ್ದಾಣಕ್ಕೆ ಹೊರಟಿದ್ದ ಆರೋಪಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

### ಹಲವು ಪ್ರಕರಣಗಳಲ್ಲಿ ಭಾಗಿ

ಹುಲಿಯನ್ನು ಮೂರು ಪೀಸ್ ಮಾಡಿದ್ದ ಕೊಂದಿದ್ದ ಪ್ರಮುಖ ಆರೋಪಿ ಗೋವಿಂದನ ವಿರುದ್ಧ ರಾಮಾಪುರ ಠಾಣೆ ಹಾಗೂ ರಾಮಾಪುರ ವನ್ಯಜೀವಿ ವಲಯ ಮತ್ತು ಹನೂರು ಬಫರ್ ವಲಯ, ಹನೂರು ಠಾಣೆ, ಅರಣ್ಯ ಸಂಚಾರಿ ದಳದಲ್ಲಿ ಪ್ರಕರಣಗಳು ದಾಖಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಸಿಎಫ್ ವಿರಾಜ್ ಹೊಸೂರ್, ಆರ್ ಎಫ್‌ಒಗಳಾದ ನಾಗರಾಜು, ಜೀತೇಂದ್ರ, ಅಪರಾದ ಪತ್ತೆದಳದ ಅಧಿಕಾರಿಗಳು ಪಾಲ್ಗೊಂಡಿದ್ದರು.

## ರಾಷ್ಟ್ರೀಯ ಗ್ರಾಹಕರ ದಿನಾಚರಣೆ–2025 ಆಹಾರ ಸುರಕ್ಷತೆ ಮತ್ತು ಕಾನೂನು ಅರಿವು ಕಾರ್ಯಕ್ರಮ

# ಆಹಾರದ ಮಹತ್ವ ಅರಿಯಬೇಕು: ಎನ್ ಚಲುವರಾಯಸ್ವಾಮಿ

**ಮಂಡ್ಯ:** ಆಹಾರದ ಮಹತ್ವ ಹೆಚ್ಚಿದೆ ಎಲ್ಲರೂ ಆಹಾರದ ಮಹತ್ವದ ಕುರಿತು ತಿಳಿದುಕೊಳ್ಳಬೇಕು. 30 – 40 ವರ್ಷಗಳ ಹಿಂದೆ ಭಾರತ ಆಹಾರದ ಕೊರತೆಯನ್ನು ಎದುರಿಸುತ್ತಿತ್ತು ಆದರೆ ಇಂದು ಬೇರೆ ದೇಶಗಳಿಗೆ ಭಾರತ ಆಹಾರ ರಫ್ತು ಮಾಡುತ್ತಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚೆಲುವರಾಯಸ್ವಾಮಿ ಅವರು ಹೇಳಿದರು.



ಶುಕ್ರವಾರ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಕರ್ನಾಟಕ ರಾಜ್ಯ ಆಹಾರ ಆಯೋಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ (ರಿ) ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ–2025 ಆಹಾರ ಸುರಕ್ಷತೆ ಮತ್ತು ಕಾನೂನು ಅರಿವು ಕಾರ್ಯಕ್ರಮವನ್ನು "ಡಿಜಿಟಲ್ ನ್ಯಾಯದ ಮೂಲಕ ಪರಿಣಾಮಕಾರಿ ಹಾಗೂ ತ್ವರಿತ ವಿಲೇವಾರಿ" ಎಂಬ ಘೋಷವಾಕ್ಯದಡಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕಾನೂನು ಬಗ್ಗೆ ಎಲ್ಲರೂ ಜಾಗೃತರಾಗಿ. ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಮನಮೋಹನ್ ಸಿಂಗ್ ಪ್ರಧಾನಿಯಾದ ಸಂದರ್ಭದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಗೂ ಆಹಾರ ಭದ್ರತೆಯನ್ನು ನೀಡುವ ಸಲುವಾಗಿ ಆಹಾರ ಆಯೋಗವನ್ನು ಜಾರಿಗೆ ತಂದರು. ಎಲ್ಲಾ ಬಡ ಜನರಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಆಹಾರ ಸಿಗಬೇಕು ಎಂಬ ನಿಟ್ಟಿನಲ್ಲಿ ಆಹಾರ ಅಧಿನಿಯಮದ ಕಾಯ್ದೆ ಜಾರಿಗೊಳಿಸಲಾಯಿತು ಎಂದು ತಿಳಿಸಿದರು.

ಭಾರತದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಆಹಾರ ಅಧಿನಿಯಮ ಕಾಯ್ದೆಯಡಿ ಪ್ರತಿ ವ್ಯಕ್ತಿಗೆ 5 ಕೆ.ಜಿ ಅನ್ನು ವಿತರಿಸುವ ಯೋಜನೆಯನ್ನು ಜಾರಿಗೊಳಿಸಿದರು.

ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ ಅವರು ರಾಜ್ಯ ಜನರನ್ನು ಹಸಿವು ಮುಕ್ತರಾಗಿಸಲು ತಲಾ 10 ಕೆ.ಜಿ.ಅಕ್ಕಿಯನ್ನು ವಿತರಣೆ ಮಾಡಿದರು. ಅಕ್ಕಿಯನ್ನು ನೀಡುವುದರಿಂದ ಅಕ್ರಮ ಸಂಭವಿಸಬಹುದು ಎಂಬ ಉದ್ದೇಶದಿಂದ ರಾಗಿ, ಗೋಧಿ, ಎಣ್ಣೆ ಕೊಡಲು ಹೊಸ ತೀರ್ಮಾನ ಮಾಡಲಾಗಿದೆ ಎಂದು ತಿಳಿಸಿದರು.

ಇವತ್ತಿಗೂ ಆಹಾರ ಸಿಗದೆ ಇರುವ ಜನರು ಇದ್ದಾರೆ. ಕೆಲವರು ಆಹಾರದ ಉಪಯೋಗ ಪಡೆದುಕೊಳ್ಳದೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಗ್ರಾಹಕರಿಗೆ ಸಂಕಷ್ಟ ಪರಿಸ್ಥಿತಿ ಬರದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಸಾರ್ವಜನಿಕರಿಗೆ ನ್ಯಾಯ ಸಿಗಬೇಕು ಎನ್ನುವ ನಿಟ್ಟಿನಲ್ಲಿ ಆಹಾರ ಆಯೋಗ ಕ್ರಮ ವಹಿಸಲಾಗುತ್ತಿದೆ ಅದರ ಕೆಳಗೆ ಜಿಲ್ಲಾಡಳಿತ ಇದರ ಜವಾಬ್ದಾರಿ ನಿರ್ವಹಿಸಬೇಕು ಎಂದು ಹೇಳಿದರು.

ನಮ್ಮ ದೇಶದ ವ್ಯವಸ್ಥೆಯಲ್ಲಿ ಬಡವರು ಹಾಗೂ, ಸಾಮಾನ್ಯ ಜನಕ್ಕೂ ಆಹಾರ ಒದಗಿಸುವ ಕೆಲಸವಾಗಬೇಕು. ಕಾನೂನು ಜಾರಿ ಗೊಳಿಸಿ ಗ್ರಾಹಕರ ಹಿತ ಕಾಯುವುದು ಸರ್ಕಾರದ ಕರ್ತವ್ಯ. ರಾಜ್ಯ ಆಹಾರ ಆಯೋಗದ ಅಧ್ಯಕ್ಷರು ರಾಜ್ಯದ 31 ಜಿಲ್ಲೆಗಳಿಗೂ ಭೇಟಿ ನೀಡಿ ಆಹಾರ ಸುರಕ್ಷತೆಯ ಕುರಿತು ಜಾಗೃತಿ ಮತ್ತು ಅರಿವು ಮೂಡಿಸುವ ಕಾರ್ಯವನ್ನು ಮಾಡುತ್ತಾ ಬರುತ್ತಿದ್ದಾರೆ ಎಂದು ಹೇಳಿದರು.

ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ. ಹೆಚ್. ಕೃಷ್ಣ ಅವರು ಮಾತನಾಡಿ ಗ್ರಾಹಕರು ಮೋಸ ಹೋಗದ ರೀತಿ ಅರಿವು ಮೂಡಿಸುವ ಕಾರ್ಯವನ್ನು ನಡೆಸಲಾಗುತ್ತಿದೆ.

ಗ್ರಾಹಕರಿಗೆ ಗ್ರಾಹಕ ಕಾನೂನಿನ ಕುರಿತು ಅರಿವು ಇರಬೇಕು.

ಅನ್ಯಾಯಕ್ಕೆ ಒಳಗಾದ ಗ್ರಾಹಕರಿಗೆ ನ್ಯಾಯ ಕೊಡಿಸುವ ಕೆಲಸವಾಗುತ್ತಿದೆ. ಸಾರ್ವಜನಿಕರಿಗೆ ಆಹಾರ ಭದ್ರತೆ ಒದಗಿಸುವ ಕೆಲಸ ಸರ್ಕಾರದ ಕರ್ತವ್ಯ ಎಂದು ಹೇಳಿದರು.

ಆಹಾರ ಭದ್ರತೆ ಕಾಯ್ದೆಯಡಿ ಎಲ್ಲಾ ಗ್ರಾಹಕರಿಗೂ ನ್ಯಾಯ ಒದಗಿಸುವ ಕೆಲಸವಾಗುತ್ತಿದೆ. ಕೈಗೆಟುಕುವ ದರದಲ್ಲಿ ಉತ್ತಮ ಗುಣಮಟ್ಟದ ಆಹಾರ ಕೊಡುವುದು ಆಹಾರ ಭದ್ರತೆ ಕಾಯ್ದೆಯ ಮೂಲ ಉದ್ದೇಶ. ನ್ಯಾಯಬೆಲೆ ಅಂಗಡಿಗಳಲ್ಲಿ ವೈಜ್ಞಾನಿಕವಾಗಿ ಆಹಾರ ಸುರಕ್ಷಿತೆ ಮಾಡಬೇಕು ಎಂದು ಹೇಳಿದರು.

ಗ್ರಾಹಕರಿಗೆ ಕಾನೂನು ಬಗ್ಗೆ ಅರಿವು ಮೂಡಿಸುವ ಕೆಲಸ ಎಲ್ಲರ ಜವಾಬ್ದಾರಿಯಾಗಿದೆ. ಕೆಲವು ಕಡೆ ಪಡಿತರ ಚೀಟಿ ರದ್ದಾಗಿದೆ ಅದನ್ನ ಸದ್ಯದಲ್ಲೇ ಸರಿಪಡಿಸುವ ಕೆಲಸ ಮಾಡಲಾಗುತ್ತಿದೆ. ಪಡಿತರ ಅಂಗಡಿಗಳಲ್ಲಿ ಅನ್ಯಾಯವಾದರೆ ಗ್ರಾಹಕರು ದೂರು ನೀಡಬಹುದು ಸಂಬಂಧಪಟ್ಟವರ ಪೇಟೆ ಕ್ರಮ ಕೈಗೊಳ್ಳಲಾಗುತ್ತದೆ. ಮಧ್ಯಾಹ್ನದ ಊಟದಲ್ಲಿ ಕಳಪೆ ಕಂಡು ಬಂದರೆ ಕ್ರಮವಹಿಸಲಾಗುವುದು ಎಂದು ಹೇಳಿದರು.

ಅಂಗನವಾಡಿಗಳಲ್ಲಿ ಗರ್ಭಿಣಿ, ಬಾಣಂತಿಯರಿಗೆ ಪೌಷ್ಟಿಕತೆ ಹೆಚ್ಚಿಸಲು ಪೌಷ್ಟಿಕಾಂಶಯುಕ್ತ ಆಹಾರ ನೀಡಲಾಗುತ್ತಿದೆ ಹಾಗೂ ಗರ್ಭಿಣಿಯರಿಗೆ ಸಹಾಯಧನವನ್ನು ನೀಡಲಾಗುತ್ತಿದೆ ಅರ್ಹರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆ ನೀಡಿ ಪೌಷ್ಟಿಕಾಂಶವನ್ನು ನೀಡಲಾಗುತ್ತದೆ. ವೃದ್ಧರಿಗೆ ಮಾಸಾಸನ ಬರದಿದ್ದರೆ ಕೊಡಿಸುವ ಕೆಲಸ ಮಾಡಲಾಗುತ್ತಿದೆ. ಆಹಾರ ಭದ್ರತೆಯ ಕಾವಲುಗಾರರಾಗಿ ನಾವು ಕೆಲಸ ಮಾಡ್ತಿದ್ದೇವೆ.

ಆಹಾರ ಹಕ್ಕುಗಳ ಬಗ್ಗೆ ಜನರು ಜಾಗೃತರಾಗಿ ಎಂದು ಕರೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ್ ಎಂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ವಿ ಜೆ. ಮೈ ಶುಗರ್ ಅಧ್ಯಕ್ಷ ಸಿ.ಡಿ ಗಂಗಾಧರ, ವಕೀಲರ ಸಂಘದ ಅಧ್ಯಕ್ಷ ಟಿ.ಎಸ್ ಸತ್ಯಾನಂದ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಸಂಘದ ಅಧ್ಯಕ್ಷ ವಂಸತ್ ಕುಮಾರ್, ನ್ಯಾಷನಲ್ ಲಾ ಕಾಲೇಜಿನ ತರಬೇತಿ ಸಂಯೋಜಕರಾದ ಕುಮಾರಸ್ವಾಮಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಪ್ರತೀಕ್ ಹೆಗ್ಡೆ. ಡಾ. ಶಶಿಧರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಆಹಾರ ಸುರಕ್ಷತೆ ಮತ್ತು ಕಾನೂನು ಅರಿವು ಕಾರ್ಯಕ್ರಮದ ಮಳಿಗೆಗಳ ಉದ್ಘಾಟನೆ

**ಮಂಡ್ಯ:** ರಾಷ್ಟ್ರೀಯ ಗ್ರಾಹಕ ದಿನಾಚರಣೆ 2025 ಆಹಾರ ಸುರಕ್ಷತೆ ಮತ್ತು ಕಾನೂನು ಅರಿವು ಕಾರ್ಯಕ್ರಮದ ಪ್ರಯುಕ್ತ ನಗರದ ಡಾ. ಬಿ.ಆರ್ ಅಂಬೇಡ್ಕರ್ ಭವನದ ಆವರಣದಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ , ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸಮಾಜ ಕಲ್ಯಾಣ ಇಲಾಖೆ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಸೇರಿದಂತೆ ವಿವಿಧ ಇಲಾಖೆಗಳ ವತಿಯಿಂದ ಆಯೋಜಿಸಲಾಗಿದ್ದ ಮಳಿಗೆಗಳನ್ನು ಜಿಲ್ಲಾಧಿಕಾರಿ ಡಾ ಕುಮಾರ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರಾದ ಸುಬ್ರಹ್ಮಣ್ಯ ಜೆ.ಎನ್ ಅವರು ಉದ್ಘಾಟಿಸಿದರು.

ಇದೆ ಸಂದರ್ಭದಲ್ಲಿ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ .ಹೆಚ್.ಕೃಷ್ಣ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ್ ಎಂ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಎಸ್ ಸತ್ಯಾನಂದ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಪ್ರತೀಕ್ ಹೆಗ್ಡೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



# ಜ.12ರಂದು ಅವಧೂತ ಮಾದಪ್ಪ ಮತ್ತು ದಿ ಕಾಪಿ ಕೃತಿಗಳ ಲೋಕಾರ್ಪಣೆ




**ಮಂಡ್ಯ:** ಎಂ.ಆರ್.ಎಂ. ಪ್ರಕಾಶನದ ಪ್ರಥಮ ವಾರ್ಷಿಕೋತ್ಸವ, ಅವಧೂತ ಮಾದಪ್ಪ ಮತ್ತು ದಿ ಕಾಪಿ ಕೃತಿಗಳ ಲೋಕಾರ್ಪಣೆ ಹಾಗೂ ಎಂ.ಆರ್. ಎಂ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮವನ್ನು ಜ.12ರ ಮಧ್ಯಾಹ್ನ 2 ಗಂಟೆಗೆ ಟಿ.ನರಸೀಪುರ ತಾಲೂಕಿನ ಯಾಚೇನಹಳ್ಳಿಯ ವಿವೇಕಾನಂದನಗರದ ಶ್ರೀರಾಮಕೃಷ್ಣ ಸೇವಾ ಕೇಂದ್ರ ಪ್ರೌಢಶಾಲೆಯ ವಿಶ್ವಮಾನವ ವೇದಿಕೆಯಲ್ಲಿ ನಡೆಯಲಿದೆ ಎಂದು ಲೇಖಕ ದ.ಕೋ. ಹಳ್ಳಿ ಚಂದ್ರಶೇಖರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂ.ಆರ್.ಎಂ. ಪ್ರಕಾಶನದ ವಾರ್ಷಿಕೋತ್ಸವದ ಅಂಗವಾಗಿ ಕಾರ್ಯಕ್ರಮದಲ್ಲಿ ಅಂಗವಾಗಿ ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರೆಸಲು ಕಾರ್ಯಕ್ರಮ ಆಯೋಜಿಸಿದೆ ಎಂದರು.

ಶ್ರೀರಾಮಕೃಷ್ಣ ಸೇವಾ ಕೇಂದ್ರದ ಅಧ್ಯಕ್ಷ ನಾದಾನಂದನಾಥ ಸ್ವಾಮೀಜಿ ದಿವ್ಯ ಸಾನಿಧ್ಯದ ಕಾರ್ಯಕ್ರಮವನ್ನು ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ. ಎನ್.ಶಂಕರೇಗೌಡ ಉದ್ಘಾಟಿಸುವರು. ವಿಶ್ವ ಒಕ್ಕಲಿಗರ ಮಹಾಸಂಸ್ಥಾಪನ ಮಠದ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ಕೃತಿಗಳ ಲೋಕಾರ್ಪಣೆ ಮಾಡಿ ಮಾದಪ್ಪ ಕೃತಿಯ ಕುರಿತು ಮಾತನಾಡುವರು ಎಂದು ಹೇಳಿದರು. ಕಥೆಗಾರ ಅದೀಬ್ ಅಖ್ತರ್ ಕೃತಿಗಳ ಲೇಖಕರನ್ನು ಅಭಿನಂದಿಸುವರು. ಎಂ.ಆರ್.ಎಂ. ಪ್ರಕಾಶಕ ಮಂಜು ಮುತ್ತೇಗೆರೆ ಅಧ್ಯಕ್ಷತೆ ವಹಿಸಲಿದ್ದರು. ಮಂಡ್ಯ ವಿವಿಯ ಕನ್ನಡ ಉಪನ್ಯಾಸಕ ಉಮೇಶ್ ದಡಮಹಳ್ಳಿ ಅವರು ದಿ ಕಾಪಿ – ಎ ಫಾಟಲ್ ಪ್ಯಾಟರ್ನ್ ಕೃತಿ ಕುರಿತು ಮಾತನಾಡಲಿದ್ದಾರೆ. ಕವಿ ಕೆ.ಪಿ ಮೃತ್ಯುಂಜಯ ಅವರಿಗೆ ಎಂ.ಆರ್. ಎಂ ಸಾಹಿತ್ಯ ಪ್ರಶಸ್ತಿ, ಕವಿತಾ ಪ್ರಕಾಶನದ ಗಣೇಶ ಅಮೀನಗಡ ಅವರಿಗೆ ಎಂ.ಆರ್.ಎಂ. ಪ್ರಕಾಶನ ಪ್ರಶಸ್ತಿ ನೀಡಲಾಗುವುದು. ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ಚನ್ನಾಜಮ್ಮ ಅವರನ್ನು ಅಭಿನಂದಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಲೋಕೇಶ್ ಬೆಕ್ಕಳಲೆ, ಕವಯತ್ರಿ ಕು.ಎಚ್.ಆರ್.ಕನ್ನಿಕ, ಆಕಾಶ್ ಸ್ಟೀಲ್ಸ್ & ಸಿಮೆಂಟ್‌ನ ಮಾಲೀಕ ಜಿ.ಸುರೇಶ್, ಕವಿ ಕೊತ್ತತ್ತಿ ರಾಜು, ಲೇಖಕ ದ.ಕೋಹಳ್ಳಿ ಚಂದ್ರಶೇಖರ್, ನೇರಲಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಿಇಓ ನೇರಲಕೆರೆ ಲೋಕೇಶ್ ಅತಿಥಿಗಳಾಗಿ ಭಾಗವಹಿಸುವರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ನವೋದಯ ಕಲಿಕಾ ಕೇಂದ್ರ ಸಂಸ್ಥಾಪಕಿ ಕು.ಎಚ್.ಆರ್. ಕನ್ನಿಕ, ಎಂ.ಆರ್.ಎಂ. ಪ್ರಕಾಶನ ಸಂಸ್ಥಾಪಕ ಮಂಜು ಮುತ್ತೇಗೆರೆ, ಸಾಹಿತಿ ಉಮೇಶ್ ದಡಮಹಳ್ಳಿ ಇದ್ದರು.

## ಜ.13 ರಂದು ಮಡಿಕೇರಿಯಲ್ಲಿ ತರಬೇತಿ ಕಾರ್ಯಕ್ರಮ

**ಮಡಿಕೇರಿ:** ಕರ್ನಾಟಕ ಸರ್ಕಾರವು ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕವನ್ನು ಡಿಜಿಟಲ್ ಇ–ಸ್ಟಾಂಪ್ ಮೂಲಕ ಪಾವತಿ ಮಾಡುವಂತಹ ಅಪ್ಲಿಕೇಶನ್ ಅನ್ನು ಹೊಸದಾಗಿ ಪರಿಚಯಿಸಿದೆ.

ಈ ಅಪ್ಲಿಕೇಶನ್ ನ ಬಳಕೆಯು ಇ–ಸ್ಟಾಂಪ್ ನ್ನು ಉತ್ಪಾದಿಸುವಲ್ಲಿ ಸುಧಾರಿತ ಪಾರದರ್ಶಕತೆ, ಅನುಕೂಲತೆ ಹಾಗೂ ದಕ್ಷತೆಯನ್ನು ಸಾಧಿಸಲು ಸಹಾಯ ಮಾಡುತ್ತದೆ. ಹೊಸದಾಗಿ ಪರಿಚಯಿಸಲಾದ ಈ ಅಪ್ಲಿಕೇಶನ್ ಅನ್ನು ಬಳಸುವುದು ಹಾಗೂ ಡಿಜಿಟಲ್ ಇ–ಸ್ಟಾಂಪ್ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವ ಬಗ್ಗೆ ಜನವರಿ, 13 ರಂದು ಸಂಜೆ 4.30 ಗಂಟೆಗೆ ತಾಲ್ಲೂಕು ಆಡಳಿತ ಸೌಧ, ನೆಲ ಮಹಡಿ ಸಭಾಂಗಣದಲ್ಲಿ ತರಬೇತಿ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರು ಈ ಅವಕಾಶ ಸದುಪಯೋಗ ಪಡೆದುಕೊಳ್ಳುವಂತೆ ಉಪ ನೋಂದಣಾಧಿಕಾರಿ ಸೌಮ್ಯ ಅವರು ತಿಳಿಸಿದ್ದಾರೆ.

## ಜ.12 ರಂದು ವಿಶೇಷಚೇತನ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕ್ರೀಡಾಕೂಟ

**ಮಡಿಕೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025–26ನೇ ಸಾಲಿನ ಕೊಡಗು ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 14 ಮತ್ತು 17 ವರ್ಷದೊಳಗಿನ ಜಿಲ್ಲಾ ಮಟ್ಟದ ವಿಶೇಷಚೇತನ ವಿದ್ಯಾರ್ಥಿಗಳ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವು ಜನವರಿ, 12 ರಂದು ಬೆಳಗ್ಗೆ 10.30 ಗಂಟೆಗೆ ಕುಶಾಲನಗರ ಸರ್ಕಾರಿ ಪದವಿ ಪೂರ್ವ ಕಾಲೇಜಿ(ಪ್ರೌಢಶಾಲಾ ವಿಭಾಗ)ನಲ್ಲಿ ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಬಸವರಾಜು ಅವರು ತಿಳಿಸಿದ್ದಾರೆ.

## ಆರೋಗ್ಯ ಶಿಬಿರದಲ್ಲಿ ನೂರಾರು ಜನರು ಭಾಗಿ

# ತಪಾಸಣೆ ನಡೆಸಿದ ತಜ್ಞ ವೈದ್ಯರು

**ಚಾಮರಾಜನಗರ:** ಗ್ರಾಮೀಣ ಜನರ ಆರೋಗ್ಯ ಜಾಗೃತಿಗೆ ಉಚಿತ ಆರೋಗ್ಯ ಶಿಬಿರಗಳು ಸಹಕಾರಿಯಾಗಿದ್ದು.



ಬಡವರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರದೆ ತಜ್ಞ ವೈದ್ಯರು ಲಭ್ಯವಿದ್ದಾಗ ಶಿಬಿರದಲ್ಲಿ ಪಾಲ್ಗೊಂಡು, ಉಚಿತ ಆರೋಗ್ಯ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಜಿ.ಪಂ.ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ ಹೇಳಿದರು.

ತಾಲೂಕಿನ ಕಾಗಲವಾಡಿಯಲ್ಲಿ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಒತ್ತಡದ ಜೀವನದಿಂದ ಆರೋಗ್ಯ ಸಮಸ್ಯೆ ಹೆಚ್ಚುತ್ತಿದ್ದು ಸಕಾಲಕ್ಕೆ ವೈದ್ಯರ ಸಲಹೆ ಪಡೆಯುವುದು ಸೂಕ್ತ ಎಂದು ಹೇಳಿದರು.

ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಬಿಪಿ, ಶುಗರ್, ಹೃದ್ರೋಗ ಹಾಗೂ ಕಿಡ್ನಿ ಕಾಯಿಲೆಗಳು ಸಾಮಾನ್ಯವಾಗಿವೆ. ಆಗಾಗಿ ಜನರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಉಚಿತ ಬೃಹತ್ ಆರೋಗ್ಯ ಶಿಬಿರ ಹಾಗೂ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಡಾ.ಜನಾರ್ದನ ಮಾತನಾಡಿ ಜೀವನಶೈಲಿ ಬದಲಿಸಿಕೊಳ್ಳುವ ಮೂಲಕ ಒತ್ತಡದಿಂದ ಮುಕ್ತರಾಗಲು ದೈಹಿಕ ವ್ಯಾಯಾಮ, ಯೋಗಾಭ್ಯಾಸ, ಧ್ಯಾನ ಮಾಡಬೇಕು. ದೈಹಿಕ ಚಟುವಟಿಕೆಯಿಂದ ಹೃದಯ ಸಂಬಂಧಿ ಕಾಯಿಲೆ ಕಡಿಮೆ ಮಾಡಬಹುದು. ರೋಗ ಬರುವ ಮುನ್ನ ಮುಂಜಾಗ್ರತೆ ವಹಿಸಬೇಕು ಎಂದರು.

ಪಿಆರ್ ಓ ವಿಜಯಕುಮಾರ್, ಸಂಘದ ನಿರ್ದೇಶಕ ರಾದ ಮಹೇಶ್, ಶಿವಸ್ವಾಮಿ, ಲಿಂಗ ರಾಜು, ಕೂಸಪ್ಪ, ಜಗದೀಶ್, ದಕ್ಷಿಣ ಮೂರ್ತಿ, ಜಗದೀಶ್, ಶೋಭ, ನಾಗರಾಜು, ಶಿವಸ್ವಾಮಿ, ನಂಜಶೆಟ್ಟಿ, ಕಾರ್ಯದರ್ಶಿ ಮಹಾದೇವಸ್ವಾಮಿ , ಸುರೇಶ್, ಮುಖಂಡರಾದ ನಾಗೇಂದ್ರ, ಜಯಶಂಕರಮೂರ್ತಿ, ಮರಿಸ್ವಾಮಿ, ಗುಂಡಣ್ಣ, ಮಹೇಶ್ ಹಾಜರಿದ್ದರು.

## ಅರ್ಜಿ ಆಹ್ವಾನ

**ಮಡಿಕೇರಿ:** ಅರಣ್ಯಾಧಾರಿತ ಬುಡಕಟ್ಟು ಸಮುದಾಯ ದವರಿಗೆ ಆರೋಗ್ಯ ಸೇವೆಗಳನ್ನು ಪಡೆಯಲು ಇರುವ ನ್ಯೂನ್ಯತೆ/ ಅಡೆತಡೆಗಳನ್ನು ನಿವಾರಿಸಿ ಹಾಗೂ ಉತ್ತಮ ಸೇವೆಯನ್ನು ದೊರೆಯುವಂತೆ ಮಾಡಲು ಟ್ರೈಬಲ್ ಹೆಲ್ತ್ ನ್ಯಾವಿಗೇಟರ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಬಂಧ ಅರಣ್ಯಾಧಾರಿತ ಬುಡಕಟ್ಟು ಸಮುದಾಯದವರಿಂದ ಜಿಲ್ಲಾ ಆದಿವಾಸಿ ಆರೋಗ್ಯ ಸಂಯೋಜಕರು (1 ಹುದ್ದೆ) ಹಾಗೂ ತಾಲ್ಲೂಕು ಆದಿವಾಸಿ ಆರೋಗ್ಯ ಕಾರ್ಯಕರ್ತೆಯರ(03 ಹುದ್ದೆ) ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಈ ನೇಮಕವು ತಾತ್ಕಾಲಿಕವಾಗಿದೆ.

ಜಿಲ್ಲಾ ಆದಿವಾಸಿ ಆರೋಗ್ಯ ಸಂಯೋಜಕರ ಹುದ್ದೆಗೆ ಮಾಸಿಕ ವೇತನ ರೂ.25 ಸಾವಿರ ಮತ್ತು ತಾಲ್ಲೂಕು ಆದಿವಾಸಿ ಆರೋಗ್ಯ ಕಾರ್ಯಕರ್ತೆಯರ ಹುದ್ದೆಗೆ ಮಾಸಿಕ ವೇತನ ರೂ.20 ಸಾವಿರ ಆಗಿರುತ್ತದೆ. ಜಿಲ್ಲಾ ಆದಿವಾಸಿ ಆರೋಗ್ಯ ಸಂಯೋಜಕರ ಹುದ್ದೆಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. ಆರೋಗ್ಯ/ ಸಮಾಜ ಸೇವೆ ವಿಷಯದಲ್ಲಿ ಪದವಿ ಪಡೆದವರಿಗೆ ಪ್ರಥಮ ಆಧ್ಯತೆ ನೀಡಲಾಗುವುದು. ಆರೋಗ್ಯ ವಿಷಯದಲ್ಲಿ ಯಾವುದೇ ಸಂಘ ಸಂಸ್ಥೆಗಳಲ್ಲಿ ಅಥವಾ ಸರ್ಕಾರದ ಯೋಜನೆಗಳಲ್ಲಿ ಕೆಲಸ ಮಾಡಿದ ಅನುಭವವಿದ್ದವರಿಗೆ ಅವಕಾಶ ನೀಡಲಾಗುವುದು. ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ಡಿಪ್ಲೋಮೊ ವ್ಯಾಸಂಗ ಮಾಡಿದವರಿಗೂ ಸಹ ಅವಕಾಶ ನೀಡಲಾಗುವುದು. ಕಡ್ಡಾಯವಾಗಿ ಅರಣ್ಯಾಧಾರಿತ ಬುಡಕಟ್ಟು ಸಮುದಾಯದವರಾಗಿರಬೇಕು. ಕಂಪ್ಯೂಟರ್ ಬಳಕೆಯ ಕನಿಷ್ಟ ಜ್ಞಾನ ಹೊಂದಿರಬೇಕು. ಮಹಿಳಾ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

ತಾಲ್ಲೂಕು ಆದಿವಾಸಿ ಆರೋಗ್ಯ ಕಾರ್ಯಕರ್ತೆ ಹುದ್ದೆಗಳಿಗೆ ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ಡಿಪ್ಲೋಮೋ ಇನ್ ಆಕ್ಸಿಲರಿ ನರ್ಸ್ ಮಿಡ್‌ವೈಫ್ರೇ(ಎಎನ್‌ಎಂ) ಮತ್ತು ಜನರಲ್ ನರ್ಸಿಂಗ್ ಮಿಡ್‌ವೈಫ್ರೇ(ಜಿಎನ್‌ಎಂ) ಪಡೆದಿರಬೇಕು. ಆರೋಗ್ಯ/ ಸಮಾಜ ಸೇವೆ ವಿಷಯದಲ್ಲಿ ಪದವಿ ಪಡೆದವರಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಆರೋಗ್ಯ ವಿಷಯದಲ್ಲಿ ಯಾವುದೇ ಸಂಘ ಸಂಸ್ಥೆಗಳಲ್ಲಿ ಅಥವಾ ಸರ್ಕಾರದ ಯೋಜನೆಗಳಲ್ಲಿ ಕೆಲಸ ಮಾಡಿದ ಅನುಭವವಿದ್ದವರಿಗೆ ಅವಕಾಶ ಕಲ್ಪಿಸಲಾಗುವುದು. ಕಡ್ಡಾಯವಾಗಿ ಅರಣ್ಯಾಧಾರಿತ ಬುಡಕಟ್ಟು ಸಮುದಾಯದವರೇ ಆಗಿರಬೇಕು. ಕಂಪ್ಯೂಟರ್ ಬಳಕೆಯ ಕನಿಷ್ಟ ಜ್ಞಾನ ಹೊಂದಿರಬೇಕು. ಅಭ್ಯರ್ಥಿಯು ಸ್ಥಳೀಯರಾಗಿರಬೇಕು ಅಥವಾ ನಿರ್ಧಿಷ್ಟ ತಾಲ್ಲೂಕು ವ್ಯಾಪ್ತಿಯಲ್ಲಿ ವಾಸವಿರುವವರಾಗಿರಬೇಕು.

ಮಹಿಳಾ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಆದ್ದರಿಂದ ಆಸಕ್ತ ಅಭ್ಯರ್ಥಿಗಳು ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಕೊಡಗು ಜಿಲ್ಲೆ, ಮಡಿಕೇರಿ ಇವರ ಕಚೇರಿಗೆ ಅರ್ಜಿಯನ್ನು ಜನವರಿ, 17 ರೊಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, (ಲೋಕೋಪಯೋಗಿ ಇಲಾಖೆಯ ಕಟ್ಟಡದ ಹತ್ತಿರ, ಕಾನ್ವೆಂಟ್ ಜಂಕ್ಷನ್) ಕೊಡಗು ಜಿಲ್ಲೆ, ಮಡಿಕೇರಿ–ಮೊಬೈಲ್ ಸಂಖ್ಯೆ: 9353799851, 8861957577 ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಹೊನ್ನೇಗೌಡ ಅವರು ತಿಳಿಸಿದ್ದಾರೆ.

## ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

# ಸಿಂಥಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣಕ್ಕೆ ಶೀಘ್ರ ಭೂಮಿಪೂಜೆ: ಡಾ.ಮಂತರ್ ಗೌಡ



**ಮಡಿಕೇರಿ:** ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ 9 ಕೋಟಿ ರೂ. ವೆಚ್ಚದಲ್ಲಿ ಸಿಂಥಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣಕ್ಕೆ ಸರ್ಕಾರದಿಂದ ಮಂಜೂರಾತಿ ದೊರೆತಿದ್ದು, ಈಗಾಗಲೇ 20 ಲಕ್ಷ ರೂ. ಬಿಡುಗಡೆಯಾಗಿದೆ ಎಂದು ಶಾಸಕರಾದ ಡಾ.ಮಂತರ್ ಗೌಡ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಕೊಡಗು ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಸಾಂಸ್ಕೃತಿಕ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಹಾಗೆಯೇ ಜಿಲ್ಲಾ ಕ್ರೀಡಾಂಗಣದಲ್ಲಿ ಮಿನಿ ಒಳಾಂಗಣ ಸೆಮಿ ಇಂಡೋರ್ ಸಿಂಥಟಿಕ್ ಬಾಸ್ಕೆಟ್ ಬಾಲ್ ಅಂಕಣ ನಿರ್ಮಾಣಕ್ಕೆ ಸರ್ಕಾರದಿಂದ 150 ಲಕ್ಷ ರೂ. ವೆಚ್ಚಕ್ಕೆ ಅನುಮೋದನೆ ದೊರೆತಿದ್ದು, ಈಗಾಗಲೇ 20 ಲಕ್ಷ ರೂ. ಬಿಡುಗಡೆಯಾಗಿದೆ ಎಂದು ಶಾಸಕರು ವಿವರಿಸಿದರು.

ಸರ್ಕಾರ ಕ್ರೀಡೆಗೆ ಹೆಚ್ಚಿನ ಉತ್ತೇಜನ ನೀಡಿದ್ದು, ಕ್ರೀಡಾಕ್ಷೇತ್ರದಲ್ಲಿ ಹೆಸರುವಾಸಿಯಾಗಿರುವ ಕೊಡಗು ಜಿಲ್ಲೆ, ಕ್ರೀಡೆಯಲ್ಲಿ ಮತ್ತಷ್ಟು ಹೆಚ್ಚಿನ ಸಾಧನೆ ಮಾಡುವಂತಾಗಬೇಕು ಎಂದು ಸಲಹೆ ಮಾಡಿದರು.

ರಾಜ್ಯ ಸರ್ಕಾರಿ ನೌಕರರ ಭವನ ನಿರ್ಮಾಣಕ್ಕೆ ಈಗಾಗಲೇ ಜಾಗ ಗುರುತಿಸಲಾಗಿದ್ದು, ಮುಖ್ಯಮಂತ್ರಿ ಅವರ ವಿಶೇಷ ಅನುದಾನ ಅಥವಾ ಶಾಸಕರ ನಿಧಿಯಿಂದ ಅನುದಾನ ಬಿಡುಗಡೆ ಮಾಡಿಸಿ, ಪ್ರಸಕ್ತ ವರ್ಷವೇ ಭೂಮಿ ಪೂಜೆ ನೆರವೇರಿಸಲಾಗುವುದು ಎಂದು ಡಾ.ಮಂತರ್ ಗೌಡ ಅವರು ಹೇಳಿದರು.

ಸರ್ಕಾರಿ ನೌಕರರ ಭವನ ನಿರ್ಮಾಣ ಸಂಬಂಧ ನೀಲ ನಕಾಶೆ ಸಿದ್ಧಪಡಿಸಿ ಅಂದಾಜು ಪಟ್ಟಿ ಸಲ್ಲಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕಕ್ಕೆ ಸಲಹೆ ಮಾಡಿದರು.

ಸರ್ಕಾರಿ ನೌಕರರು ಪ್ರತೀ ನಿತ್ಯ ಒಂದಲ್ಲ ಒಂದು ರೀತಿ ಒತ್ತಡದಲ್ಲಿ ಕೆಲಸ ನಿರ್ವಹಿಸುತ್ತಾರೆ. ಒತ್ತಡದ ನಡುವೆ ಆರೋಗ್ಯಕ್ಕೆ ಸಮಯ ನೀಡಿದ್ದಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗಲಿದೆ ಎಂದು ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರತಿನಿತ್ಯದ ಕೆಲಸದ ನಡುವೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಓಟ, ನಡಿಗೆ, ಹೀಗೆ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಂತಾಗಬೇಕು. ಇದರಿಂದ ಮಾನಸಿಕ ಮತ್ತು ದೈಹಿಕವಾಗಿ ಸದೃಢರಾಗಿರಲು ಸಾಧ್ಯವಾಗಲಿದೆ ಎಂದು ಡಾ.ಮಂತರ್ ಗೌಡ ಅವರು ವಿವರಿಸಿದರು.

ಮಾನಸಿಕ ಮತ್ತು ದೈಹಿಕವಾಗಿ ಪರಿಪೂರ್ಣರಾಗಿದ್ದಲ್ಲಿ ಎಷ್ಟೇ ಒತ್ತಡವಿದ್ದರೂ ಕೆಲಸ ನಿಭಾಯಿಸಬಹುದು. ಆ ನಿಟ್ಟಿನಲ್ಲಿ ಆರೋಗ್ಯವೇ ಭಾಗ್ಯ ಎನ್ನುವಂತೆ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು. ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತಾಗಬೇಕು ಎಂದು ಶಾಸಕರು ನುಡಿದರು.

ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ಅಧ್ಯಕ್ಷರಾದ ಎಂ.ಸಿ.ಅರುಣ್ ಕುಮಾರ್ ಅವರು ಮಾತನಾಡಿ ಪ್ರತಿ ವರ್ಷದಂತೆ ಈ ವರ್ಷವೂ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಹೇಳಿದರು.

ರಾಜ್ಯ ಸರ್ಕಾರಿ ನೌಕರರಿಗೆ ಜಿಲ್ಲಾ ಮಟ್ಟದಲ್ಲಿ ಸರ್ವೋತ್ತಮ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಇದನ್ನು ಮುಂದುವರಿಸುವಂತಾಗಬೇಕು ಎಂದು ಕೋರಿದರು.

ಸರ್ಕಾರಿ ನೌಕರರ ಭವನ ನಿರ್ಮಾಣಕ್ಕೆ ಜಾಗವಿದ್ದು, ಹೆಚ್ಚಿನ ಅನುದಾನ ಒದಗಿಸುವಂತಾಗಬೇಕು ಎಂದು ಇದೇ ಸಂದರ್ಭದಲ್ಲಿ ಶಾಸಕರಲ್ಲಿ ಮನವಿ ಮಾಡಿದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ, ಸಂಘದ ನಿರ್ದೇಶಕರಾದ ಎಸ್.ಹೊನ್ನೇಗೌಡ, ಜಿಲ್ಲಾ ಕಾರ್ಯದರ್ಶಿ ಬಿ.ಜಿ.ಸಂದೀಪ, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷರಾದ ಜಿಲ್ಲಾ ಖಜಾಂಜಿ ಪಿ.ಡಿ.ರಾಜೇಶ್, ರಾಜ್ಯ ಪರಿಷತ್ತಿನ ಸದಸ್ಯರಾದ ಪಿ.ಎಂ.ಬಾಬು, ರಾಜ್ಯ ಸರ್ಕಾರಿ ನೌಕರರ ತಾಲ್ಲೂಕು ಘಟಕದ ಅಧ್ಯಕ್ಷರಾದ ಪ್ರದೀಪ್, ಕೆ.ಎಂ.ತಿಮ್ಮಯ್ಯ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಕಾರ್ಯಾಧ್ಯಕ್ಷರಾದ ಮೋಹನ್ ಪೆರಾಜೆ, ಗೌರವಾಧ್ಯಕ್ಷರಾದ ಶಮ್ಮಿ ಎಸ್.ಟಿ, ಇತರರು ಇದ್ದರು. ಹಾಕಿ ಸೇರಿದಂತೆ ವಿವಿಧ ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಲಹರಿ ತಂಡದವರು ನಾಡಗೀತೆ, ರೈತಗೀತೆ ಹಾಡಿದರು.

## ಋತುಚಕ್ರ ಸಮಯದಲ್ಲಿ ಮಾಸಿಕ ಒಂದು ದಿನ ವೇತನ ಸಹಿತ ರಜೆ

**ಮಡಿಕೇರಿ:** ವಿವಿಧ ಕಾರ್ಮಿಕ ಕಾಯ್ದೆಗಳಡಿಯಲ್ಲಿ ನೋಂದಣಿಯಾಗಿರುವ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಋತುಚಕ್ರದ ಸಮಯದಲ್ಲಿ ಮಾಸಿಕ ಒಂದು ದಿನದ ವೇತನ ಸಹಿತ ರಜೆ ಸೌಲಭ್ಯವನ್ನು ಉದ್ಯೋಗದಾತರು ನೀಡಬೇಕು ಮತ್ತು ಮಹಿಳಾ ನೌಕರರು ಪಡೆಯಬೇಕು ಎಂದು ಮಡಿಕೇರಿ ವೃತ್ತ, ಮಡಿಕೇರಿಯ ಹಿರಿಯ ಕಾರ್ಮಿಕ ನಿರೀಕ್ಷಕರಾದ ಎಂ.ಎಂ.ಯತ್ನಟ್ಟಿ ಅವರು ತಿಳಿಸಿದ್ದಾರೆ.

ಕಾರ್ಖಾನೆಗಳ ಕಾಯ್ದೆ 1948, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961, ತೋಟ ಕಾರ್ಮಿಕರ ಕಾಯ್ದೆ 1951, ಬೀಡಿ ಮತ್ತು ಸಿಗಾರ ಕಾರ್ಮಿಕರ ಕಾಯ್ದೆ 1966 ಹಾಗೂ ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ 1961ರಡಿ ನೋಂದಣಿಯಾಗಿರುವ ಎಲ್ಲಾ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲಾ ಖಾಯಂ, ಗುತ್ತಿಗೆ ಮತ್ತು ಹೊರಗುತ್ತಿಗೆ ಮಹಿಳಾ ಕಾರ್ಮಿಕರುಗಳಿಗೆ ಅವರ ಋತುಚಕ್ರದ ಸಮಯದಲ್ಲಿ ಪ್ರತಿ ಮಾಸಿಕ ಒಂದು ದಿನದ ರಜೆಯಂತೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು ಉದ್ಯೋಗದಾತರು ಒದಗಿಸುವಂತೆ ಸರ್ಕಾರವು ಆದೇಶಿಸಿದ್ದು, ಯಾವುದೇ ವೈದ್ಯಕೀಯ ಪ್ರಮಾಣಪತ್ರ ಒದಗಿಸುವ ಅವಶ್ಯಕತೆ ಇರುವುದಿಲ್ಲ ಎಂದು ಹಿರಿಯ ಕಾರ್ಮಿಕ ನಿರೀಕ್ಷಕರಾದ ಎಂ.ಎಂ.ಯತ್ನಟ್ಟಿ ಅವರು ತಿಳಿಸಿದ್ದಾರೆ.

## ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಆಹ್ವಾನ

**ಮಡಿಕೇರಿ:** ಕೊಡಗು ಜಿಲ್ಲೆಯ 2026–27 ನೇ ಸಾಲಿಗೆ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ "ಕಣ್ಣಿನ ಪೊರೆ ಶಸ್ತಚಿಕಿತ್ಸೆ ನಡೆಸಲು" ಆಸಕ್ತಿಯುಳ್ಳ ಅನುಭವವುಳ್ಳ ಅರ್ಹ ಸ್ವಯಂ ಸೇವಾ ಸಂಸ್ಥೆಗಳಿಗೆ (ಎನ್.ಜಿ.ಓ) ಆಸಕ್ತ ಅಭಿವ್ಯಕ್ತಿ ಸ್ವ–ಇಚ್ಛೆ (ಎಕ್ಸ್‌ಪ್ರೆಸನ್ ಆಫ್ ಇಂಟ್ರೆಸ್ಟ್) ಅರ್ಜಿಯನ್ನು ಆಹ್ವಾನಿಸಿದ್ದು, ಅರ್ಹ ಸ್ವಯಂ ಸೇವಾ ಸಂಸ್ಥೆಗಳಿಂದ 'ಎಕ್ಸ್‌ಪ್ರೆಸನ್ ಆಫ್ ಇಂಟ್ರೆಸ್ಟ್' ಅನ್ನು ಜನವರಿ, 30 ರವರೆಗೆ ಕರೆಯಲಾಗಿದ್ದು, ಹೆಚ್ಚಿನ ಮಾಹಿತಿಗೆ https://kppp.karnataka.gov.in/ ಅಲ್ಲಿ ನೋಡಬಹುದಾಗಿದೆ ಹಾಗೂ ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳ ಕಛೇರಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಮಡಿಕೇರಿ , ಕೊಡಗು ಜಿಲ್ಲೆ ವಿಳಾಸ: ಜಥಭಿಇಾಜಚಿರಣ@ರಟಚಿಟ.ಛಿಊಟ ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿ ಅವರು ತಿಳಿಸಿದ್ದಾರೆ.

# ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿಡಲು ಇವು ಬೇಕು

ಚಳಿಗಾಲದಲ್ಲಿ ಬೆಚ್ಚಗೆ ಹೊದ್ದುಕೊಂಡು ಬೆಂಕಿಯ ಶಾಖವನ್ನು ಆಸ್ವಾದಿಸುತ್ತಾ ಬಿಸಿಬಿಸಿಯಾದ ಮಸಾಲಾ ಟೀ ಹೀರುತ್ತಿದ್ದರೆ ಸ್ವರ್ಗವೇ ಧರೆಗಿಳಿದಂತಹ ಅನುಭವ.

ಕೆಲವೊಮ್ಮೆ ಬೆಚ್ಚಗಿನ ದಿರಿಸು ಧರಿಸಿಯೂ, ಬೆಂಕಿಯ ಶಾಖವನ್ನು ಸಾಕಷ್ಟು ಪಡೆದರೂ ದೇಹ ಶೀತ ನೆಗಡಿಯಿಂದ ಬಳಲಿ ಸುಸ್ತು, ತಲೆಸುತ್ತುವುದು ಮೊದಲಾದ ತೊಂದರೆಗಳನ್ನು ಎದುರಿಸಿದರೆ ಅದು ಚಳಿಯ ತಪ್ಪಲ್ಲ, ನಮ್ಮ ದೇಹದೊಳಗಿನ ಬಿಸಿ ಸಾಕಷ್ಟಿಲ್ಲದಿರುವುದೇ ಕಾರಣ. ಏಕೆಂದರೆ ಬಿಸಿರಕ್ತಪ್ರಾಣಿಗಳಾದ ನಮ್ಮ ಶರೀರ ಪ್ರತಿಕ್ಷಣ ಒಳಗಿನಿಂದ ಬೆಚ್ಚಗಿರುವುದು ಅವಶ್ಯ.

ಇದಕ್ಕಾಗಿ ಶರೀರ ಸದಾ ಕೆಲವು ಕ್ಯಾಲೋರಿಗಳನ್ನು ಸುಡುತ್ತಾ ಇರುತ್ತದೆ. ನಾವು ಸೇವಿಸುವ ಆಹಾರದಲ್ಲಿರುವ ಕ್ಯಾಲೋರಿಗಳು ಕಡಿಮೆ ಪ್ರಮಾಣದಲ್ಲಿದ್ದರೆ ಅವು ಕೆಲಕ್ಷಣಗಳಲ್ಲಿಯೇ ಉರಿದು ಖಾಲಿಯಾಗಿ ದೇಹಕ್ಕೆ ಶಾಖ ಉತ್ಪಾದಿಸಿಕೊಳ್ಳಲು ಅಥವಾ ತಕ್ಕ ಪ್ರಮಾಣದಲ್ಲಿ ಉತ್ಪಾದಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗಾಗಿ ಚಳಿಗಾಲದಲ್ಲಿ ದೇಹ ಬೆಚ್ಚಗಿರಲು ನಮಗೆ ವಿಶೇಷ ಆಹಾರಗಳ ಅಗತ್ಯವಿದೆ. ಈ ಆಹಾರಗಳ ಮೂಲಕ ನಮ್ಮ ಕರುಳುಗಳು ಕ್ಯಾಲೋರಿಗಳನ್ನು ಒಮ್ಮೆಲೇ ನೀಡದೇ ನಿಧಾನವಾಗಿ ಬಿಡುಗಡೆ ಮಾಡುತ್ತವೆ. ಒಂದು ಮೇಣದಬತ್ತಿ ಬೆಂಕಿಗೆ ನಿಧಾನವಾಗಿ ಕರಗಿದ ಹಾಗೆ. ತನ್ಮೂಲಕ ದೇಹ ಹೆಚ್ಚು ಹೊತ್ತು ಬೆಚ್ಚಗಿರಲು ಹಾಗೂ ಆರೋಗ್ಯದಿಂದಿರಲು ಸಾಧ್ಯವಾಗುತ್ತದೆ. ವೈದ್ಯಕೀಯ ಭಾಷೆಯಲ್ಲಿ ಇದಕ್ಕೆ ಆಹಾರದ pecific dynamic action ಎಂದು ಕರೆಯುತ್ತಾರೆ.





### 1.ಶುಂಠಿ ಮತ್ತು ಬೆಳ್ಳುಳ್ಳಿ

ಶುಂಠಿ ಮತ್ತು ಬೆಳ್ಳುಳ್ಳಿ ಶೀತವಾದರೆ ಶುಂಠಿ ಹಾಕಿ ಬೇಯಿಸಿದ ಕಷಾಯ ಮಾಡಿಕೊಟ್ಟಿದ್ದು ನೆನಪಿದೆಯೇ? ಚಳಿಗಾಲಕ್ಕೆ ಹಸಿಶುಂಠಿ ಮತ್ತು ಬೆಳ್ಳುಳ್ಳಿ ಅತ್ಯುತ್ತಮವಾಗಿದೆ. ನಿಮ್ಮ ಆಹಾರಗಳಲ್ಲಿ ಶುಂಠಿ ಮತ್ತು ಬೆಳ್ಳುಳ್ಳಿಗಳನ್ನು ಬಳಸಲಾದ ಆಹಾರಗಳನ್ನು ಹೆಚ್ಚು ಹೆಚ್ಚಾಗಿ ಸೇವಿಸಿ. ಬಿಸಿಬಿಸಿಯಾದ ತಿಳಿಸಾರು (ರಸಂ), ಬಿಸಿಬಿಸಿ ಚಹಾದಲ್ಲಿ ಹಸಿಶುಂಠಿ.

### 2 ಶುಂಠಿ ಮತ್ತು ಜೇನು

ಶುಂಠಿ ಮತ್ತು ಜೇನಿನ ಕಷಾಯ ಶುಂಠಿ ಮತ್ತು ಜೇನನ್ನು ಅನೇಕ ಆರೋಗ್ಯ ಸಮಸ್ಯೆಗಳಿಗೆ ಮನೆಮದ್ದಾಗಿ ಬಳಸುತ್ತೇವೆ. ಸಾಮಾನ್ಯ ಕೆಮ್ಮು–ಶೀತ ಶುಂಠಿ ಮತ್ತು ಟೀ ಕಷಾಯಕ್ಕೆ ಹೆದರಿ ದೂರಾಗುವುದು.

**ಪ್ರಯೋಜನಗಳು**

*ದೇಹವನ್ನು ಬೆಚ್ಚಗಿಡುತ್ತದೆ * ಶೀತ, ಕೆಮ್ಮು ತಡೆಗಟ್ಟುತ್ತೆ * ರೋಗ ನಿರೊಧಕ ಶಕ್ತಿ ಹೆಚ್ಚಿಸುವುದು ಬೇಕಾಗುವ ಸಾಮಗ್ರಿ * ಶುಂಠಿ * ಚಕ್ಕೆ * ಜೇನು ಮಾಡುವ ಶುಂಠಿ, ಚಕ್ಕೆ ಹಾಕಿದ ನೀರನ್ನು ಕುದಿಸಿ, ಅದಕ್ಕೆ ಜೇನು ಸೇರಿಸಿ ಕುಡಿಯಿರಿ.

### 3 ಬಾದಾಮಿ ಹಾಲು

ಚಳಿಗಾಲದಲ್ಲಿ ಬಾದಾಮಿ ಹಾಲು ಕುಡಿಯುವುದು ತುಂಬಾ ಒಳ್ಳೆಯದು. ಬೇಸಿಗೆಯಲ್ಲಿ ತಣ್ಣನೆಯ ಬಾದಾಮಿ



ಹಾಲು ಕುಡಿದರೆ ಚಳಿಗಾಲದಲ್ಲಿ ಬಿಸಿ–ಬಿಸಿಯಾದ ಬಾದಾಮಿ ಹಾಲನ್ನು ಹೀರಿ. ಪ್ರಯೋಜನಗಳು * ದೇಹವನ್ನು ಬೆಚ್ಚಗಿಡುವುದು *ಪ್ರೊಟೀನ್ ಹಾಗೂ ಒಳ್ಳೆಯ ಕೊಬ್ಬಿನಂಶ ಸಿಗುವುದು * ರೋಗ ನಿರೋಧಕ ಶಕ್ತಿ ಹೆಚ್ಚುವುದು ಬೇಕಾಗುವ ಸಾಮಗ್ರಿ * ಹಾಲು * 7–8 ಬಾದಾಮಿ (ಚಿಕ್ಕದಾಗಿ ಕತ್ತರಿಸಿದ್ದು ಅಥವಾ ಪುಡಿ ಮಾಡಿದ್ದು) * ಚಿಟಿಕೆಯಷ್ಟು ಕೇಸರಿ * ಏಲಕ್ಕಿ ಮಾಡುವ ವಿಧಾನ ಹಾಲಿಗೆ ಪುಡಿ ಮಾಡಿದ ಬಾದಾಮಿ ಹಾಕಿ ಕುದಿಸಿ ಅದಕ್ಕೆ ಕೇಸರಿ ಹಾಗೂ ಏಲಕ್ಕಿ ಸೇರಿಸಿ ಮತ್ತೆ ಸ್ವಲ್ಪ ಹೊತ್ತು ಕುದಿಸಿ ಕುಡಿಯಿರಿ.

### 4 ಅರಿಶಿಣ ಹಾಲು

ಅರಿಶಿಣ ಹಾಕಿದ ಹಾಲು ಕೆಲವರಿಗೆ ಹಾಲು ಇಷ್ಟವಾಗುವುದಿಲ್ಲ, ಅಂಥವರು ಬಾದಾಮಿ ಅಥವಾ



ತೆಂಗಿನಕಾಯಿ ಹಾಲು ಜೊತೆ ಸವಿಯಬಹುದು. ಇದನ್ನು ಕುಡಿಯುವುದರಿಂದ ದೊರೆಯುವ ಪ್ರಯೋಜನಗಳು

* ರೋಗ ನಿರೋಧಕ ಶಕ್ತಿ ಹೆಚ್ಚಿಸುವುದು
* ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿಡುವುದು
* ತೂಕ ಇಳಿಕೆಗೆ ಸಹಕಾರಿ
* ಒಳ್ಳೆಯ ನಿದ್ದೆಗೆ ಸಹಕಾರಿ.

**ಏನೆಲ್ಲಾ ಸಾಮಗ್ರಿ ಬೇಕು?**

* 1/2 ಚಮಚ ಅರಿಶಿಣ ಪುಡಿ
* ಚಿಟಿಕೆಯಷ್ಟು ಕಾಳು ಮೆಣಸಿನ ಪುಡಿ
* ಸ್ವಲ್ಪ ಚಕ್ಕೆ ಪುಡಿ,ಲವಂಗ, ಶುಂಠಿ, ಜೇನು,ನಕ್ಷತ್ರ ಮೊಗ್ಗು

ಈ ಎಲ್ಲಾ ಸಾಮಗ್ರಿ ಹಾಲಿನಲ್ಲಿ ಹಾಕಿ ಕುದಿಸಿ ಕುಡಿಯಿರಿ.




### 5 ಹಾಟ್ ಆಪಲ್ ಸಿಡರ್ ವಿನೆಗರ್

ಚಳಿಗಾಲದಲ್ಲಿ ಆಪಲ್ ಸಿಡೆಗರ್ ವಿನಗೆರ್‌ಗೆ ಸ್ವಲ್ಪ ಮಸಾಲೆ ಪದಾರ್ಥ ಸೇರಿಸಿ ಕುಡಿದರೆ ತುಂಬಾನೇ ಒಳ್ಳೆಯದು. ಇದರಿಂದ ದೊರೆಯುವ ಪ್ರಯೋಜನಗಳು

* ಉರಿಯೂತ ಕಡಿಮೆಯಾಗುವುದು
* ಜೀರ್ಣಕ್ರಿಯೆಗೆ ಒಳ್ಳೆಯದು
* ಚಯಪಚಯ ಕ್ರಿಯೆ ಉತ್ತಮವಾಗುವುದು
* ದೇಹವನ್ನು ಡಿಟಾಕ್ಸ್ ಮಾಡುವುದು

**ತಯಾರಿಸಲು ಬೇಕಾಗುವ ಸಾಮಗ್ರಿಗಳು**

* 7–8 ಸೇಬು
* 1 ನಿಂಬೆ ಹಣ್ಣು
* 1 ಕಿತ್ತಳೆ
* ಕ್ರೇನ್‌ಬೆರ್ರಿ
* ಲವಂಗ
* 1 ನಕ್ಷತ್ರ ಮೊಗ್ಗು



✍ಸೌಮ್ಯಸನತ್

**ಸ್ವೀಟ್ನರ್ ಮಾಡುವ ವಿಧಾನ**

ಸೇಬಿನ ಸಿಪ್ಪೆ ಸುಲಿದು ಒಂದು ಕಿತ್ತಳೆ, ನಿಂಬೆಯನ್ನು ಚಿಕ್ಕದಾಗಿ ಕತ್ತರಿಸಿ ಕ್ರೇನ್‌ಬೆರ್ರಿ ಸೇರಿಸಿ 2 ಇಂಚಿನಷ್ಟು ದೊಡ್ಡದಾದ ಚಕ್ಕೆ, 1 ಲವಂಗ, 1 ನಕ್ಷತ್ರ ಮೊಗ್ಗು ಸೇರಿಸಿ ಸ್ವೀಟ್ನರ್ ಸೇರಿಸಿ ( ಕೋಕನಟ್ ಶುಗರ್, ಮ್ಯಾಪ್ಲೆ ಸಿರಪ್ ಹೀಗೆ ಯಾವುದೇ ಸ್ವೀಟ್ನರ್ ಸೇರಿಸಬಹುದು) ನಂತರ ದೊಡ್ಡ ಪ್ಯಾನ್‌ನಲ್ಲಿ 2–3 ಲೀಟರ್, ಈ ಸಾಮಗ್ರಿ ಹಾಕಿ ನೀರು ಸೇರಿಸಿ ಕುದಿಸಿ, 3 ಲೀಟರ್ ನೀರು ಒಂದೂವರೆ ಲೀಟರ್ ಆಗುವಷ್ಟು ಹೊತ್ತು ಆರಿದ ಮೇಲೆ ಕುದಿಸಿ ಫ್ರಿಡ್ಜ್‌ನಲ್ಲಿಟ್ಟು ಕುಡಿಯಿರಿ. ಒಮ್ಮೆ ಮಾಡಿದರೆ 2 ವಾರಗಳವರೆಗೆ ಬಳಸಬಹುದು.

**ಸಲಹೆ:** ಈ ಎಲ್ಲಾ ಪಾನೀಯ ಒಂದೇ ದಿನ ಟ್ರೈ ಮಾಡಬೇಡಿ, ನಿಮಗೆ ಯಾವುದು ಸೂಕ್ತ ಅನಿಸುವುದೋ ಅದನ್ನು ಮಾಡಿ ಕುಡಿಯಿರಿ.

# ಅರಸು- ಸಿದ್ದು ಯಾರದ್ದು ಶ್ರೇಷ್ಠ ದಾಖಲೆ...?



ಅಂತೂ ಇಂತೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಂತರಂಗದಲ್ಲಿ ಸದಾ ತೇಲಾಡುತ್ತಿದ್ದ ಉತ್ಕಟ ಬಯಕೆಯೊಂದು ನನಸಾಗಿ "ಅತಿಹೆಚ್ಚು ಕಾಲ ಕರ್ನಾಟಕವನ್ನು ಆಳಿದ ಮುಖ್ಯಮಂತ್ರಿ " ಎಂಬ ದಾಖಲೆಯ ಪುಟಗಳಿಗೆ ಇಂದು ಅವರ ಹೆಸರು ಮಾನ್ಯ ಶ್ರೀ ಡಿ.ದೇವರಾಜ ಅರಸುರವರ ಹೆಸರನ್ನು ಪಕ್ಕಕ್ಕೆ ಸರಿಸಿ ಸೇರ್ಪಡೆಯಾಗಿದೆ.

ಮಾನ್ಯ ಶ್ರೀ ಡಿ. ದೇವರಾಜ ಅರಸುರವರು
20.03. 1972 ರಿಂದ 31–12.1977 ರವರೆಗೆ ಮತ್ತು
28–02–1978 ರಿಂದ 07– 01–1980 ರವರೆಗೆ ಒಟ್ಟು 7 ವರ್ಷ 238 ದಿನ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರೆ, ಶ್ರೀ. ಸಿದ್ದರಾಮಯ್ಯನವರು 13–05– 2013 ರಿಂದ 15–.05–2018 ರವರೆಗೆ ಹಾಗೂ ಮತ್ತೇ 20 –05– 2023 ರಿಂದಲೂ 7 ವರ್ಷ 239 ದಿನ ಸಿಎಂ ಆಗಿ ಇಂದಿಗೂ ಮುಂದುವರೆದಿದ್ದಾರೆ.


ಇಂಥಾದ್ದೊಂದು ದಾಖಲೆಯಿಂದಾಗಿ ಸ್ವತಃ ಸಿದ್ದು ಮತ್ತು ಅವರ ಬೆಂಬಲಿಗರು ಫುಲ್‌ಖುಷ್ ಆಗಿ ಇದನ್ನು ಅದ್ಭುತ ಸಾಧನೆಯೆಂಬಂತೆ, ಅವರನ್ನು ಹಿಂದುಳಿದ ವರ್ಗಗಳ ಚಾಂಪಿಯನ್ ಎಂಬಂತೆ ವಿಧವಿಧವಾದ ವಿಶೇಷಣಗಳಿಂದ ವರ್ಣಿಸಿ ಬಣ್ಣಿಸಿ ಹೊಗಳಿಕೆಯ ಹೊನ್ನ ಶೂಲಕ್ಕೇರಿಸುತ್ತಿದ್ದರೆ, ಇತ್ತ ಸಿದ್ದು ವಿರೋಧಿಗಳಿಗೆ ಈ ಸಾಧನೆಯ ದಾಖಲೆಯೆಂಬುದು ಸಹಿಸಲಾಗದ ವೇದನೆಯಾಗಿದ್ದು "ಎಲ್ಲಿಯ ಅರಸು, ಎಲ್ಲಿಯ ಸಿದ್ದು, ಎಲ್ಲಿಯ ಹೋಲಿಕೆ" ಎಂಬಂತೆ ತೀರ ವ್ಯಂಗ್ಯವಾಗಿ ಅವರನ್ನು ತಿವಿಯುತ್ತಾ ತಮ್ಮ ಅಸಹನೆ,ಅಸೂಯೆ ಆಕ್ರೋಶವನ್ನೆಲ್ಲಾ ಹೊರಹಾಕುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಏನಾದರೂ ಹೇಳುವುದಕ್ಕಿಂತ ಮೊದಲು ಈ ವಿಶಿಷ್ಟ ದಾಖಲೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಮನಸಾರೆ ಅಭಿನಂದಿಸೋಣ.

ಕೇವಲ ಹೆಚ್ಚುಕಾಲ ಮುಖ್ಯಮಂತ್ರಿ ಎಂಬ ಈ ದಾಖಲೆಯ ಆಧಾರದಲ್ಲಿ ದೇವರಾಜ ಅರಸುರವರನ್ನು ಸಿದ್ದರಾಮಯ್ಯನವರೊಂದಿಗೆ ಹೋಲಿಸುವುದು ಎಷ್ಟು ತಪ್ಪೋ, ಹಾಗೆಯೇ ಈ ಸಂದರ್ಭದಲ್ಲಿ ಸಿದ್ದುರವರನ್ನು, ಅವರ ಸಾಧನೆಯನ್ನು ತೀರ ಕಡೆಗಣಿಸಿ ಅಸೂಯೆಯಿಂದ, ರಾಜಕೀಯ ವೈಷಮ್ಯದಿಂದ ಮಾತನಾಡುವುದೂ ಸಹಾ ಅಷ್ಟೇ ಅಸಮಂಜಸ.

ಅರಸುರವರನ್ನು ಇಂದಿಗೂ ರಾಜ್ಯ ನೆನಪಿನಲ್ಲಿಟ್ಟು ಕೊಳ್ಳುವುದು ವಿಶೇಷವಾಗಿ ಬಡವರ, ಶೋಷಿತರ, ಹಿಂದುಳಿದವರ, ಭೂರಹಿತರ , ದನಿಯಿಲ್ಲದವರ, ಸೂರಿಲ್ಲದ ಕೋಟ್ಯಂತರ ಜನರ ಪಾಲಿನ ಆಶಾಕಿರಣವಾಗಿ ಅವರ ಬದುಕಿಗೆ ಭದ್ರತೆಯೊದಗಿಸುವಂಥ " ಉಳುವವನೇ ಭೂಮಿಗೊಡೆಯ" ಎಂಬಂತಹ ಶಾಶ್ವತವಾದ ದಿಟ್ಟ ಭೂಸುಧಾರಣಾ ಯೋಜನೆಗಳನ್ನು ಎಷ್ಟೇ ವಿರೋಧವಿದ್ದರೂ ಸಮರ್ಪಕವಾಗಿ ಜಾರಿಗೊಳಿಸುವ ಗಂಡೆದೆ ತೋರಿದ ಪ್ರಾಮಾಣಿಕತೆಗಾಗಿ, ಧೀಮಂತಿಕೆಗಾಗಿ ಹಾಗೂ ಅನನ್ಯ ದಿಟ್ಟತನಕ್ಕಾಗಿ. ಅದರ ಜೊತೆಗೆ ಈ ತಳ ಸಮುದಾಯಗಳ ಸರ್ವಾಂಗೀಣ ಅಭ್ಯುದಯಕ್ಕಾಗಿ ತಮ್ಮ ಅಧಿಕಾರವನ್ನೇ ಪಣಕ್ಕಿಟ್ಟು ತೋರಿದ ಅವರ ನಿಸ್ಸಂಶಯವಾದ ಪ್ರಾಮಾಣಿಕಬದ್ದತೆಗಾಗಿ.

ಅರಸುರವರ ಈ ಆಶಯ ಅವರ ಆಡಳಿತದ ಪ್ರತೀ ಹಂತದಲ್ಲೂ ಸ್ಪಷ್ಟವಾಗಿ ಜಾರಿಯಾಗಿದ್ದರ ಫಲವಾಗಿಯೇ ಬಡವರು, ಭೂರಹಿತರು, ವಸತಿಹೀನರು, ದುರ್ಬಲರು ಶೋಷಿತರು ಮುಂತಾದ ದನಿಯಿಲ್ಲದ ವರ್ಗಗಳಿಗೆ ರಾಜಕೀಯ, ಸಾಮಾಜಿಕ, ಆರ್ಥಿಕ, ಪ್ರಾತಿನಿಧ್ಯ ಸಿಕ್ಕು ಕರುನಾಡಿನ ರಾಜಕೀಯ ಚರಿತ್ರೆಯಲ್ಲಿ ಈ ನಿರ್ಧಾರಗಳು ಇಂದಿಗೂ ಕ್ರಾಂತಿಕಾರಿ ಎನಿಸಿಕೊಂಡಿರಲು ಸಾಧ್ಯವಾಗಿದ್ದು.



✍ಹಿರಿಯೂರು ಪ್ರಕಾಶ್

ಹಾಗೆಯೇ ಸಿದ್ದರಾಮಯ್ಯನವರು ತಾವು ನಂಬಿದ ಸಿದ್ಧಾಂತಕ್ಕೆ ಬದ್ದರಾಗಿ ತಮ್ಮ ಆಡಳಿತದಲ್ಲಿ ಅಹಿಂದ ವರ್ಗಕ್ಕೆ ವಿಶೇಷ ಮಹತ್ವವನ್ನು ಕೊಡುವುದರ ಜೊತೆಗೆ ಅನ್ನಭಾಗ್ಯ, ಕ್ಷೀರಭಾಗ್ಯ, ಇಂದಿರಾ ಕ್ಯಾಂಟೀನ್ ಗಳಂತಹ ಬಡಪರ ಯೋಜನೆಗಳೊಂದಿಗೆ, ತಮ್ಮ ಎರಡನೆಯ ಅವಧಿಯಲ್ಲಿ ಐದು ಗ್ಯಾರಂಟೀಗಳ ಸಮರ್ಪಕ ಅನುಷ್ಠಾನದಿಂದಾಗಿ ಅಶಕ್ತ ವರ್ಗಗಳಿಗೆ , ಶ್ರೀಸಾಮಾನ್ಯರಿಗೆ, ವಿಶೇಷವಾಗಿ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ.

ಅರಸು ಮತ್ತು ಸಿದ್ದು ರವರ ಆಡಳಿತದ ರೀತಿ, ನೀತಿ, ಯೋಜನೆ ಹಾಗೂ ಧೋರಣೆಗಳ ಹಿಂದೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಸಮಾನ ಅಂಶ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರೂ, ಅದೊಂದೇ ಕಾರಣಕ್ಕೆ ಇವರಿಬ್ಬರನ್ನು ಹೋಲಿಸಿ ಮಾತನಾಡುವುದೇ ಅತಾರ್ಕಿಕ . ಅರಸುರವರ ಕಾಲಘಟ್ಟ, ಅಂದಿನ ರಾಜಕೀಯ ವಾತಾವರಣ ಹಾಗೂ ತಮ್ಮ ಆಶಯಗಳ ಈಡೇರಿಕೆಗೆ ಬಲಾಢ್ಯರನ್ನು ಎದುರು ಹಾಕಿಕೊಳ್ಳುವ ಅವರಲ್ಲಿದ್ದ ಆ ಆತ್ಮಸ್ಥೈರ್ಯ ಇವೇ ಮುಂತಾದ ವಿಚಾರಗಳ ಆಧಾರಗಳಲ್ಲಿ ಅರಸು ಮತ್ತು ಸಿದ್ದು ನಡುವೆ ವಿಭಿನ್ನ ಶೈಲಿಯ ಆಡಳಿತವನ್ನು ಕಾಣಬಹುದು. ಹಾಗಾಗಿ ಯಾವ ಕಾರಣಕ್ಕೂ ಅರಸು ಮತ್ತು ಸಿದ್ದರಾಮಯ್ಯನವರ ನಡುವಿನ ಹೋಲಿಕೆ ಸಲ್ಲದು. ಇದನ್ನು ಸ್ವತಃ ಸಿದ್ದರಾಮಯ್ಯನವರೇ ಸ್ಪಷ್ಟಪಡಿಸಿದ್ದಾರೆ.

ಅಸಲಿಗೆ ದಾಖಲೆ ಎಂದರೆ ಏನು. ? ಅದನ್ನು ಕೇವಲ ಅಂಕಿಅಂಶಗಳ ಸ್ವರೂಪದಲ್ಲಿ ನೋಡಬೇಕೇ ಅಥವಾ ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುವಂಥ ಕೆಲಸ ಮಾಡಿದ್ದರ ಆಧಾರದಲ್ಲಿ ವಿಶ್ಲೇಷಿಸಬೇಕೇ ಎಂಬ ಪ್ರಶ್ನೆ ಎದುರಾದಾಗ, ಅವೆರಡೂ ಅಂಶಗಳೂ ಸಹಾ ಮುಖ್ಯವೇ ಆದರೂ ಅಂಕಿ ಸಂಖ್ಯೆಗಳ ನಿರ್ಜೀವ ದಾಖಲೆಗಳಿಗಿಂತ ಜೀವವಿರುವ ಮನುಷ್ಯನ ಮನದಲ್ಲಿ ಶಾಶ್ವತವಾಗಿ ಉಳಿಯುವ ಸಾಧನೆಯೇ ನಿಜವಾದ ದಾಖಲೆ ಎಂಬುದು ನಿರ್ವಿವಾದ.

ಇನ್ನೂ ಸರಳವಾಗಿ ಹೇಳುವುದಾದರೆ, ಯಾವುದೇ ಸಾಧಕನೊಬ್ಬನ ಸಾಧನೆಯ ಹಾದಿ ತನ್ನ ಉದ್ದೇಶಿತ ಗುರಿಯೆಡೆಗೆ , ಬದ್ದತೆಯಿಂದ ಎಲ್ಲಾ ಅಡೆತಡೆಗಳನ್ನು ದಾಟುತ್ತಾ ದಾಖಲೆಯ ಯಾವ ಹಂಗೂ ಇಲ್ಲದೇ ನಿರಂತರವಾಗಿ ಸಾಗುತ್ತಿದ್ದರೆ, ದಾಖಲೆಗಳು ತಾವೇ ತಾವಾಗಿ ಸೃಷ್ಟಿಯಾಗಬಲ್ಲವು. ಅಂತಹ ದಾಖಲೆಗೆ ಮೌಲ್ಯ, ಬೆಲೆ ತೂಕ ಹಾಗೂ ಆಯಸ್ಸು ಹೆಚ್ಚು. ಇದಕ್ಕೆ ವಿರುದ್ಧವಾಗಿ ಕೇವಲ ಗುರಿ ಸಾಧಿಸುವ ದಾಖಲೆಗಳ ಮೇಲೆ ಕಣ್ಣಿಟ್ಟು ಅದಕ್ಕಾಗಿಯೇ ಪ್ರಯತ್ನಿಸುವವರ ದಾಖಲೆಗಳು ಕೇವಲ ಅಂಕಿಅಂಶಗಳ ದೃಷ್ಟಿಯಿಂದ ದಾಖಲೆಯೆನಿಸಿಕೊಂಡರೂ ಅದಕ್ಕೆ ಸ್ಪಷ್ಟ ಮೌಲ್ಯವಿರಲಾರದು. ಮಾನ್ಯ ದೇವರಾಜ ಅರಸುರವರದ್ದು ಉದ್ದೇಶಿತ ಸ್ಪಷ್ಟ ಗುರಿಯೆಡೆಗೆ ದಿಟ್ಟತನದಿಂದ ಸಾಗಿದ ಸಾಧನೆಯ ಹಾದಿ. ಅವರಿಗೆ ಯಾವ ದಾಖಲೆ ನಿರ್ಮಿಸುವ ಚಿಂತೆಯೂ ಇರಲಿಲ್ಲ. ಜನರಿಗೆ, ವಿಶೇಷವಾಗಿ ಬಡವರಿಗೆ ಒಳ್ಳೆಯದನ್ನು ಮಾಡುವ ಅವರ ಉದ್ದೇಶದಲ್ಲಿ ಸ್ಪಷ್ಟತೆ, ಕಾರ್ಯರೂಪಕ್ಕೆ ತರುವಲ್ಲಿ ಬದ್ಧತೆ ಇದ್ದುದರಿಂದಾಗಿ ದಾಖಲೆಗಳು ತಾವೇ ತಾವಾಗಿ ನಿರ್ಮಾಣಗೊಂಡವು ಅಷ್ಟೇ.

**ಹಾಗೇ ಇದನ್ನೂ ಗಮನಿಸಿ.**

ಕ್ರಿಕೆಟ್ ಲೋಕದಲ್ಲಿ ಲೆಜೆಂಡ್ ಸುನಿಲ್ ಗಾವಸ್ಕರ್ ಮತ್ತು ನಮ್ಮ ಕರ್ನಾಟಕದ ಗುಂಡಪ್ಪ ವಿಶ್ವನಾಥ್ ಇಬ್ಬರೂ ಸರ್ವ ಶ್ರೇಷ್ಠ ಬ್ಯಾಟ್ಸ್ ಮನ್ ಗಳೇ. ಆದರೆ ರನ್ ಗಳು, ಸೆಂಚುರಿಗಳು, ಟೆಸ್ಟ್ ಗಳ ಅಂಕಿ ಅಂಶಗಳ ದಾಖಲೆಗಳ ದೃಷ್ಟಿಯಿಂದ ಗಾವಸ್ಕರ್ , ವಿಶ್ವನಾಥ್‌ಗಿಂತ ತುಂಬಾ ಎತ್ತರದಲ್ಲಿದ್ದಾರೆ. ಆದರೆ ಗಾವಸ್ಕರ್ ವೈಯಕ್ತಿಕ ದಾಖಲೆಗಳ ಮೇಲೆಯೇ ಕಣ್ಣಿಟ್ಟು ಆಡಿದರೆ, ಜಿ.ಆರ್.ವಿ ಗೆ ವೈಯಕ್ತಿಕ ದಾಖಲೆಗಿಂತ ತಂಡದ ಹಿತಾಸಕ್ತಿಯೇ ಮುಖ್ಯವಾಗಿತ್ತು . ಹೀಗಾಗಿ ವಿಶ್ವನಾಥ್ ಗಾವಸ್ಕರ್ ಗಿಂತ ಕಡಿಮೆ ಶತಕ ಹೊಡೆದಿದ್ದರೂ ಅವರು ಶತಕ ಬಾರಿಸಿರುವ ಯಾವುದೇ ಟೆಸ್ಟ್ ಪಂದ್ಯಗಳಲ್ಲಿ ಭಾರತ ಎಂದೂ ಸೋತಿಲ್ಲ. ಅದೇ ಮಾತನ್ನು ಸುನಿಲ್ ರ ಸೆಂಚುರಿಗಳ ಬಗ್ಗೆ ಹೇಳಲಾಗದು. ತಂಡದ ಗೆಲುವೆಂಬುದು ಮುಖ್ಯವಾದರೆ ವಿಶ್ವಣ್ಣನದ್ದು ಸರ್ವಶ್ರೇಷ್ಠ ದಾಖಲೆ. ಅದೇ ದಾಖಲೆಗಾಗಿಯೇ ಆಡಿ ದಾಖಲೆಯೇ ಮುಖ್ಯವಾದರೆ ಗಾವಸ್ಕರ್ ರದ್ದು ದೊಡ್ಡ ದಾಖಲೆ.!

**ಹಾಗಾದರೆ ಯಾವ ದಾಖಲೆ ಶ್ರೇಷ್ಠ.... ನೀವೇ ನಿರ್ಧರಿಸಿ.!**

ರಾಜಕೀಯದ ವಿಚಾರಕ್ಕೆ ಬಂದಾಗ ನಾಡಿನ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುವಂತಹ ಆಡಳಿತ ನೀಡುವುದೇ ನಿಜವಾದ ದಾಖಲೆಯೇ ಹೊರತು ಅದು ನಿರ್ಧಾರವಾಗೋದು ಕೇವಲ ಅಂಕಿ ಸಂಖ್ಯೆಗಳ ಎತ್ತರ ತಗ್ಗಿನಿಂದಲ್ಲ. ನಿರ್ಜೀವ ಅಂಕಿ ಸಂಖ್ಯೆಗಳಲ್ಲಿ ದಾಖಲೆ ಬರೆದು ಆ ಕಾರಣಕ್ಕಾಗಿ ಜನರು ಇತಿಹಾಸದ ಪುಟಗಳಲ್ಲಿ ನೆನಪಿಸಿಕೊಳ್ಳುವಂತಾಗುವ ಬದಲು, ಮಾನವ ಕಲ್ಯಾಣಕ್ಕಾಗಿ, ಸಾಮಾಜಿಕ ಬದ್ದತೆಗಾಗಿ, ಸಂವಿಧಾನದ ಉಳಿವಿಗಾಗಿ, ಸಮ ಸಮಾಜದ ನಿರ್ಮಾಣಕ್ಕಾಗಿ, ನಾಡಿನ ಎಲ್ಲಾ ಪ್ರಜೆಗಳ ಅಭ್ಯುದಯಕ್ಕಾಗಿ, ಒಟ್ಟಾರೆ ರಾಜ್ಯದ ಅಭಿವೃದ್ಧಿಗಾಗಿ ಸ್ವಚ್ಛ ಆಡಳಿತ ನೀಡಿ ಜೀವವಿರುವವರ ಹೃದಯಾಳದಲ್ಲಿ ಶಾಶ್ವತವಾದ ನೆನಪುಗಳನ್ನು ಒತ್ತಿ ದಾಖಲಾಗುವುದಿದೆಯಲ್ಲಾ... ಅದೇ ನಿಜವಾದ ದಾಖಲೆ.

ಕರುನಾಡನ್ನಾಳುತ್ತಿರುವ ದೀರ್ಘಾವಧಿ ಸಿ.ಎಂ. ಶ್ರೀಯುತ ಸಿದ್ದರಾಮಯ್ಯನವರಿಗೆ ಅಭಿನಂದನೆಗಳು.

**ಮರೆಯುವ ಮುನ್ನ**

"ಎಷ್ಟು ದಿನ ಬದುಕಿದಿರಿ ಎಂಬುದು ಮುಖ್ಯವಲ್ಲ, ಹಾಗೆ ಬದುಕಿದ್ದ ಅಷ್ಟೂ ದಿನ ಹೇಗೆ ಬಾಳಿದಿರಿ" ಎಂಬುದು ಮುಖ್ಯ . ಹಾಗೆಯೇ ಎಷ್ಟು ದಿನ ಆಡಳಿತ ನಡೆಸಿದಿರಿ ಎಂಬುದಕ್ಕಿಂತ ಆಡಳಿತ ನಡೆಸಿದ ಅಷ್ಟೂ ದಿನ ಹೇಗೆ ಆಡಳಿತ ನಡೆಸಿದಿರಿ , ಅದರಿಂದ ರಾಜ್ಯದ ಜನರಿಗೆ ಎಷ್ಟು ಉಪಕಾರವಾಯಿತು "..ಎಂಬುದೇ ಮುಖ್ಯ.


ಅಂಕಿ ಸಂಖ್ಯೆಗಳ ದೃಷ್ಟಿಯಿಂದ ಸಿ.ಎಂ ಆಗಿ ದೇವರಾಜ ಅರಸು ರವರ ಆಡಳಿತದ ದಿನಗಳ ದಾಖಲೆಯನ್ನು ದಾಟಿ ಮುನ್ನಡೆದಿರುವ ಸಿದ್ದರಾಮಯ್ಯನವರು, ಅದೇರೀತಿ ಅರಸುರವರಲ್ಲಿ ಸುಪ್ತವಾಗಿದ್ದ ಸಾಮಾಜಿಕ ಬದ್ದತೆ, ಪ್ರಾಮಾಣಿಕ ಇಚ್ಛಾಶಕ್ತಿ, ತಾನು ನಂಬಿದ ಸಿದ್ಧಾಂತಕ್ಕಾಗಿ ಎಂಥವರನ್ನಾದರೂ ಎದುರು ಹಾಕಿಕೊಳ್ಳಬಲ್ಲ ಛಾತಿ, ಕುಗ್ಗದ ಆತ್ಮಸ್ಥೈರ್ಯ.. ಈ ಮೌಲಿಕ ಅಂಶಗಳ ದಾಖಲೆಯನ್ನು ದಾಟಲು ಪ್ರಾಮಾಣಿಕವಾಗಿ ಮುನ್ನಡೆದು "ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು" ತತ್ವದಡಿಯಲ್ಲಿ ಆಡಳಿತ ನೀಡಿ, ಎಲ್ಲ ಜಾತಿ, ಧರ್ಮ ವರ್ಗಗಳ ಮೆಚ್ಚುಗೆ ಗಳಿಸಿ ರಾಜ್ಯದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದೇ ಆದರೆ ...ಆಗ ಮಾತ್ರ ಅರಸುರವರ ದಾಖಲೆಯನ್ನು ನಿಜಾರ್ಥದಲ್ಲಿ ಸಿದ್ದು ಮುರಿಯಬಹುದು, ಏಕೆಂದರೆ.....

" ದಾಖಲೆಗಳಿರುವುದೇ ಮುರಿಯಲಿಕ್ಕಾಗಿ....."

## ಪದ ಬಂಧ

ಜ್ಯೋತಿ ರಾಜೇಶ್





### ಎಡದಿಂದ ಬಲಕ್ಕೆ

1.ಮುಕುಂದನ ಮುಡಿಗೇರಿದ ಕಿರೀಟ..... (3)
3. ಸ್ನಾನವನ್ನು ಹೀಗೆ ಹೇಳಿ.....(2)
4. ವಸ್ತುವಿನ ಬೆಲೆಯನ್ನು ಹೀಗೂ ಹೇಳಬಹುದು....(2)
5. ಕೂ.... ಎಂದುಲಿದ ಹಕ್ಕಿಯ ಕೂಗಿದು.... (3)
7. ಶುಭವಾಗಲಿ ಎಂಬ 'ಬಯಕೆ' ಇದು...... (3)
8. ಇದು ಹಿಂದುಮುಂದಾದ ಸಮಾಚಾರ..... (2)
9. ಪಾಯಸವನ್ನು ನೋಡಿ ವಾಯಸ ಕೂಗಿದ್ದು ಹೀಗೆ...(2)
11. ಇವನು 'ಪರಿಣಿತ'ನೆಂಬುದರಲ್ಲಿ ಯಾವ ಅನುಮಾನವೂ ಇಲ್ಲ..... (4)
13. ಇದು ಮುಂಜಾನೆ ಸುರಿದ ತುಷಾರ.....(2)
15. ಕೈಲಾಸವನ್ನು ಇದರಲ್ಲೇ ಕಾಣಬೇಕಂತೆ.....(3)
16.'ಜಾಗರೂಕತೆಯಿಂದಿರು' ಅಂತ ಹೀಗೆ ಹೇಳಿ...(2)
18. ....... ಇದು ನಿಮ್ಮ ಆಯ್ಕೆಗೆ ಬಿಟ್ಟ ಪದ........ (5)
19.ತಿರುಗುಮುರುಗಾದ ಈ ಎಣ್ಣೆ ತಿಂಡಿ, ಸಾಗುವಿನ ಗೆಳೆಯ....(2)
21.ಅಡೆತಡೆಯಿಲ್ಲದ್ದು ರಾಗ ಹಾಡುತ್ತಿದೆ.....(3)
22. ಎರೆಡಕ್ಷರದ 'ತಂತಿಸಂದೇಶ'...... (2)
23. ಸತ್ಯವಂತನನ್ನು ಎಡಬಿಡದೆ ಕಾಡಿದವನಿವನು.....(4)
25. ಇದು ಪಾತರಗಿತ್ತಿಯ ಶೋಧನೆಯೆ?..... (2)
26. ನಾಗರೀಕರು ಹೋಗಬಹುದಾದ ಸ್ವರ್ಗ...... (2)
28. ಪರ್ವತದ ಅತ್ಯಂತ ಎತ್ತರದ ತುದಿಯಲ್ಲಿ ಶಿರವಿದೆ..... (3)
29. ಇದು ಕಾಣದಂತೆ ತಂದ ಉಡುಗೊರೆಯೆ?.... (3)
31. ನಗರದಲ್ಲಿರುವ ಮಾನವನೀತ.....(2)
32. ಇದು ಉತ್ತರಕರ್ನಾಟಕದವರ ರಜೆ...... (2)
33. ಸುಳ್ಳಲ್ಲ.....ಹೀಗೊಂದು ಲೋಕವಿದೆಯಂತೆ....(3)

### ಮೇಲಿನಿಂದ ಕೆಳಕ್ಕೆ.....

1. ಬುದ್ಧಿವಂತ ಆಡಳಿತಗಾರನಾದ ರಾಜಕಾರಣ ಪಟು..... (3)
2. ಎಲ್ಲ ಕೂಡಿದ ಗುಂಪು ತಲೆಕೆಳಗಾಗಿದೆ..... (2)
3. ರಾಶಿಗಳಲ್ಲಿ ಕೊನೆಯದಿದು..... (2)
4. ಈ ಕೆಲಸ ಮಾಡುವ 'ವಿಧಾನ' ಹೀಗೆ ..... (2)
6. ಈ ನೆಲದಲ್ಲಿ ಮೀನು ಇದೆ....(3)
7. ಗಗನದಲ್ಲಿರುವ ಎಲ್ಲವನ್ನೂ ಹೀಗೆ ಕರೆಯಬಹುದೆ.... (5)
10. ಪಾರದರ್ಶಕವಾದ ವಸ್ತು..... (2)
12. ನಮ್ಮೆಲ್ಲರ ಪ್ರೀತಿಯ ಸಾಹಸಸಿಂಹ.....(5)
13. ಇದು ಮಂಕ ತಂದ ಬುಟ್ಟಿ.....(3)
14. ಶೀರ್ಷಾಸನ ಹಾಕಿದ ಯುಗಳವೇ ಇದು....?(3)
17.ಬಾಯಿ ಮೊಸರಾಗಲು ಕೈಗೆ ಇದು ಮೆತ್ತಬೇಕು.(3)
18. 'ಮುಂದುವರೆಯುವ ಅಭಿಪ್ರಾಯ'ವನ್ನು ಹೀಗೆ ಹೇಳಬಹುದೆ......(5)
20. ಎರೆಡಕ್ಷರದ ಆರಾಧನೆ.....(2)
22. ಥಳಥಳಿಸುತ್ತಿರುವ ಮಾಂಗಲ್ಯವಿದು....(2)
24. ಮೂರು ಜಡೆಗಳು ಸೇರಿದ್ದು, ಕಾದಂಬರಿಗಾರ್ತಿಯ ಹೆಸರಾಯಿತೆ....(3)
27. ಕಳವಳದಲ್ಲಿದ್ದಾಗ ತಿಂದ ಊಟ/ತಾಂಬೂಲವಿದು....(3)
28.ಶಿಬಿರದಲ್ಲಿರುವ ತಲೆ.....(2)
29. ಕಾಟ ಕೊಡುತ್ತಿರುವ ಕಾಡುಕೋಣವಿದು.....(2)
30. ತುರಿಸುವ ಕೆಲಸವೇ ಈ ಸೊಪ್ಪಿನದು...?(2)

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,